ಶ್ಲೋ॥ ಸಿಂಹಗೋಮೇಷಪಾಥೋನಧನುಸ್ತೌಲಿಘಟೇಷುಚ । ರವ್ಯಾದೇರ್ಮೂಲಯುಕ್ಷಂಚರವಿರ್ಬ್ರಾಣೋದಿಶಸ್ತಥಾ। ತ್ರಿಪಂಚವಿಂಶತಿಸ್ಸಂಖ್ಯಾಭಾಗೋಮೂಲತ್ರಿಕೋಣಗಃ ॥

ಟೀ॥ ಸೂರ್ಯನಿಗೆ ಸಿಂಹದಲ್ಲಿ ೨೦ ಭಾಗಗಳು ಮೂಲತ್ರಿಕೋಣ ೧೦ ಭಾಗಸ್ವಕ್ಷೇತ್ರ, ಚಂದ್ರನಿಗೆ ವೃಷಭದಲ್ಲಿ ೩ ಭಾಗವುಚ್ಚ ಮಿಕ್ಕ ೨೭ ಭಾಗ ಮೂಲತ್ರಿಕೋಣ, ಅಂಗಾರಕನಿಗೆ ಮೇಷದಲ್ಲಿ ೧೨ ಭಾಗ ಮೂಲತ್ರಿಕೋಣ, ಮಿಕ್ಕ ಭಾಗಗಳು ಸ್ವಕ್ಷೇತ್ರಗಳು, ಬುಧನಿಗೆ ಕನ್ಯೆಯಲ್ಲಿ ೧೬-೧೭-೧೮-೧೯-೨೦ ಈ ೫ ಭಾಗಗಳು ಮೂಲತ್ರಿಕೋಣಗಳು ಬೃಹಸ್ಪತಿಗೆ ಧನೂರಾಶಿಯಲ್ಲಿ ೧೦ ಭಾಗಗಳು ಮೂಲತ್ರಿಕೋಣಗಳು, ಶುಕ್ರನಿಗೆ ತುಲೆಯಲ್ಲಿ ೧೫ ಭಾಗ ಮೂಲತ್ರಿಕೋಣ, ಶನಿಗೆ ಕುಂಭ ರಾಶಿಯಲ್ಲಿ ೨೦ಭಾಗ ಮೂಲತ್ರಿಕೋಣವೆಂದು ತಿಳಿಯತಕ್ಕದ್ದು.

ಮಿತ್ರಶತ್ರು ಸಮಗ್ರಹಗಳು.

ಶ್ಲೋ॥ ಶತ್ರೂಮಂದಸಿತೌಸಮಶ್ಶಶಿಸುತೋಮಿತ್ರಾಣಿಶೇಷಾರವೇ। ಸ್ತೀಕ್ಷ್ಣಾಂಶುರ್ಹಿಮರಶ್ಮಿ ಜಶ್ಚಸುಹೃದೌ ಶೇಷಾಸ್ಸಮಾ ಸ್ಶೀತಗೋಃ ॥ ಜೀವೇಂದೂಷ್ಣಕರಾಃಕುಜಸ್ಯಸುಹೃತೋಜ್ಞೋರಿಸ್ಸಿತಾರ್ಕೀಸಮೌ। ಮಿತ್ರೌಸೂರ್ಯಸಿತೌಬುಧಸ್ಯಹಿಮಗುಶ್ಶತ್ರುಸ್ಸಮಾಶ್ಚಾಪರೇ ॥

ಟೀ॥ ಸೂರ್ಯನಿಗೆ ಶನಿ ಶುಕ್ರರು ಶತ್ರುಗಳು, ಬುಧನು, ಸಮನು, ಕು

ಜಚಂದ್ರಗುರು, ಇವರುಗಳು ಮಿತ್ರರು. ಚಂದ್ರನಿಗೆ ಸೂರ್ಯಬುಧರುಮಿತ್ರರು ಕುಜ ಗುರು ಶುಕ್ರ ಶನಿಗಳು ಸಮರು. ಕುಜನಿಗೆ ಬೃಹಸ್ಪತಿ ಚಂದ್ರ ಸೂರ್ಯ, ಇವರುಗಳು ಮಿತ್ರರು. ಬುಧನು ಶತ್ರುವು, ಶುಕ್ರ ಶನಿಗಳು ಸಮರು. ಬುಧನಿಗೆ ಸೂರ್ಯ ಶುಕ್ರರು ಮಿತ್ರರು. ಚಂದ್ರನು ಶತ್ರುವು, ಮಿಕ್ಕ ಕುಜ ಗುರು ಶನಿಗಳು ಸಮರೆಂದು ತಿಳಿಯತಕ್ಕದ್ದು.

ಶ್ಲೋ॥ ಸೂರೇಸ್ಸ್ವಸ್ಯಸಿತಾವರೀರವಿಸುತೋಮಧ್ಯೌಪರೇತ್ವನ್ಯಥಾ
ಸೌಮ್ಯಾರ್ಕೀಸುಹೃದೌಸಮೌಕುಜಗುರೂಶುಕ್ರಸ್ಯಶೇಷಾವರೀ॥
ಶುಕ್ರಜ್ಞೌಸುಹೃದೌಸಮಸ್ಸುರಗುರು ಸ್ಸೌರಸ್ಯಚಾನ್ಯೇರಯಃ
ಯೇಪ್ರೋಕ್ತಾಸ್ಸುಹೃದಸ್ತ್ರಿಕೋಣಭವನಾತೇಮೀಮಯಾಕೀರ್ತಿತಾಃ॥

ಟೀ॥ ಬೃಹಸ್ಪತಿಗೆ ಬುಧ ಶುಕ್ರರು ಶತ್ರುಗಳು, ಶನಿಸಮನು, ರವಿ ಚಂದ್ರ ಕುಜರು ಮಿತ್ರರು. ಶುಕ್ರನಿಗೆ ಬುಧ ಶನಿಗಳು ಮಿತ್ರರು, ಕುಜ ಗುರುಗಳು ಸಮರು, ರವಿ ಚಂದ್ರರು ಶತ್ರುಗಳು. ಶನಿಗೆ ಶುಕ್ರ ಬುಧರು ಮಿತ್ರರು, ಬೃಹಸ್ಪತಿಯು ಸಮನು, ರವಿಚಂದ್ರ ಕುಜರು ಶತ್ರುಗಳೆಂಬದಾಗಿ ಗ್ರಹಗಳ ಮೂಲತ್ರಿಕೋಣ ರಾಶಿಗಳನ್ನು ಹಿಡಿದು ಪೂರ್ವೀಕರು ಹೇಳಿದ ಶತ್ರುಮಿತ್ರ ಗ್ರಹಗಳು ಇಲ್ಲಿ ನನ್ನಿಂದ ಹೇಳಲ್ಪಟ್ಟಿತು.

ಅನಂತರ ನವಗ್ರಹಗಳ ಕ್ರೂರ, ಸೌಮ್ಯ, ಪುರುಷ, ಸ್ತ್ರೀನಪುಂಸಕಸಂಜ್ಞೆಗಳನ್ನು, ಜಾತಿ ನಿರ್ಣಯವನ್ನೂ ತಿಳಿಸುತ್ತಾನೆ.

ಶ್ಲೋ॥ ಕ್ರೂರಾಭಾನುತಮಶ್ಶನಿಧ್ವಜಕುಜಾಶ್ಯಕಾರ್ಯಸೌ
ಮ್ಯೇಂದವಸ್ಸೌಮ್ಯಾಸ್ತ್ರಿಪುರುಷಾಃಕುಜಾರ್ಕಗುರವಃರಾಹ್ವಿಂದು
ಶುಕ್ರಾಃಸ್ತ್ರಿಯಃ।ತಚ್ಛೇಷಾಸ್ತುನಪುಂಸಕಾಃಗುರುಭೃಗೂವಿಪ್ರಾ
ಕುಜಾರ್ಕೌನೃಪಾವೈಶ್ಯೌಚಂದ್ರ ಬುಧೌತದನ್ಯಕುಲಜೋಮಂ
ದಸ್ತುವರ್ಣೇಶ್ವರಃ॥ ಬುಧಃಪಾಪಯುತಃಪಾಪಃಕ್ಷೀಣಚಂದ್ರಸ್ತ
ಥೈವಚ ॥

ಟೀ॥ ಸೂರ್ಯನು, ರಾಹು, ಶನಿ, ಕೇತು, ಕುಜನು, ಈ ೫ ಗ್ರಹಗಳು ಕ್ರೂರಗಳು, ಅಂದರೆ ಪಾಪಗ್ರಹಗಳು. ಶುಕ್ರನು ಗುರು, ಬುಧನು, ಚಂದ್ರನು, ಈ ೪ ಗ್ರಹಗಳು ಸೌಮ್ಯರು, ಅಂದರೆ ಶುಭಗ್ರಹಗಳು. ಇಲ್ಲಿ ವಿಶೇಷವೇನೆಂದರೆ, ಶುಭಗ್ರಹಗಳಾಗಿ ಹೇಳಲ್ಪಟ್ಟ ಬುಧ ಚಂದ್ರರೊಳು ಪಾಪಗ್ರಹಗಳೊಂದಿಗೆ ಸೇರಿದ ಬುಧನು, ಕ್ಷೀಣವಾದ

ಚಂದ್ರನು, ಇವರಿಬ್ಬರು ಪಾಪಗ್ರಹಗಳಾಗುತ್ತಾರೆಂದು ತಿಳಿಯುವದು. ಕುಜನು, ಸೂರ್ಯನು, ಬೃಹಸ್ಪತಿಯು, ಈ ೩ ಪುರುಷ ಗ್ರಹಗಳು. ರಾಹುವು, ಚಂದ್ರನು, ಶುಕ್ರನು, ಈ ೩ ಸ್ತ್ರೀ ಗ್ರಹಗಳು. ಬುಧನು, ಶನಿಯು, ಕೇತು, ಈ ೩ ನಪುಂಸಕ ಗ್ರಹಗಳು. ಗುರು, ಶುಕ್ರನು ಈ ೨ ಬ್ರಾಹ್ಮಣ ಜಾತಿ ಗ್ರಹಗಳು. ಅಂಗಾರಕನು, ಸೂರ್ಯನು ಈ ೨ ಕ್ಷತ್ರಿಯಜಾತಿ ಗ್ರಹಗಳು. ಚಂದ್ರನು, ಬುಧನು, ಈ ೨ ವೈಶ್ಯಜಾತಿ ಗ್ರಹಗಳು, ಶನಿಯು ಶೂದ್ರಜಾತಿ ಗ್ರಹವು. ಈ ಮೇರೆ ಗ್ರಹಗಳ ವರ್ಣಗಳನ್ನು ತಿಳಿಯತಕ್ಕದ್ದು.

ನವಗ್ರಹಗಳ ಧಾತ್ವಾದಿ ವರ್ಣಗಳು.

ಶ್ಲೋ॥ ಬೃಹಜ್ಜಾತಕೇ ॥ ರಕ್ತಶ್ಯಾಮೋಭಾಸ್ಕರೋಗೌರಇಂದು ರ್ನಾತ್ಯುಚ್ಚಾಂಗೋರಕ್ತಗೌರಶ್ಚಶುಕ್ರಃ । ದೂರ್ವಾಶ್ಯಾಮೋ ಜ್ಞೋಗುರುಗೌರಗಾತ್ರಃ॥ ಶ್ವೇತಶ್ಶುಕ್ರೋಭಾಸ್ಕರಃಕೃಷ್ಣದೇಹಃ॥

ಟೀ॥ ಸೂರ್ಯನು ಕೆಂಪು ಕಪ್ಪು ಮಿಶ್ರವಾದ ಬಣ್ಣವುಳ್ಳವನು, ಚಂದ್ರನು ಬಿಳೀ ಬಣ್ಣವುಳ್ಳವನು, ಅಂಗಾರಕನು ಬಹಳ ಉದ್ದವಲ್ಲದೆ ಬಿಳಪು ಕೆಂಪು ಮಿಶ್ರವಾದ ಬಣ್ಣವುಳ್ಳವನು, ಬುಧನು ಗರಿಕೆಯಂತೆ ಹಸರು ಬಣ್ಣವುಳ್ಳವನು, ಬೃಹಸ್ಪತಿ ಹಳದೀ ಬಣ್ಣವುಳ್ಳವನು, ಶುಕ್ರನು ಬಿಳೀ ಬಣ್ಣವುಳ್ಳವನು, ಶನಿಯು ಕಪ್ಪು ಬಣ್ಣವುಳ್ಳವನು.

ಶ್ಲೋ॥ರಾಹುಸ್ತುಧೂಮ್ರವರ್ಣಶ್ಚ।ಚಿತ್ರವರ್ಣೋಧ್ವಜಸ್ಮೃತಃ॥

ಟೀ॥ ರಾಹುವು ಧೂಮ್ರವರ್ಣವುಳ್ಳವನು, ಕೇತುವು ಚಿತ್ರವರ್ಣವುಳ್ಳವನೆಂದು ತಿಳಿಯುವದು.

ಶ್ಲೋ ॥ ತ್ರಿದಶತ್ರಿಕೋಣಚತುರಶ್ರಸಪ್ತಗಾನವಲೋಕಯಂತಿಚರಣಾಭಿವೃದ್ಧಿತಃ॥ ರವಿಜಾಮರೇಡ್ಯರುಧಿರಾಃಪರೇಚಯೇ। ಕ್ರಮಶೋಭವಂತಿಸಕಲೇಕ್ಷಣಾಧಿಪಾಃ॥

ಟೀ॥ ಶನಿಯುತಾನಿರುವ ರಾಸಿಗೆ ೩-೧೦ನೇ ರಾಸಿಗಳನ್ನು ಗ್ರಹಗಳನ್ನು ಪಾದದೃಷ್ಟಿಯಿಂದ ನೋಡುವನು, ಗುರುವು ತಾನಿರುವರಾಸಿಗೆ ೫-೯ ರಾಸಿಗಳನ್ನು ಗ್ರಹಗಳನ್ನು ಅರ್ಧದೃಷ್ಟಿಯಿಂದ ನೋಡುವನು, ಅಂಗಾರಕನು ತಾನು ಯಿರುವರಾಸಿಗೆ ೪-೮ ನೇ ರಾಸಿಗಳನ್ನು ತ್ರಿಪಾದದೃಷ್ಟಿಯಿಂದ ನೋಡುವನು, ಯಿವು ವಿಶೇಷದೃಷ್ಟಿಗಳು, ಆದರೆ ಸರ್ವಗ್ರಹಗಳು ತಾವುಯಿರುವ ರಾಸಿಗಳಿಗೆ ೭ನೇ ರಾಸಿಗಳನ್ನೇ ನೋಡುವರು.

ಕುರುಡು-ಕಿವುಡು-ಮೊಂಡಿ ರಾಸಿಗಳು.

ಶ್ಲೋ॥ ಮೇಷಾದಿಚಾಂಧಕಂಷಟ್ಕಂಚತ್ವಾರೋಬಧಿರಾಸ್ತಥಾ। ದ್ವೌಚಪಂಗೂಚವಿಜ್ಞೇಯೌತದ್ಭೇದಾಃಪರಿಕೀರ್ತಿತಾಃ ॥

ಟೀ॥ ಮೇಷ ಮೊದಲು ೬ ರಾಶಿಗಳು ಕುರುಡು ರಾಸಿಗಳು, ಅದರ ತರುವಾಯು ೪ ರಾಶಿಗಳು ಕಿವುಡು ರಾಸಿಗಳು, ಅದರ ತರುವಾಯು ೨ ಕುಂಟರಾಶಿಗಳೆಂದು ತಿಳಿತಕ್ಕದ್ದು. ಅಂದರೆ ಮೇಷ ಮೊದಲು ಕನ್ಯಾರಾಶಿವರಿಗೆ ಕುರುಡು ರಾಶಿಗಳು, ತುಲಾಹಿಡಿದು ಮಕರವರಿಗೂ ೪ ರಾಶಿಗಳು ಕಿವುಡು ರಾಶಿಗಳು, ಕುಂಭ ಮೀನ ಇವೆರಡೂ ಕುಂಟ ರಾಶಿಗಳೆಂದು ತಿಳಿಯು ತಕ್ಕದ್ದು.

ಶ್ಲೋ॥ ಅಜೋವೃಷೋಮೃಗೇಂದ್ರಶ್ಚ ಅರ್ಧರಾತ್ರೌಮಹಾಂಧಕಾಃ ॥
ಯುಗ್ಮಾಂಗನಾ ಕುಳೀರಾಶ್ಚ ಮಧ್ಯಾಹ್ನೇಚಾಂಧಕಾಸ್ಮೃತಾಃ ।
ಇತ್ಯೇವಂಕಾಲಭೇದೇನಶುಭದಾಶ್ಚಪ್ರಕೀರ್ತಿತಾಃ ॥

ಟೀ॥ ಮೇಷ, ವೃಷಭ, ಸಿಂಹ, ಈ ೩ ರಾಶಿಗಳು ಅರ್ಧ ರಾತ್ರಿಯಲ್ಲಿ ಕುರುಡು ರಾಶಿಗಳು. ಮಿಥುನ, ಕನ್ಯಾ, ಕರ್ಕಾಟಕ ಈ ೩ ರಾಶಿಗಳು ಮಧ್ಯಾನ್ಹ ಕಾಲದಲ್ಲಿಯೂ ಕುರುಡು ರಾಶಿಗಳು, ಇವೆಲ್ಲವು ಕಾಲಭೇದದಿಂದಸುಖಕರಗಳೆಂದು ತಿಳಿಯು ತಕ್ಕದ್ದು.

ಶ್ಲೋ॥ ತುಲಾಚವೃಶ್ಚಿಕಶ್ಚೈವಬಧಿರೌಚಾಪರಾಹ್ಣಕೈ। ರಾತ್ರೌಚಬಧಿರೌಪ್ರೋಕ್ತೌಮಕರಶ್ಚಧನುರ್ಗ್ರಹಂ ॥ ಉಭಯೋಸ್ಸಂಧ್ಯಯೋಃಪಂಗೂ । ಕುಂಭಮೀನೌಪ್ರಕೀರ್ತಿತಾಃ ॥

ಟೀ॥ ತುಲಾವೃಶ್ಚಿಕಗಳು ಮಧ್ಯಾನ್ಹದಲ್ಲಿ ಕುರುಡು ರಾಶಿಗಳು, ಮಕರ ಧನುಸ್ಸುಗಳು ರಾತ್ರಿಯಲ್ಲಿ ಕಿವುಡು, ಕುಂಭ ಮೀನರಾಶಿಗಳು ಬೆಳಿಗ್ಯೆ ಮತ್ತು ಸಾಯಂಕಾಲದಲ್ಲಿ ಕೂಡಾ ಕುಂಟ ರಾಶಿಗಳೆಂದು ತಿಳಿಯುವದು.

ಷಡ್ವರ್ಗ ಲಕ್ಷಣಗಳು.

ಶ್ಲೋ॥ ತ್ರಿಂಶದ್ಭಾಗಾತ್ಮಕಂಲಗ್ನಂಹೋ ರಾತಸ್ಯಾರ್ಧಮುಚ್ಯತೇ। ರಾಶಿತ್ರಿಭಾಗೋದ್ರೇಕ್ಕಾಣಃನವಾಂಶೋನವಭಾಗಕಃ॥ ದ್ವಾದಶಾಂಶೋದ್ವಾದಶಾಂಶಸ್ತ್ರಿಶಾಂಶೋಸ್ತ್ರಿಂಶಧಂಶಕಃ । ಷಡ್ವರ್ಗಲಕ್ಷಣಂಪ್ರೋಕ್ತಂಸರ್ವಲಗ್ನೇಷ್ವಯಂಕ್ರಮಃ ॥

ಟೀ॥ ಲಗ್ನವನ್ನು ೨ ಭಾಗ ಮಾಡಿದರೆ ಹೋರೆಯನ್ನಿಸಿಕೊಳ್ಳುತ್ತದೆ, ೩ಭಾಗ ಮಾಡಿದರೆದ್ರೇಕ್ಕಾಣವೆನ್ನಿಸಿಕೊಳ್ಳುತ್ತವೆ, ೯ ಭಾಗಮಾಡಿ

ದರೆ ನವಾಂಶವೆನ್ನಿಸಿಕೊಳ್ಳುತ್ತವೆ, ೧೨ ಭಾಗಮಾಡಿದರೆ ದ್ವಾದಶಾಂಶ ವೆನ್ನಿಸಿಕೊಳ್ಳುತ್ತವೆ, ೩೦ ಭಾಗಮಾಡಿದರೆ ತ್ರಿಂಶಾಂಶವೆನ್ನಿಸಿ ಕೊಳ್ಳು ತ್ತವೆ, ಏವಂಚ ಲಗ್ನಹೋರಾದ್ರೇಕ್ಕಾಣ, ನವಾಂಶ, ದ್ವಾದಶಾಂಶ, ತ್ರಿಂಶಾಂಶ, ಇವುಗಳು ಷಡ್ವರ್ಗಗಳಾಗುತ್ತವೆ,

ಹೋರಾದ್ರೇಕ್ಕಾಣಗಳು.

ಶ್ಲೋ॥ ಹೊರಾರ್ಕಚಂದ್ರಯೊರೊಜೆಯುಗ್ಮೆಭೆಚೇದ್ರಸೂರ್ಯ
ಯೊಃ। ಲಗ್ನಪಂಚನವಕ್ಷೇತ್ರನಾಥಾದ್ರೇಕ್ಕಾಣಪಾಃಕ್ರಮಾತ್ ॥

ಟೀ॥ ಓಜರಾಶಿಗೆಮೊದಲು ಅರ್ಧಸೂರ್ಯಹೋರೆ, ೨ನೇಅರ್ಧಚಂದ್ರ ಹೋರೆ, ಯುಗ್ಮರಾಸಿಗೆ ಮೊದಲು ಅರ್ಧಚಂದ್ರಹೋರೆ, ೨ನೇ ಅರ್ಧ ಸೂರ್ಯಹೋರೆ, ಈ ಮೇರೆ ೧೨ ರಾಸಿಗಳಿಗೆ ತಿಳಿಯತಕ್ಕದ್ದು.

ಶ್ಲೋ॥ ಚರೆಸ್ವಪುತ್ರನವಪಾಃಸ್ಥಿರೆಧರ್ಮಸ್ವಪುತ್ರಪಾಃ। ಪುತ್ರಧರ್ಮ
ಸ್ವಪಾದ್ವಿಸ್ವೆ ದ್ರೇಕ್ಕಾಣಸ್ಯಪ್ರಕೀರ್ತಿತಾಃ ॥

ಟೀ॥ ಆದ್ರೇಕ್ಕಾಣದಲ್ಲಿ ಚರರಾಸಿಗೆಮೊದಲುಭಾಗ ಲಗ್ನದ್ರೇಕ್ಕಾಣ, ೨ ನೇಭಾಗ ಪಂಚಮರಾಶಿ ದ್ರೇಕ್ಕಾಣ, ೩ನೇ ಭಾಗ ನವಮರಾಸಿ ದ್ರೇ ಕ್ಕಾಣ, ಸ್ಥಿರಲಗ್ನಕ್ಕೆ ಮೊದಲುಭಾಗ ನವಮರಾಸಿ ದ್ರೇಕ್ಕಾಣ, ೨ನೇ ಭಾಗ ಲಗ್ನದ್ರೇಕ್ಕಾಣ, ೩ನೇ ಭಾಗ ಪಂಚಮರಾಸಿ ದ್ರೇಕ್ಕಾಣ, ದ್ವಿಸ್ವ ಭಾವರಾಸಿಗೆ ಮೊದಲುಭಾಗ, ಪಂಚಮರಾಸಿ ದ್ರೇಕ್ಕಾಣ, ೨ ನೇ ಭಾಗ ನವಮರಾಸಿ ದ್ರೇಕ್ಕಾಣಮೂರನೇಭಾಗ ಲಗ್ನದ್ರೇಕ್ಕಾಣವೆಂದು ತಿಳಿ ಯತಕ್ಕದ್ದು.

ನವಾಂಶಕ್ರಮ.

ಶ್ಲೋ॥ ಮೇಷಸಿಂಹಧನುಷಿತ್ವಜಾದಯಸ್ತೌಳಿಕುಂಭಮಿಥುನೇತ್ರು
ಲಾದಯಃ । ಕನ್ಯಕಾಮೃಗವೃಷಮೃಗಾದಯೋಮೀನಕರ್ಕಟಾಳಿ
ಷುಕರ್ಕಟಾದಯಃ॥

ಟೀ॥ ಮೇಷ, ಸಿಂಹ, ಧನುಸ್ಸು, ಈ ಮೂರು ರಾಸಿಗಳಲ್ಲಿ ಮೇಷರಾ ಸಿ ಮೊದಲಾಗಿ ನವಾಂಶ ಭಾಗಗಳನ್ನು ಯೆಣಿಸಿಬೇಕು, ವೃಷಭ,ಮ ಕರರಾಶಿಗಳಲ್ಲಿ ಮಕರ ಮೊದಲಾಗಿ ಯೆಣಿಸತಕ್ಕದ್ದು. ಮಿಥುನ,ತು ಲಾ, ಕುಂಭ, ಈ ರಾಸಿಗಳಲ್ಲಿ ತುಲಾ ಮೊದಲಾಗಿ ಯೆಣಿಸತಕ್ಕದ್ದು,ಕ ಟಕ, ವೃಶ್ಚಿಕಮೀನರಾಸಿಗಳಲ್ಲಿ ಕಟಕರಾಸಿ ಮೊದಲಾಗಿ ಯೆಣಿಸತ ಕ್ಕದ್ದು.

ದ್ವಾದಶಾಂಶ ಕ್ರಮವು.

ಶ್ಲೋ॥ ಲಗ್ನಾದಿಷುದ್ವಾದಶಾಂಶಭವನಾದ್ವಾದಶಾಂಶಪಾಃ॥

ಟೀ॥ ಲಗ್ನ ಮೊದಲು ೧೨ ರಾಶಿಗೂ ೧೨ ಭಾಗಕೊಡತಕ್ಕದ್ದು, ಅಂದರೆ ಲಗ್ನವನ್ನು ೧೨ ಭಾಗವಮಾಡಿ ಲಗ್ನ ಮೊದಲು ೧-೧ ಭಾಗಕ್ಕೆ ೧-೧ ರಾಸಿಗಳಾಗಿನೋಡಿಕೊಳ್ಳತಕ್ಕದ್ದು.

ತ್ರಿಂಶಾಂಶಕ್ರಮವು.

ಶ್ಲೋ॥ ಕುಜರವಿಜಗುರುಜ್ಞಶುಕ್ರಭಾಗಾಃ ಪವನಸಮೀರಣಕೌ
ರ್ಪಿಜೂಕಲೇಯಾಃ । ಅಯುಜಿಯುಜಿತುತೇವಿಪರ್ಯಯಸ್ಥಾಃ ಶಶಿಭವ
ನಾಳಿಝಷಾಂತ್ಯಮೃಕ್ಷಸಂಧಿಃ ॥

ಟೀ॥ ಲಗ್ನ ಓಜರಾಸಿಯಾದರೆ ಅದರ ೩೦ ಭಾಗಗಳಲ್ಲಿ ಮೊದಲು ೫ ಭಾಗಕುಜನಿಗೂ, ತರುವಾಯ ೫ ಭಾಗ ಶನಿಗೂ, ತರುವಾಯ ೮ ಭಾಗ ಗುರುವಿಗೂ, ತರುವಾಯ ೭ ಭಾಗ ಬುಧನಿಗೂ, ತರುವಾಯ ೫ ಭಾಗ ಶುಕ್ರನಿಗೂ, ಕೊಡಬೇಕು. ಯುಗ್ಮರಾಸಿಯಾದರೆ ಮೊದಲು ೫ ಭಾಗ ಶುಕ್ರನಿಗೂ, ತರುವಾಯ ೭ ಭಾಗ ಬುಧನಿಗೂ, ತರುವಾಯ ೮ ಭಾಗ ಗುರುವಿಗೂ, ತರುವಾಯ ೫ ಭಾಗ ಶನಿಗೂ, ತರುವಾಯ ೫ ಭಾಗ ಅಂಗಾರಕನಿಗೂ ಕೊಡತಕ್ಕದ್ದು ಇದೇ ತ್ರಿಂಶಾಂಶವು.

ಪಕ್ಷಚ್ಛಿದ್ರಗಳು.

ಶ್ಲೋ॥ ಅಷ್ಟಮೀದ್ವಾದಶೀಷಷ್ಠೀಚತುರ್ಥೀಚಚತುರ್ದಶೀ । ಪಕ್ಷ
ಚ್ಛಿದ್ರಾಶ್ಚತಿಥಯಃಶುಭಕಾರ್ಯೇಷುನಿಂದಿತಾಃ ॥

ಟೀ॥ ಅಷ್ಟಮೀ, ದ್ವಾದಶೀ, ಷಷ್ಠೀ, ಚತುರ್ಥೀ, ಚತುರ್ದಶೀ, ಈ ತಿಥಿಗಳು ಪಕ್ಷಛಿದ್ರಗಳಾದ್ದರಿಂದ ಶುಭಕಾರ್ಯಗಳಲ್ಲಿ ಇವುಗಳನ್ನು ಬಿಡತಕ್ಕದ್ದು.

ಪಂಚಪರ್ವಗಳು.

ಶ್ಲೋ॥ ಕೃಷ್ಣಾಷ್ಟಮೀಚತುರ್ದಶ್ಯಪ್ಯಮಾವಾಸ್ಯಾಚಪೂರ್ಣಿ
ಮಾ। ಸಂಕ್ರಾಂತಿಃ ಪರ್ವತಿಥಯೋಮುನಿಭಿಃಪರಿಕೀರ್ತಿತಾಃ ॥

ಟೀ॥ ಕೃಷ್ಣಾಷ್ಟಮೀ, ಚತುರ್ದಶೀ, ಅಮಾವಾಸ್ಯಾ, ಪೂರ್ಣಿಮಾ, ಸಂಕ್ರಾಂತಿಯು ಇವುಗಳು ಪರ್ವತಿಥಿಗಳೆಂದು ಮುನಿಗಳು ಹೇಳಿದರು.

ಘಟಿಕಾಪ್ರಮಾಣವು.

ಶ್ಲೋ॥ ಯಾವತ್ಯಶ್ಚರಣಪ್ರಭಾಃಪ್ರತಿದಿನಂಮೇಷಾದಿಷಟ್ಸುಕ್ರ
ಮಾ । ಪೂಜ್ಯಾಶ್ಚೈವತುಲಾದಿಷಟ್ಸುಜಲಧಿತ್ರಿದ್ವ್ಯಕ್ಷರಾತಿಸಾ

ಬ್ಧಯಃ॥ ಅರ್ಧೀಕೃತ್ಯದಿನಪ್ರಮಾಣಘಟಿಕಾಸ್ಸಪ್ತಾಹತಾಃನಾಡಿಕಾ । ಸಾಪ್ತಾವರ್ತ್ಯಃಪರಿಪೂರ್ವಯೊಸ್ಥಿತಗತಾಯತ್ಪೂರ್ವಸಂಖ್ಯಾಭಿಧಾಃ ॥

ಟೀ॥ ಪ್ರತಿದಿನವು ಹಗಲಿನಲ್ಲಿ ಸೂರ್ಯನಿಗೆ ಎದುರಾಗಿ ನಿಂತುಕೊಂಡು ತಾನು ನಿಂತ ಅಡಿಯೊಂದಿಗೆ ತನ್ನ ನೆರಳು ಯೆಷ್ಟಡಿಯಾಗುತ್ತದೋ ಅದರ ಸಂಖ್ಯೆಯೊಂದಿಗೆ ಮೇಷಕ್ಕೆ ೪, ವೃಷಭಕ್ಕೆ ೩, ಮಿಥುನಕ್ಕೆ ೨, ಕಟಕಕ್ಕೆ ೨, ಸಿಹ್ಮಕ್ಕೆ ೩, ಕನ್ಯೆಗೆ ೪, ತುಲೆಗೆ ೪, ವೃಶ್ಚಿಕಕ್ಕೆ ೩, ಧನುಸ್ಸಿಗೆ ೨, ಮಕರಕ್ಕೆ ೨, ಕುಂಭಕ್ಕೆ ೩, ಮೀನಕ್ಕೆ ೪, ಈ ಮೇರೆ ಹೇಳಲ್ಪಟ್ಟಿರುವ ಧೃವಸಂಖ್ಯೆಗಳಲ್ಲಿ ಆಯಾ ತಿಂಗಳಿಗೆ ಆಗುವ ಧೃವವನ್ನು ಸದರಿ ಪಾದಛಾಯೆಯೊಂದಿಗೆ ಸೇರಿಸಿ ಪ್ರತ್ಯೇಕ ವಂದು ರಾಶಿಯಾಗಿ ಇಡಬೇಕು, ಮತ್ತು ಆಯಾ ತಿಂಗಳಿಗೆ ಅಹಃ ಪ್ರಮಾಣ ಘಟಿಕೆಗಳು ಎಷ್ಟು ಆಗುತ್ತದೋ ಅದರಲ್ಲಿ ಅರ್ಧವನ್ನು ೭ ರಿಂದ ಗುಣಿಸಿ, ಅದರ ಸಂಖ್ಯೆಯನ್ನು ಪ್ರತ್ಯೇಕ ಇಟ್ಟು ಇರುವ ಧೃವರಾಶಿಯಿಂದ ಭಾಗಿಸುವಾಗ ಯೆಷ್ಟು ಮಿಗುಲುತ್ತದೋ ಅಷ್ಟು ಘಳಿಗೆಗಳು ದಿನದ ಪೂರ್ವಾರ್ಧ ಅಪರಾರ್ಧಗಳಲ್ಲಿ ಕಳದವೆಂಬದಾಗಿಯೂ ತಿಳಿಯತಕ್ಕದ್ದು.

ಪಾದಛಾಯೆ ಅಡಿಗಳನ್ನು ನೋಡತಕ್ಕ ಬಗ್ಯೆ ವರರುಚಿಸೂತ್ರ ಇಲ್ಲಿ ಬರಿಯಲ್ಪಡುತ್ತದೆ ಹ್ಯಾಗಂದರೆ,=

ಮೇಷೆ ಗಿರಿಪು, ವೃಷಭೆ ಟಸಟ, ಮಿಥುನೆ ಕರಲಿ, ಕಟಕೆ ಕರುಬ, ಸಿಹ್ಮೆ ಕನಯು; ಕನ್ಯಾ ಕರುಬ, ತುಲಾ ಲನಶ, ವೃಶ್ಚಿಕ ದೂತಾಸ, ಧನುಷಿ ಸಿಜಲ, ಮಕರಂ ದದಾಸಿ, ಕುಂಭೆ ಸಿತಶ, ಮೀನೆ ಶುಭಗ, ಈ ೧೨ ವಾಕ್ಯಗಳಿಗೆ ತಾತ್ಪರ್ಯ. ಮೇಷ ಮಾಸಕ್ಕೆ ೧೦ ತೇದಿ ವರಿಗೆ ಒಂದು ಅಕ್ಷರ ಪ್ರಕಾರ ಕೆಳಗೆ ಸೂತ್ರದಲ್ಲಿ ಹೇಳಿದ ಮೂರಕ್ಷರಕ್ಕೆ ೧೦ ತೇದಿ ವರಿಗೂ, ಗಿ=ಎಂಬ ಅಕ್ಷರವು ೨ನೇ ೧೦ ತೇದಿವರಿಗೂ, ರಿ=ಯೆಂಬ ಅಕ್ಷರವು ೩ನೇ ೧೦ ತೇದಿ ವರಿಗೂ, ಪು-ಯೆಂಬ ಅಕ್ಷರವು ಗಿ–೩, ರಿ=೨, ಪು=೧, ಈ ಅಕ್ಷರ ಸಂಖ್ಯೆಯನ್ನು ನೋಡಿಕೊಳ್ಳತಕ್ಕದ್ದು. ಇಲ್ಲಿ ಹೇಳಲ್ಪಟ್ಟಿರುವ ಅಕ್ಷರಗಳ ಸಂಖ್ಯೆಗಳಿಗೆ ಅರ್ಥವು=ಕ ೧, ಅಂದರೆ ಒಂದೆ ೩ ರ ೨ ಅಂದರೆ, ಗ ೩,ಅಂದರೆ ೧೭ ಈ ಮೇರೆ ಯೆಲ್ಲಾ ಸಂಖ್ಯೆಗಳನ್ನು ನೋಡಿಕೊಳ್ಳತಕ್ಕದ್ದು,ಆದರೆ ಯಾವ ತಿಂಗಳಲ್ಲಿ ಪಾದಛಾಯೆ ನೋಡಬೇಕಾಗಿರುತ್ತದೋ ಆ ತಿಂಗಳನ್ನು ನೋಡಿಕೊಂಡು ಯಾವ ೧೦ ತೇದಿಗಳಿಗೆ ಯಾವ ಅಕ್ಷರ ಹೇಳಲ್ಪಟ್ಟದೆಯೋ ಆ ಅಕ್ಷರಕ್ಕೆ ಯೆಷ್ಟು ಹೆ

ಳಿಯಾಗುತ್ತವೋ ಅದರನ್ನು ಮೊತ್ತದಲ್ಲಿ ಅಡಿಯನ್ನು ಸಹ ಪಾದಚ್ಛಾಯೆ ಅಡಿಗಳಲ್ಲಿ ತೆಗದುಬಿಟ್ಟು ಉಳಿದ ಅಡಿಗಳನ್ನು ನೋಡಿಕೊಳ್ಳತಕ್ಕದ್ದು.

ಪಾದಚ್ಛಾಯೆ ಅಡಿಗಳಿಗೆ ಘಳಿಗೆ ನೋಡುವ ಕ್ರಮವು.

ಶ್ಲೋ॥ ನವತ್ಯಷ್ಟಪದಾದೇಕಾನಾಡಿಕಾತತ್ರವುಚ್ಯತೆ। ಪಂಚಾರ್ಧೆಚತ್ವಾರಿಂಶದ್ವೇಅಷ್ಟಾವಿಂಶತ್ರಯಸ್ತಥಾ॥ ಏಕೋನವಿಂಶಶ್ಚತ್ವಾರಿಚತುರ್ದಶ್ಯಾಂತುಪಂಚಕಂ। ದಶಾರ್ಧೆನಾಡಿಕಾಷಟ್ಕಅಷ್ಟಕೆಸಪ್ತನಾಡಿಕಾಃ॥ಷಟ್ಪದೆಚಾಷ್ಟಕಂವಿಂದ್ಯಾಚ್ಚತುರರ್ಧೆನವಸಕ್ತಂ। ತ್ರಿಕಾರ್ಧೆದಶಕಂವಿಂದ್ಯಾದ್ವ್ಯರ್ಧೆಏಕಾದಶಸ್ತಥಾ। ಏಕತ್ರಿಪಾದೆದ್ವಾದಶಕಂಪಾದಮೆಕಂತ್ರಯೋದಶ। ಚತುರ್ದಶಾರ್ಧಪಾದೆಪಕಶೂನ್ಯೆಪಂಚದಶಸ್ಮೃತಾಃ॥

ಟೀ॥ ೯೮ ಅಡಿಗೆ ೧ ಘಳಿಗೆ, ೪೫ ಅಡಿಗೆ ೨ ಘಳಿಗೆ, ೨೮ ಅಡಿಗೆ ೩ ಘಳಿಗೆ, ೧೯ ಅಡಿಗೆ ೪ ಘಳಿಗೆ, ೧೪ ಅಡಿಗೆ ೫ ಘಳಿಗೆ, ೧೦½ ಅಡಿಗೆ ೬ ಘಳಿಗೆ, ೮ ಅಡಿಗೆ ೭ ಘಳಿಗೆ, ೬ ಅಡಿಗೆ ೮ ಘಳಿಗೆ, ೪½ ಅಡಿಗೆ ೯ ಘಳಿಗೆ, ೩½ ಅಡಿಗೆ ೧೦ ಘಳಿಗೆ, ೨½ ಅಡಿಗೆ ೧೧ ಘಳಿಗೆ, ೧¾ ಅಡಿಗೆ ೧೨ ಘಳಿಗೆ, ೧ ಅಡಿಗೆ ೧೩ ಘಳಿಗೆ, ½ ಅಡಿಗೆ ೧೪ ಘಳಿಗೆ, ಶೂನ್ಯವಾದರೆ ೧೫ ಘಳಿಗೆ, ಆದರೆ ವರರುಚಿ ಮತಕ್ಕೂ ಈ ಗ್ರಂಥಕರ್ತನ ಮತಕ್ಕೂ ವಿಶೇಷ ವ್ಯತ್ಯಾಸವಿಲ್ಲವಾದ್ದರಿಂದಲೂ ಸುಲಭವಾಗಿರುವದ್ದರಿಂದ ಇಲ್ಲಿ ಬರೆಯಲ್ಪಟ್ಟಿತು.

ರಾತ್ರಿ ಕಾಲದಲ್ಲಿ ಘಟಿಕಾ ಪ್ರಮಾಣವನ್ನು ತಿಳಿದು ಕೊಳ್ಳುವದಕ್ಕೋಸ್ಕರ ನಕ್ಷತ್ರ ಸ್ವರೂಪಗಳನ್ನು ಹೇಳುತ್ತಾನೆ.

ವರರುಚಿ ವಾಕ್ಯಗಳು.

ತುರಗಮುಖಾಶ್ವಿನೀತ್ರೀಣಿ। ಭರಣಿಯೊನಿತ್ರೀಣಿ । ಕೃತ್ತಿಕಾಕ್ಷುರಾಷಟ್ಕಂ। ಶಕಟಂಪಂಚರೋಹಿಣೀ। ಮೃಗಶಿರಾಶೀರ್ಷತ್ರಯಂ। ಆದ್ರಾಪ್ರವಾಳಮೆಕಂ॥ ಪುನರ್ವಸುಕುಲಾಲಚಕ್ರಂಪಂಚ । ಸರಟಾಪುಷ್ಯವಿಾತ್ರೀಣಿ। ಆಶ್ಲೆಷಾಸರ್ಪಾಃರುತು । ಮಖಾಂದೋಳಿಕಾಪಂಚ। ಪುಬ್ಬಉತ್ತರನೆತ್ರದ್ವಯೋಃ। ಹಸ್ತಪಾಣಿನಾಪಂಚ। ಚಿತ್ತಾಮೌಕ್ತಿಕಮೆಕಂ। ಸ್ವಾತಿಮಾಣಿಕ್ಯಮೆಕಂ। ವಿಶಾಖಾ-ಕುಲಲಾಚಕ್ರಂಪಂಚ। ಅನೂರಾಧಾಜ್ಯೋಷ್ಟಾಂಗುಳಛತ್ರಾಕಾರತ್ರಯಂ।ಮೂಲಾಕುಪ್ಯತ್ರೈಲೀಪಂಚ। ಪೂರ್ವಾಷಾಢಉತ್ತರಾಷಾಢದ್ವೆದ್ವೆಚತುಷ್ಕಂ। ಶ್ರವಣಾ-ಬಾಣಾಕಾರತ್ರಯಂ। ಧನಿ

ಷ್ಠಾ ಶೀರ್ಷತ್ರಯಂ। ಶತಭಿಷಕ್ಛತತಾರಯೋಃ। ಪೂರ್ವಾಭಾದ್ರಉತ್ತರಾಭಾದ್ರದ್ವೈವೈಖಟ್ವಂ। ರೇವತೀಮತ್ಸ್ಯಕಾರತ್ರಯಂ। ಈ ೨೭ನ್ನೂ ನಕ್ಷತ್ರ ಸ್ವರೂಪಗಳು. ಹ್ಯಾಗಂದರೆ,=

ಟೀ ॥ ಅಶ್ವಿನಿ ಕುದುರೆ ಮುಖದಂತೆ ೩ ನಕ್ಷತ್ರಗಳು ಸೇರಿ ಇರುವದು, ಭರಣೀ ತ್ರಿಕೋಣಾಕಾರವಾಗಿ ೩ ನಕ್ಷತ್ರಗಳು. ಕೃತ್ತಿಕೆ ಹಜಾಮನ ಕತ್ತಿಯಂತೆ ೬ ಸಂಣ ನಕ್ಷತ್ರಗಳು, ರೋಹಿಣೀ ಚಕ್ರಾಕಾರವಾಗಿ ೫ ನಕ್ಷತ್ರಗಳು, ಮೃಗದ ತಲೆಯಂತೆ ೩ ನಕ್ಷತ್ರಗಳು, ಮೃಗಶಿರೆ ಮೃಗದ ತಲೆಯಂತೆ ಮೂರು ನಕ್ಷತ್ರಗಳು, ಆರ್ದ್ರಾ ದೊಡ್ಡ ಹವಳದಂತೆ ೧ ನಕ್ಷತ್ರ, ಪುನರ್ವಸು ಕುಂಬಾರ ಚಕ್ರದಂತೆ ೫ ನಕ್ಷತ್ರಗಳು, ಪುಷ್ಯ ತೊಣ್ಣೆ ಕೇತದಂತೆ ೩ ನಕ್ಷತ್ರಗಳು, ಇದನ್ನೇ ಕರೇಕಟ್ಟಿಯಂತೆ ಕೆಲವರು ಹೇಳುವರು, ಆಶ್ಲೇಷಾ ಸರ್ಪದಂತೆ ೬ ನಕ್ಷತ್ರಗಳು, ಮಘಾ ಪಾಲಕಿ ದಂಡಿಯಂತೆ ೫ ನಕ್ಷತ್ರಗಳು, ಪೂಫ=ಕಣ್ಣುಳಂತೆ ೨ ನಕ್ಷತ್ರಗಳು, ಉಫ=ಹಾಗೆಯೇ ೨ ನಕ್ಷತ್ರಗಳು, ಹಸ್ತ-ಕೈಬೆರಳಂತೆ ೫ ನಕ್ಷತ್ರಗಳು, ಚಿತ್ರಾ ಮುತ್ತಿನಂತೆ ೧ ನಕ್ಷತ್ರವು, ಸ್ವಾತೀ ಮಾಣಿಕ್ಯದಂತೆ ೧ ನಕ್ಷತ್ರವು, ವಿಶಾಖಾ ಕುಂಬಾರನ ಚಕ್ರಾಕಾರವಾಗಿ ೫ ನಕ್ಷತ್ರಗಳು, ಅನೂರಾಧಾ ಜ್ಯೇಷ್ಠಾ ಇವೆರಡೂ ಛತ್ರದಂತೆ ೩-೩ ನಕ್ಷತ್ರಗಳು, ಮೂಲಾ ಸಿಂಹಾಕಾರವಾಗಿ ೫ ನಕ್ಷತ್ರಗಳು, ಪೂರ್ವಾಷಾಢಾ ೮ ನಕ್ಷತ್ರಗಳು, ಉತ್ತರಾಷಾಢಾ ೪ ನಕ್ಷತ್ರಗಳು, ಶ್ರವಣ ಮತ್ಸ್ಯಾಕಾರವಾಗಿ ೩ ನಕ್ಷತ್ರಗಳು, ಧನಿಷ್ಠಾ ತಲೆಯಂತೆ ೩ ನಕ್ಷತ್ರಗಳು. ಶತಭಿಷಕ್ ನೂರು ನಕ್ಷತ್ರಗಳು ಸೇರಿ ಪುಷ್ಪದಂತಿರುವದು, ಪೂಭಾ, ಉತ್ತರಾಭಾದ್ರಾ, ಇವೆರಡೂ ಮಂಚದ ಕೋಡುಗಳಂತೆ=೨=೨ ಆಗಿ ೪ ನಕ್ಷತ್ರಗಳು, ರೇವತೀ ಮತ್ಸ್ಯಾಕಾರವಾಗಿ ೩ ನಕ್ಷತ್ರಗಳು, ಈ ಮೇರೆ ನಕ್ಷತ್ರ ಸ್ವರೂಪವನ್ನು ತಿಳಿದು ಅವುಗಳು ಉಚ್ಚವಾದಾಗ ರಾತ್ರಿಯಲ್ಲಿ ಘಟಿಕಾನಿರ್ಣಯ ಮಾಡತಕ್ಕದ್ದು.

ಶ್ಲೋ ॥ ಜ್ಯೇಷ್ಠಾದೀನಾಮತಿಕ್ರಮ್ಯಪೌಷ್ಣಾದೀನಾಮನಾಗಮೇ।
ಆರ್ದ್ರಾದೀನಾಂಸಮುಂಕುರ್ಯಾನ್ನಷಟ್ಯಾದ್ವಿಪಳಕ್ರಮಾತ್ ॥

ಟೀ॥ ಜ್ಯೇಷ್ಠಾದಿ ೯ ನಕ್ಷತ್ರಗಳು ಉಚ್ಚವಾಗಿ ಸ್ವಲ್ಪ ಜರಿಗಿದ ತರುವಾಯ ಈ ರೇವತೀ ಮೊದಲು ೬ ನಕ್ಷತ್ರಗಳು ಉಚ್ಚಕ್ಕೆ ಬರುವದಕ್ಕೆ ಸ್ವಲ್ಪ ಮುಂದಾಗಿಯೂ, ಆರ್ದ್ರಾ ಮೊದಲು ೧೨ ನಕ್ಷತ್ರಗಳು ಸರಿಯಾಗಿ ಉಚ್ಚದಲ್ಲಿರುವಾಗಲೂ ಘಟಿಕಾನಿರ್ಣಯ ಮಾಡತಕ್ಕದ್ದು.

ಉಚ್ಚವಾದ ನಕ್ಷತ್ರಗಳ ದೆಸೆಯಿಂದ ಮೇಷಾದಿರಾಶಿಗಳ ಘಟಿಕೆಗಳಲ್ಲಿ ಕಳೆದ ಘಳಿಗೆಗಳನ್ನು ತಿಳಿದುಕೊಳ್ಳುವಕ್ರಮ.

ಇಲ್ಲಿ=ಶ್ರೋಣಾಮೇಷೇರತಾಯೆಂಬ ವಾಕ್ಯ ಮೊದಲು ಉತ್ತರಾಷಾಢಾ.ಮೀನೇ ಗಾಧಾ ಯೆಂಬ ವಾಕ್ಯದವರಿಗೆ ಪ್ರತಿ ವಾಕ್ಯದಲ್ಲಿಯೂ ಹೇಳಲ್ಪಟ್ಟ ೨-೨ ಅಕ್ಷರಗಳಲ್ಲಿ ಮೊದಲು ಅಕ್ಷರ ಘಟಿಕೆಯ ಸಂಖ್ಯೆಯೆಂಬದಾಗಿಯೂ ೨ನೇ ಅಕ್ಷರ ಬೇಳೆ ಸಂಖ್ಯೆ ಯೆಂಬದಾಗಿಯೂ ತಿಳಿಯ ತಕ್ಕದ್ದು.

ವರರುಚಿ ವಾಕ್ಯಗಳು.

ಶ್ರೋಣಾಮೇಷೇರತಾ। ಶ್ರವಿಷ್ಠಾವೃಷಭೇನಭ। ಶತಭಿಷಗ್ವೃಷಭೇರಾಮಃ। ಪ್ರೋಷ್ಟಪಾನ್ಮಿಥುನೇಪರಃ। ಅಹಿರ್ಬುಧ್ನ್ಯೋಮಿಥುನೇಭಾನುಃ। ರೇವತೀಕರ್ಕಿಣೀಯುಜ್ಞಃ। ಅಶ್ವಿನೀಕರ್ಕಿಣೀರೂಪ। ಭರಣೀಕರ್ಕಿಣೀಶಾಬ । ರೋಹಿಣೀಸಿಂಹೇಗುರುಃ। ಕೃತ್ತಿಕಾಸಿಂಹೇಕಾಯ। ಮೃಗಶಿರಾಕನ್ಯಾನಯೆ । ಆರ್ದ್ರಾಕನ್ಯಾಯುತಾ। ಪುನರ್ವಸುತುಲಾ। ಪುಷ್ಯಸ್ತುಲಾರಾಮಃ । ಆಶ್ಲೇಷಾತುಲಾಭೋಗಿ। ಮಖಾವೃಶ್ಚಿಕಶೆಲ। ಫಲ್ಗುನೀವೃಶ್ಚಿಕಲತಾ। ಉತ್ತರಾಧನುರ್ನಾಮ। ಹಸ್ತಾಧನುರ್ಬಲಾ। ಚಿತ್ರಾಧನುಶ್ಶೈತ್ಯಃ । ಸ್ವಾತೀಮಕರೇಕಾಮ್ಯ। ವಿಶಾಖಾಮಕರೇವನಂ । ಅನೂರಾಧಾಕುಂಭೆನಾಭಿಃ । ಜ್ಯೇಷ್ಠಾಂಕುಂಭೆಕಥಾ। ಮೂಲಕುಂಭೆ । ಪೂರ್ವಾಷಾಢಾಮೀನೆಕವಿಃ। ಉತ್ತರಾಷಾಢಾಮೀನೆಗಾಥಾ ॥

ಟೀ॥ ಶ್ರವಣ ನಕ್ಷತ್ರ ವುಚ್ಚವಾದರೆ ಮೇಷ ಲಗ್ನದಲ್ಲಿ ೨೫ ಘಳಿಗೆ ಕಳೆಯಿತೆಂಬದಾಗಿಯೂ, ಧನಿಷ್ಠಾ ನಕ್ಷತ್ರಕ್ಕೆ ವೃಷಭದಲ್ಲಿ ೪, ಶತಭಿಷಕ ನಕ್ಷತ್ರಕ್ಕೆವೃಷಭದಲ್ಲಿ ೨೪೭. ಪೂಭಾಗೆ ಮಿಥುನದಲ್ಲಿ ೦।, ಉಭಾಗೆ ಮಿಥುನದಲ್ಲಿ ೪ ರೇವತಿಗೆ ೦೪೭, ಅಶ್ವಿನಿಗೆ ಕಟಕದಲ್ಲಿ ೨೭, ಭರಣಿಗೆ ಕಟಕದಲ್ಲಿ ೫।೭, ಕೃತ್ತಿಕೆಗೆ ಸಿಂಹದಲ್ಲಿ ೦೭, ರೋಹಿಣಿಗೆ ಸಿಂಹದಲ್ಲಿ ೩।, ಮೃಗಶಿರಕ್ಕೆ ಕನ್ಯೆಯಲ್ಲಿ ೭, ಆರ್ದ್ರೆಗೆ ಕನ್ಯೆಯಲ್ಲಿ ೦೫, ಪುನರ್ವಸುವಿಗೆ ತುಲೆಯಲ್ಲಿ ।೭, ಪುಷ್ಯಕ್ಕೆ ೨೪೭, ಆಶ್ಲೇಷಕ್ಕೆ ತುಲೆಯಲ್ಲಿ ೪।೭,ಮಖೆಗೆ ವೃಶ್ಚಿಕದಲ್ಲಿ ೦।೭, ಪೂರ್ವಫಲ್ಗುನಿಗೆ ವೃಶ್ಚಿಕದಲ್ಲಿ ೩೫, ಉತ್ತರಫಲ್ಗುನಿಗೆ ಧನುಸ್ಸಿನಲ್ಲಿ ೪೭, ಹಸ್ತಕ್ಕೆ ಧನುಸ್ಸಿನಲ್ಲ ೩।೭, ಚಿತ್ರೆಗೆ ಧನುಸ್ಸಿನಲ್ಲಿ ೫। ಸ್ವಾತಿಗೆ ಮಕರದಲ್ಲಿ ೦೪೭, ವಿಶಾಖೆಗೆ ಮಕರದಲ್ಲಿ೪, ಅನೂರಾಧಗೆ ಕುಂಭದಲ್ಲಿ ೪, ಜ್ಯೇಷ್ಠೆಗೆ ಕುಂಭದಲ್ಲಿ ೦೫೭, ಮೂಲಕ್ಕೆ ಕುಂಭದಲ್ಲಿ ೩೫೭, ಪೂರ್ವಾಷಾಢಕ್ಕೆ ಮೀನದಲ್ಲಿ ೦।, ಉತ್ತರಾಷಾಢಕ್ಕೆ ಮೀ

ನವಲ್ಲಿ ೩.೩೧-, ಈ ಮೇರೆ ಆಯಾನಕ್ಷತ್ರಗಳುಚ್ಚವಾದರೆ ಆಯಾ ರಾಶಿಗಳಲ್ಲಿ ಅಷ್ಟಷ್ಟ ಘಳಿಗೆಗಳು ಕಳದವೆಂದು ತಿಳಿಯತಕ್ಕದ್ದು.

ಸಂಜ್ಞಾಪ್ರಕರಣವು ಸಂಪೂರ್ಣವಾದುದು.

ಶ್ರೀರಸ್ತು.

ಜಾತಕರ್ಮಾದಿ ಮುಹೂರ್ತಪ್ರಕರಣ.

ಅದರಲ್ಲಿ ಜಾತಕರ್ಮ ಪ್ರಕರಣವು.

ಶ್ಲೋ ॥ ಮುಖಾವಲೋಕನಸುತಸ್ಯಜೀವತಃ । ಪಿತಾವಿಮುಚ್ಯೇತ ಯೆತಸ್ತುದರ್ಣತಃ॥ತತಃಕ್ಷಣಾದೀನ್ವಿಗಣಯ್ಯತತ್ಕ್ಷಣಂವಿಧೀಯತೆ ಜನ್ಮವಿಧಿಸ್ಸುತೋದಯೆ ॥

ಟೀ॥ ಮಗು ಹುಟ್ಟಿ ಬದುಕಿ ಇರುವಾಗ ತಂದೆಯು ಅದರ ಮುಖವನ್ನು ನೋಡಿದ ಮಾತ್ರದಿಂದಲೆ ಪಿತೃಗಳ ಋಣದಿಂದ ಮುಕ್ತನಾಗುತ್ತಾನೆ. ಆದ್ದರಿಂದ ಪುತ್ರನು ಹುಟ್ಟಿದ ಮಾತ್ರದಿಂದಲೇ ತಂದೆಯು ಅವನಿಗೆ ಜಾತಕರ್ಮವನ್ನು ಮಾಡಬೇಕು.

ಶ್ಲೋ॥ ಪುತ್ರಜನ್ಮನಿಯಜ್ಞೇಚತಥಾಸಂಕ್ರಮಣೇರವೇಃ । ರಾಹೋಃ ಪ್ರದರ್ಶನೆಸ್ನಾನಂಪ್ರಶಸ್ತಂನಾನ್ಯಥಾನಿಶಿ ॥

ಟೀ॥ ಮಗನು ಹುಟ್ಟಿದಾಗಲೂ, ಯಜ್ಞದಲ್ಲಿಯೂ, ಸೂರ್ಯ ಸಂಕ್ರಮಣದಲ್ಲಿಯೂ, ಗ್ರಹಣದಲ್ಲಿಯೂ, ರಾತ್ರಿಕಾಲದಲ್ಲಿ ಸ್ನಾನ ಮಾಡತಕ್ಕದ್ದೇ ಹೊರ್ತು ಇತರ ಕಾಲದಲ್ಲಿ ಸ್ನಾನ ಮಾಡಕೂಡದು.

ಶ್ಲೋ॥ಗ್ರಹಣೋದ್ವಾಹಸಂಕ್ರಾಂತಿಯಾತ್ರಾಸುಪ್ರಸವೇಷುಚ।ದಾನಂನೈಮಿತ್ತಿಕಂಜ್ಞೇಯಂರಾತ್ರಾವಪಿನದೂಷ್ಯತಿ ॥

ಟೀ ॥ ಗ್ರಹಣ, ವಿವಾಹ, ಸಂಕ್ರಾಂತಿ, ಪ್ರಯಾಣ, ಪುತ್ರೋತ್ಪತ್ತಿ, ಇವುಗಳ ಈ ಕಾಲಗಳಲ್ಲಿ ರಾತ್ರಿಕಾಲದಲ್ಲಿಯೂ ದಾನ ಮಾಡತಕ್ಕದ್ದು.

ಶ್ಲೋ॥ ಯಾವನ್ನಚ್ಛಿದ್ಯತೆನಾಳಂತಾವನ್ನಾಪ್ನೋತಿಸೂತಕಂ । ಛಿನ್ನೆನಾಳೆತತಃಪಶ್ಚಾತ್ಸೂತಕಂತುವಿಧೀಯತೆ ॥

ಟೀ॥ ಯೆಷ್ಟರವರಿಗೂ ನಾಳವು ಕೊಯ್ಯಲ್ಪಡುವದಿಲ್ಲವೋ ಅಷ್ಟರವರಿಗೂ ಸೂತಕವಿಲ್ಲವು.

ಶ್ಲೋ ॥ ದೃಷ್ಟ್ವಾತತಕ್ಷ್ವಿಧಿವತ್ತಚೆಲಸ್ನಾನಮಾಚರೆತ್ । ದ

ತ್ವಾಗೋಭೂಹಿರಣ್ಯಾದಿಪಶ್ಚಾಲ್ಲಗ್ನಂನಿರೀಕ್ಷಯೇತ್ ॥

ಟೀ। ನಾಳವು ಕೊಯ್ಯಲ್ಪಟ್ಟ ತರುವಾಯು ಶಿಶುವಿನ ಮುಖ ನೋಡಿ ಉಟ್ಟಿದ್ದ ವಸ್ತ್ರದೊಂದಿಗೆ ಸ್ನಾನ ಮಾಡಿ, ಗೋದಾನ, ಭೂದಾನ, ಧಾನ್ಯದಾನ ಇವುಗಳನ್ನು ಮಾಡಿ ತರುವಾಯು ಲಗ್ನವನ್ನು ನೋಡಬೇಕು.

ಶ್ಲೋ॥ ತಸ್ಮಿನ್ ಜನ್ಮಮುಹೂರ್ತೇಪಿಸೂತಕಾಂತೇಥವಾಶಿಶೋಃ। ಜಾತಕರ್ಮಚಕರ್ತವ್ಯಂಪಿತೃಪೂಜನತತ್ಪರೈಃ ॥

ಟೀ॥ ಮಗು ಹುಟ್ಟಿದಕಾಲದಲ್ಲಾದರೂ, ಸೂತಕ ತೀರಿದ ತರುವಾಯು ೧೧ನೇ ದಿವಸದಲ್ಲಾದರೂ ಮಗುವಿಗೆ ಜಾತಕರ್ಮ ಮಾಡಬೇಕು.

ನಾಮಕರಣವು.

ಶ್ಲೋ॥ ನಾಮಕರ್ಮದಶಮೇಥವಾಹನಿದ್ವಾದಶೇಶುಚಿಷುವಾವಿಧೀಯತೇ। ಸ್ವೋಚ್ಚಮಿತ್ರಭವನೇಷುಸದ್ಗ್ರಹಾಸಾದ್ಯೃಶ್ಯೈರ್ಯದಿವಿಲೋಕಿತಾಶ್ಶುಭಾಃ ॥

ಟೀ॥ ಮಗು ಹುಟ್ಟಿದ ೧೦ನೇ ದಿವಸದಲ್ಲಾದರೂ, ೧೨ನೇ ದಿವಸದಲ್ಲಾದರೂ, ಶುಭಗ್ರಹಗಳು ಸ್ವಕ್ಷೇತ್ರ, ಉಚ್ಚಸ್ಥಾನ, ಮಿತ್ರಕ್ಷೇತ್ರಗಳಲ್ಲಿ ಇರುವಾಗಲೂ, ಅಥವಾ ಶುಭಗ್ರಹಗಳಿಂದ ನೋಡಲ್ಪಟ್ಟಿದ್ದರೂ ಶುಭದಿನದಲ್ಲಿ ಶಿಶುವಿಗೆ ನಾಮಕರಣವನ್ನು ಮಾಡತಕ್ಕದ್ದು.

ತರುವಾಯು ನಾಮಕರಣ ಕಾಲವನ್ನು ಹೇಳುತ್ತಾನೆ.

ಶ್ಲೋ॥ ಜಾತಾನಂತರಮೇವನಾಮಕರಣಂತ್ವೇಕಾದಶಾಹೇಸ್ಫುಟಂ। ಪುತ್ರಸ್ಯೈವಸಮಾಕ್ಷರಂತುಯುವತೇಃಕಾರ್ಯಂತತೋವ್ಯತ್ಯಯಂ। ಶುದ್ಧಿರ್ಜಾತಕವಚ್ಚನಾಮ್ನಿಸಕಲೈಸ್ತುದ್ವಾದಶೇಷೋಡಶೇ।ದ್ವಾವಿಂಶೇಪ್ಯಥವಿಂಶಕೇಪ್ಯಿವಿಹಿತಂಜಾತಿವ್ಯವಸ್ಥಾಂವಿನಾ ॥

ಟೀ॥ ಮಗನು ಹುಟ್ಟಿದ ಕ್ಷಣದಲ್ಲೇ ಅವನು ಯಾವ ನಕ್ಷತ್ರದಲ್ಲಿ ಹುಟ್ಟುತ್ತಾನೋ ಆ ನಕ್ಷತ್ರದ ಹೆಸರಿನಿಂದ ಶಿಶುವಿಗೆ ರಹಸ್ಯವಾಗಿ ನಾಮಧೇಯವನ್ನಿಟ್ಟು, ತರುವಾಯು ೧೧ನೇ ದಿವಸದಲ್ಲಿ ಬಹಿರಂಗವಾಗಿ ನಾಮಕರಣವನ್ನು ಮಾಡತಕ್ಕದ್ದು. ಹ್ಯಾಗೆಂದರೆ,–ಅಶ್ವಿನಿಯಲ್ಲಿ ಹುಟ್ಟಿದ ಶಿಶುವಿಗೆ ಅಶ್ವಿನನು, ಕೃತ್ತಿಕೆಯಲ್ಲಿ ಹುಟ್ಟಿದ್ದಕ್ಕೆ ಕಾರ್ತಿಕನು, ರೋಹಿಣಿಯಲ್ಲಿ ಹುಟ್ಟಿದ್ದಕ್ಕೆ ರೌಹಿಣನು, ಮೃಗಶೀರ್ಷದಲ್ಲಿ ಹುಟ್ಟಿದ್ದಕ್ಕೆ ಮಾರ್ಗಶೀರ್ಷನು, ಮಖೆಯಲ್ಲಿ ಹುಟ್ಟಿದ್ದಕ್ಕೆ ಮಾಖನು, ಈ ಮೇರೆ ೨೭ ನಕ್ಷತ್ರಗಳಿಗೂ ತಕ್ಕ ನಾಮಗಳನ್ನಿಡತಕ್ಕದ್ದು. ಮತ್ತು ಹುಟ್ಟಿದ್ದು ಗಂಡು ಶಿಶುವಾದರೆ ಹೆಸರು ಸಮಾಕ್ಷರವಾಗಿ ಶಿವ, ರಾಮ,

ಕೃಷ್ಣ, ಲಿಂಗ, ನೀಲಕಂಠ, ರಾಮಚಂದ್ರ, ಮಹಾದೇವ ಎಂಬದಾಗಿ ಯೂ, ಹೆಣ್ಣು ಮಗುವಾದರೆ ಕಮಲಾ, ಪಾರ್ವತೀ, ಸುಂದರೀ, ಜಾನಕೀ ಕನಕವಲ್ಲಿ, ನೀಲಾ ಯತಾಕ್ಷಿಯೆಂದು ವಿಷಮಾಕ್ಷರವಾಗಿಯೂ,ನಾಮಕರಣ ಮಾಡಬೇಕು. ಈ ನಾಮಕರಣಕ್ಕೆ ಲಗ್ನಶುದ್ಧಿ ಮೊದಲಾದವುಗಳು ಜಾತಕನನ್ನು ಕರ್ಮದಂತೆಯೇ ತಿಳಿಯಬೇಕು,೧೧ನೇ ದಿನದಲ್ಲಿ ನಾಮಕರಣ ಮಾಡದೇ ಹೋದ ಪಕ್ಷದಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೂ ವೃದ್ಧಿಯಅಶೌಚವು ೧೦ ದಿನಗಳವರಿಗೂ ಯೆಂಬದಾಗಿ ಶಾಸ್ತ್ರವಿರುವದರಿಂದ ಜಾತಿ ಭೇದವಿಲ್ಲದೆ ಸರ್ವ ವರ್ಣದವರೂ ಪ್ರಸವವಾದ ೧೨-೧೬-೨೦-೨೨ ಈ ದಿನಗಳಲ್ಲಿ ನಾಮಕರಣವನ್ನು ಮಾಡತಕ್ಕದ್ದೆಂದು ಭಾವವು.

ಶ್ಲೋ॥ಮಿತ್ರಾದಿತ್ಯಮಖೋತ್ತರಾಶತಭಿಷಕ್ಸ್ವಾತೀಧನಿಷ್ಠಾಚ್ಯುತಪ್ರಾಜೇಶಾಶ್ವಿಶಶಾಂಕಪೌಷ್ಣದಿನಕೃತ್ಪುಷ್ಯೇಷುರಾಶೌಸ್ಥಿರೇ॥ರಿಕ್ತಾಪಂಚದಶೀಂವಿಹಾಯನವಮೀಂಶುದ್ಧೇಷ್ಟಮೇ ಭಾರ್ಗವಜ್ಞಾಚಾರ್ಯ್ಯಾಮೃತಪಾರವಾರದಿವಸೇನಾಮಾನಿಕುರ್ಯ್ಯಾಚ್ಛಿಶೋಃ ॥

ಟೀ॥ ಅನೂರಾಧಾ, ಪುನರ್ವಸು, ಮಖಾ, ಉತ್ತರಾ, ಉಷಾ, ಉಭಾ, ಶತಭಿಷಕ್, ಸ್ವಾತಿ, ಧನಿಷ್ಠಾ, ಶ್ರವಣ, ರೋಹಿಣಿ, ಅಶ್ವಿನೀ, ಮೃಗಶೀರ್ಷ, ರೇವತೀ, ಹಸ್ತ, ಪುಷ್ಯ ಈ ನಕ್ಷತ್ರಗಳಲ್ಲಿಯೂ, ಸ್ಥಿರ ರಾಶಿಯಲ್ಲುತ್ತಮ ಪಕ್ಷಸ್ಥಿತ್ರವನ್ನು ಪೌರ್ಣಮಾಸ್ಯೆಯನ್ನು ನವಮಿಯನ್ನು ಬಿಟ್ಟು ಅಷ್ಟಮಶುದ್ಧಿ ಇರುವಾಗಲೂ ಶುಕ್ರ ಬುಧ ಗುರು ಸೋಮ ಕುಜವಾರಗಳಲ್ಲಿಯೂ ಶಿಶುವಿಗೆ ನಾಮಕರಣವನ್ನು ಮಾಡತಕ್ಕದ್ದು.

ಶ್ಲೋ॥ ದೈವಪೂರ್ವಂಕರಾಖ್ಯಂಹಿಶರ್ಮವರ್ಮಾನುಭಾವತಃ॥ ಸುಶ್ರೀಯುತಂನಾಮಪೂರ್ವಂರೇಖಾಂತಂಸುಮನೋಕ್ಷರೈಃ ॥

ಟೀ॥ ಮಗುವಿಗೆ ದೈವವಾಚಕ ಶಬ್ದ ಮೊದಲಾಗಿ ಶ್ರೀಕಾರ ಸಹಿತವಾಗಿ ಸಂಸ್ಕೃತಾಕ್ಷರಗಳಿಂದ ಬ್ರಾಹ್ಮಣಾದಿ ವರ್ಣಗಳಿಗೆ ಹೆಸರುಗಳನ್ನು ಶರ್ಮ, ವರ್ಮ, ಗುಪ್ತಯೆಂಬ ಅಕ್ಷರಗಳ ಕೊನೇವರಿಗೆ ಕೈಯಿಂದ ಬರಿಯತಕ್ಕದ್ದು.

॥ ಕೃಷ್ಣೋನಂತೋಚ್ಯುತಶ್ಚಕ್ರೀವೈಕುಂಠೋಥಜನಾರ್ದನಃಉಪೇಂದ್ರೋಯಜ್ಞಪುರುಷೋವಾಸುದೇವಸ್ತಥಾಹರಿಃ॥ಗೋವಿಂದಾ[illegible]ಕ್ಷೋಮಾಸನಾಮಾನ್ಯನುಕ್ರಮಾತ್ । ಕೇಚಿನ್ನ ಕ್ಷ

ತ್ರನಾಮಾನಿಕಾರ್ಪಂತಿವಿದಿತಾಗಮಾಃ ॥

ಟೀ॥ ಹುಟ್ಟಿದ ಮಗುವಿಗೆ ಚೈತ್ರ ಮೊದಲು ಫಾಲ್ಗುನ ಮಾಸದವರಿಗೆ ಕ್ರಮವಾಗಿ ಕೃಷ್ಣನು, ಅನಂತನು, ಚಕ್ರಿಯು, ವೈಕುಂಠನು, ಜನಾರ್ದನನು, ಉಪೇಂದ್ರನು, ಯಜ್ಞಪುರುಷನು, ವಾಸುದೇವನು, ಹರಿಗೋವಿಂದನು, ಪುಂಡರೀಕಾಕ್ಷನು,ಈ ೧೨ ಹೆಸರನ್ನು ಇಡತಕ್ಕದ್ದು. ಇದು ಮಾಸ ನಾಮಗಳು, ಕೆಲವರು ನಕ್ಷತ್ರನಾಮಗಳನ್ನು ಇಡುತ್ತಾರೆ, ಅಂದರೆ ಇಲ್ಲಿ ಹೇಳಲ್ಪಟ್ಟ ಕೃಷ್ಣಾದಿ ನಾಮಗಳಲ್ಲಿ ಒಂದನ್ನು ಶಿಶುವಿಗೆ ಇಟ್ಟು ಆ ಶಿಶುವು ಯಾವ ತಿಂಗಳಲ್ಲಿಯೂ ಯಾವ ನಕ್ಷತ್ರದಲ್ಲಿಯೂ ಹುಟ್ಟಿತೋ ಅವುಗಳ ನಾಮವನ್ನು ಕೊನೆಯಲ್ಲಿ ಸೇರಿಸತಕ್ಕದ್ದು.

ಹೆಂಣು ಮಕ್ಕಳಿಗೆ ಹ್ಯಾಗಂದರೆ.—

ಶ್ಲೋ॥ ಮಾರ್ಗಶೀರ್ಷೆಚವಾಗ್ದೇವೀಪುಷ್ಯೆಪದ್ಮಾವತೀಭವೇತ್।ಶ್ರೀದೇವೀಚೈವಸಾವಿತ್ರೀಭೂಮಿಃಕಲ್ಯಾಣಿಕಾಸ್ಮೃತಾ । ಸತ್ಯಭಾಮಾಪುಣ್ಯವತೀರೂಪಿಣೀಚೆಂದುಮತ್ಯಪಿ।ಚಂದ್ರಾವತೀಚಲಕ್ಷ್ಮೀಚಸ್ತ್ರೀನಾಮಕರಣೆವಿದುಃ ॥

ಟೀ॥ ಹೆಂಣು ಮಕ್ಕಳಿಗೆ ಮಾರ್ಗಶಿರ ಮಾಸದಲ್ಲಿ ವಾಗ್ದೇವಿ, ಪುಷ್ಯಮಾಸದಲ್ಲಿ ಪದ್ಮಾವತೀ, ಮಾಘಮಾಸದಲ್ಲಿ ಸ್ರೀ ದೇವೀ, ಫಾಲ್ಗುಣ ಮಾಸದಲ್ಲಿ ಸಾವಿತ್ರೀ, ಚೈತ್ರಮಾಸದಲ್ಲಿ ಭೂದೇವಿ, ವೈಶಾಖಮಾಸದಲ್ಲಿ ಕಲ್ಯಾಣಿ, ಜ್ಯೇಷ್ಠ ಮಾಸದಲ್ಲಿ ಸತ್ಯಭಾಮಾ, ಆಷಾಢ ಮಾಸದಲ್ಲಿ ಪುಣ್ಯವತೀ, ಶ್ರಾವಣಮಾಸದಲ್ಲಿ ರೂಪಿಣೀ, ಭಾದ್ರಪದ ಮಾಸದಲ್ಲಿ ಇಂದುಮತೀ, ಆಶ್ವಯುಜಮಾಸದಲ್ಲಿ ಚಂದ್ರಾವತೀ, ಕಾರ್ತಿಕ ಮಾಸದಲ್ಲಿ ಲಕ್ಷ್ಮೀ ಈ ಹೆಸರುಗಳನ್ನು ಸ್ತ್ರೀಗಳ ನಾಮಕರಣದಲ್ಲಿ ಮಾಸನಾಮಗಳೆಂದು ಹೇಳುತ್ತಾರೆ.

ಶ್ಲೋ॥ ಕುಮಾರಸ್ಯಾಭಿವೃದ್ಧ್ಯರ್ಥಂಕುರ್ಯಾದ್ಬ್ರಾಹ್ಮಣಭೋಜನಂ॥

ಟೀ॥ ಶಿಶುವಿಗೆ ಅಭಿವೃದ್ಧಿಯುಂಟಾಗುವ ಬಗ್ಯೆ ತಂದೆಯು ನಾಮಕರಣದಲ್ಲಿಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಸಬೇಕು.

ಶ್ಲೋ॥ದ್ವ್ಯಕ್ಷರಂವಾಚತುರಕ್ಷರಂವಾವಿವರ್ಜಿತೋಪಾಂತ್ಯಲಕಾರರೇಫಂ।ತನ್ನಾಮನಾಮಾದಿಕಮೇಕಚಿತ್ತಸ್ಸ್ವಗೃಹ್ಯೋಕ್ತಂವದೇದ್ದಕ್ಷಿಣಕರ್ಣರಂಧ್ರೇ॥

ಟೀ॥ ಹೆಸರಿನಕೊನೆ ಅಕ್ಷರದಹಿಂದೆ ಲ-ರ-ಈ ೨ ಅಕ್ಷರಗಳಿಲ್ಲದಿದ್ದ

ಗಿಯೂ ಮಾಸನಾಮಧೇಯವಾಗಿಯೂ, ೪ ಅಕ್ಷರವಾಗಿಯೂ ಇರುವ
ಹೆಸರನ್ನು ಶಿಶುವಿನಬಲಕಡೇ ಕಿವಿಯಲ್ಲಿ ಸ್ಪಷ್ಟವಾಗಿ ಹೇಳಬೇಕು.

ಶ್ಲೋ॥ ಅಷ್ಟಮಸ್ಥಾಗ್ರಹಾಸ್ಸರ್ವೇನಷ್ಟಾಸ್ತೇನಾಮಕರ್ಮಣಿ। ಧ
ನತ್ರುತ್ರಸುಹೃದ್ಧಾತ್ರನವಮೇನಶುಭಶ್ಶಶೀ। ಪಾಪಾಸ್ತ್ರಿಷಷ್ಠಲಾ
ಭಸ್ಥಾನಾಮಕರ್ಮಣಿಪೂಜಿತಾಃ।ದ್ವಾದಶೇಹನಿಕರ್ತವ್ಯಂಶಿಶೋರ್ನಿ
ಷ್ಕ್ರಮಣಂಗೃಹಾತ್

ಟೀ॥ ನಾಮಕರಣಲಗ್ನಕ್ಕೆ ಅಷ್ಟಮಶುದ್ಧಿ ಇರಬೇಕು. ದ್ವಿತೀಯ,
ಪಂಚಮ, ಚತುರ್ಥ, ತೃತೀಯ, ನವಮ, ಈ ಸ್ಥಾನಗಳಲ್ಲಿ ಶುಭಗ್ರ
ಹಯುಕ್ತನಾದ ಚಂದ್ರನು, ತೃತೀಯ ಷಷ್ಠ ಲಾಭಸ್ಥಾನಗಳಲ್ಲಿರುವ
ಪಾಪಗ್ರಹಗಳು ಸಹ ಶುಭಫಲಗಳನ್ನು ಕೊಡುವರು. ಶಿಶು ಹುಟ್ಟಿದ
೧೨ ನೇ ದಿವಸದಲ್ಲಿ ಸೂತಿಕಾಗೃಹದಿಂದ ಮಗುವನ್ನು ಹೊರಗೆ ತರ
ಬೇಕು.

ಚೋಗೆ ತೊಡಿಸುವದು.

ಶ್ಲೋ॥ ಅಶ್ವಿನೀತ್ವಷ್ಟೃಪೌಷ್ಣೇಜ್ಯಮಿತ್ರೋತ್ತರಕರಾನಿಲೇ। ಸಿತಸೌ
ಮ್ಯೇಜ್ಯವಾರೇಷ್ಟುಚಂದ್ರತಾರಾಬಲಾನ್ವಿತೇ। ಶುಭೇಮುಹೂರ್ತೇಪೂರ್ವಾ
ಹ್ಣೇಜಯೇಪೂರ್ಣದಿನೇತಥಾ।ಕೇಂದ್ರತ್ರಿಕೋಣಗಾಸೌಮ್ಯಾಪಾಪಾ
ಸ್ತ್ರ್ಯಾಯಾರಿರಾಶಿಗಾಃ। ಶಿಶೂನಾಂಧಾರಯೇತ್ತತ್ರಕಂಚುಕಂಚಿ
ತ್ರವರ್ಣಕಂ॥

ಟೀ॥ ಅಶ್ವಿನಿ, ಚಿತ್ರಾ, ರೇವತಿ, ಪುಷ್ಯ, ಅನೂ, ಉತ್ತ, ಉಷಾ,
ಉಭಾ, ಹಸ್ತ, ಸ್ವಾತೀ, ಈನಕ್ಷತ್ರಗಳಲ್ಲಿಯೂ, ಶುಕ್ರ, ಬುಧ, ಗುರು
ವಾರಗಳಲ್ಲಿಯೂ, ಚಂದ್ರತಾರಾಬಲವುಳ್ಳ ಶುಭಮುಹೂರ್ತದಲ್ಲಿಯೂ,
ಪೂರ್ವಾಹ್ಣದಲ್ಲಿಯೂ, ಜಯತಿಥಿಗಳಲ್ಲಿಯೂ, ಪೂರ್ಣದಿವಸದಲ್ಲಿಯೂ,
ಶುಭಗ್ರಹಗಳು ಕೇಂದ್ರತ್ರಿಕೋಣಗಳಲ್ಲಿರುವಾಗಲೂ, ಪಾಪಗ್ರಹಗಳು
೩-೧೧-೬ನೇ ಸ್ಥಾನಗಳಲ್ಲಿರುವಾಗಲೂ ಶಿಶುವಿಗೆ ನಾನಾ ಬಣ್ಣವುಳ್ಳ
ಚೋಗೆಯನ್ನು ತೊಡಿಸತಕ್ಕದ್ದು.

ಮಗುವಿಗೆ ತೊಟ್ಲು ತೂಗಿಸುವದು.

ಶ್ಲೋ॥ ತೃತೀಯೇಪಂಚಮೇಮಾಸಿತನ್ಮಾಸೇವಾಶುಭೇದಿನೇ । ಧಾತ್ರ
ಮೂಲೋತ್ತರತ್ರೀಣಿತಿರ್ಯಗ್ಭೇಷುದ್ವಿದೈವಭೇ ॥ ಚಂದ್ರತಾರಾಬಲ
ಯುತೇಚಾಷ್ಟಮೇಶುದ್ಧಿಸಂಯುತೇ। ದೋಲಾಮಾರೋಪಯೇದ್ಬಾಲಂ
ದ್ವಿಜಪುಣ್ಯಾಂಗನಾದಿಭಿಃ॥

ಟೀ॥ ೩ನೇ ಮಾಸದಲ್ಲಿಯಾದರೂ, ೫ನೇ ಮಾಸದಲ್ಲಿಯಾದರೂ ಮಗು ಹುಟ್ಟಿದಮಾಸದಲ್ಲಿಯಾದರೂ, ಯಾವಾಗಾದರೂ ಒಂದು ಶುಭದಿನದಲ್ಲಿ ರೋಹಿಣೀ, ಮೂಲ, ಉತ್ತರ, ಉಷಾ, ಉಭಾ, ಇವುಗಳಲ್ಲಿಯೂ, ತಿರ್ಯಙ್ಮುಖನ ನಕ್ಷತ್ರದಲ್ಲಿಯೂ, ಅಂದರೆ,-ರೇವ, ಪುನ, ಹಸ್ತ, ಚಿತ್ರ, ಸ್ವಾ, ಅಶ್ವಿ, ಮೃಗ, ಅನೂ, ಜ್ಯೇಷ್ಠ, ವಿಶಾ, ಈ ನಕ್ಷತ್ರಗಳಲ್ಲಿಯೂ, ಚಂದ್ರ ತಾರಾಬಲವುಳ್ಳ ನಕ್ಷತ್ರದಲ್ಲಿಯೂ, ಅಷ್ಟಮಶುದ್ಧಿ ಇರುವಾಗಲೂ, ಬ್ರಾಹ್ಮಣರು ಮುತ್ತೈದರೊಂದಿಗೆ ಮಗುವನ್ನು ತೊಟ್ಟಿಲಲ್ಲಿ ಇಡಬೇಕು.

ಅನ್ನಪ್ರಾಶನವು.

ಶ್ಲೋ॥ ಷಷ್ಠೇಷ್ಟಮೇವಾದಶಮೇಚಮಾಸಿಸಂವತ್ಸರೇವಾದಿವಸೇಪ್ರವೃದ್ಧೇ। ಪಕ್ಷೇಸಿತೇವ್ಯೋಮ್ನಿವಿಶುದ್ಧಿಭಾಜಿಬಾಲಾನ್ನಭುಕ್ತಿರ್ವಿಹಿತಾಮುನೀಂದ್ರೈಃ ॥

ಟೀ॥ ೬-೮-೧೦ನೇ ತಿಂಗಳಲ್ಲಿಯಾದರೂ, ವರ್ಷಾಂತದಲ್ಲಿಯಾದರೂ, ಹಗಲಿನಲ್ಲಿ ಶುಕ್ಲಪಕ್ಷದಲ್ಲಿ ಶುಕ್ರಸಿಗೆ ಅಸ್ತಾದಿ, ದೋಷಗಳಿಲ್ಲದಿರುವಾಗಲೂ ಬಾಲಕರಿಗೆ ಅಂನಪ್ರಾಶನ ಮಾಡತಕ್ಕದ್ದು.

ಶ್ಲೋ॥ ದೇವತಾಪುರತಸ್ತಸ್ಯಮಾತೃತ್ಸಂಗಗತಸ್ಯಚ। ಅಲಂಕೃತಸ್ಯಭೂಷಾಭಿರನ್ನಪಾತ್ರೇಚವಾಂಛಿತೇ। ಮಧ್ವಾಜ್ಯಕನಕೋಪೇತಂಪ್ರಾಶಯೇತ್ಪಾಯಸಂಶುಭಂ ॥

ಟೀ॥ ದೇವರ ಸಮ್ಮುಖದಲ್ಲಿ ತಾಯಿ ತೊಡೆಯಮೇಲೆ ಆಭರಣಗಳಿಂದ ಅಲಂಕೃತನಾಗಿರುವ ಶಿಶುವಿಗೆ ಸುವರ್ಣಾದಿ ಪಾತ್ರದಲ್ಲಿ ಪಾಯಸವನ್ನಿಟ್ಟು ಅರದಲ್ಲಿ ತುಪ್ಪ ಜೇನುತುಪ್ಪ ಮಿಶ್ರಮಾಡಿ ಆ ಪಾಯಸವನ್ನು ಕುಡಿಸುವದು.

ಶ್ಲೋ॥ ಆದಿತ್ಯಸೌಮ್ಯವಸುತಿಷ್ಯಕರಾನಿಲಾಶ್ವಿ। ಮಿತ್ರಾಖ್ಯವಿಷ್ಣುವರುಣೋತ್ತರಭಾನಿಚಿತ್ರಾ। ಬಾಲಾಂನಭೋಜನವಿಧೌ ದಶಮೇಚಶುದ್ಧೇ ಛಿದ್ರಾನ್ವಿಹಾಯನವಮೀಂತಿಥಯಃಶುಭಾಸ್ಯುಃ ॥

ಟೀ॥ ಪುನರ್ವಸು, ಮೃಗಶಿರ, ಧನಿಷ್ಠಾ, ಪುಷ್ಯ, ಹಸ್ತಾ, ಸ್ವಾತೀ, ಅಶ್ವಿನೀ, ಅನೂ, ಶ್ರವಣ, ಶತ, ಉತ್ತರ, ಉಷಾ, ಉಭಾ, ಚಿತ್ರಾ, ಈ ನಕ್ಷತ್ರಗಳಲ್ಲಿಯೂ, ದಶಮಶುದ್ಧಿ ಇರುವಾಗಲೂ ಒಳ್ಳೇದು, ಪಕ್ಷಚ್ಛಿದ್ರಗಳನ್ನೂ ನವಮಿಯನ್ನೂ ಬಿಟ್ಟು ಮಿಕ್ಕ ತಿಥಿಗಳಲ್ಲಿ ಬಾಲಕರಿಗೆ ಅನ್ನಪ್ರಾಶನವು ಶುಭಕರವಹುದು.

ಶ್ಲೋ॥ ವಾರಾಶ್ಚಭಾಸ್ಕರಗುರುಚಂದ್ರಸಿತೇಂದುಜಾನಾಂ। ಮೇಷಾದಿ ಮೀನರಹಿತಾಸಿತಾಸಿಭಾನಿ। ಭುಕ್ತೌಶಿಶೋಃಶುಭಕರಾಃಪರಿಹೃ ತ್ಯಸೌಮ್ಯಂಭೌಮಂಸಿತಂನವಮನ್ಯಥೇನ ಸಪ್ತಮೇಷು ॥

ಟೀ॥ ಮತ್ತು ಗುರು, ಶುಕ್ರ ಸೋಮ, ಬುಧವಾರಗಳೂ, ಮೇಷ,ವೃಶ್ಚಿಕ, ಮೀನರಾಶಿಗಳನ್ನು ಬಿಟ್ಟು ಮಿಕ್ಕರಾಶಿಗಳು, ೭-೮-೯ ನೇ ರಾಶಿಗಳಲ್ಲಿ ಬುಧ, ಅಂಗಾರಕ, ಶುಕ್ರರು ಇಲ್ಲದಿರುವಿಕೆಯೂ, ಮಗುವಿನ ಅನ್ನ ಪ್ರಾಶನದಲ್ಲಿ ಶುಭಕರವು.

ಅನ್ನಪ್ರಾಶನ ಲಗ್ನದಲ್ಲಿರುವ ಗ್ರಹಗಳ ಫಲವನ್ನು ಹೇಳುತ್ತಾನೆ.

ಶ್ಲೋ ॥ ಕುಷ್ಠೀಲಗ್ನಗತೇರವೌತನುಗತೇಚಂದ್ರೇಸದಾಭಿಕ್ಷುಕಃಪೂರ್ಣೇಂದೌಬಹುಸತ್ರದೋವನಿಸುತೇಪಿತ್ತಾರ್ದಿತೋಜ್ಞೇಸಪ್ರಾಜ್ಞ। ಜ್ಞಾಜೀವೇಬಹುಭೋಗವಾನ್ಭೃಗುಸುತೇದೀರ್ಘಾಯುರರ್ಕಾತ್ಮಜೇ। ವಾತಾಂಗೀತಮಸಿಧ್ವಜೇಪ್ಯನಶನೀಬಾಲಾನ್ನಭೋಕ್ತಾಭವೇತ್ ॥

ಟೀ॥ ಅನ್ನಪ್ರಾಶನ ಲಗ್ನದಲ್ಲಿ ಸೂರ್ಯನಿದ್ದರೆ ಶಿಶುವಿಗೆ ಕುಷ್ಠರೋಗವುಂಟಾಗುತ್ತದೆ. ಕ್ಷೀಣಚಂದ್ರನಿದ್ದರೆ ಶಿಶುವು ಯಾವಾಗ್ಯೂ ಭಿಕ್ಷುಕನಾಗುತ್ತಾನೆ. ಪೂರ್ಣ ಚಂದ್ರನಿದ್ದರೆ ಬಹಳ ಅನ್ನದಾನ ಮಾಡುವನು. ಅಂಗಾರಕನಿದ್ದರೆ ಬಾಲಕನು ಪಿತ್ತ ವ್ಯಾಧಿಯುಳ್ಳವನಾಗುತ್ತಾನೆ. ಬುಧನಿದ್ದರೆ ಜ್ಞಾನವಂತನಾಗುತ್ತಾನೆ. ಗುರುವಿದ್ದರೆ ಬಹುಭೋಗವುಳ್ಳವನಾಗುತ್ತಾನೆ. ಶುಕ್ರನಿದ್ದರೆ ದೀರ್ಘಾಯುಷ್ಮಂತನಾಗುತ್ತಾನೆ. ಶನಿ ಇದ್ದರೆ ವಾಯುರೋಗ ಶರೀರವುಳ್ಳವನಾಗುತ್ತಾನೆ. ರಾಹು ಕೇತುಗಳಿದ್ದರೆ ಯಾವಾಗ್ಯೂ ತಿನ್ನುವುದಕ್ಕಿಲ್ಲದೆ ಕಷ್ಟಪಡುವನು. ಇದರಿಂದ ಬಾಲಕನ ಅನ್ನಪ್ರಾಶನಕ್ಕಾಗಿ ನಿರ್ಣಯಿಸತಕ್ಕ ಶುಭ ಲಗ್ನದಲ್ಲಿ ಪೂರ್ಣ ಚಂದ್ರ, ಬುಧ, ಗುರು, ಶುಕ್ರ, ಈ ನಾಲ್ಕರಲ್ಲಿ ಒಂದು ಗ್ರಹವಿರಬೇಕೆಂದು ಭಾವವು.

ನೂತನ ವಸ್ತ್ರಧಾರಣವು.

ಶ್ಲೋ ॥ ಹಸ್ತೋತ್ತರಾನಿಲಪುನರ್ವಸುತಿಷ್ಯಮಿತ್ರತ್ವಾಷ್ಟ್ರದ್ವಿದೈವವಿಧಿವಾರುಣಪೌಷ್ಣಭೇಷು। ರಿಕ್ತಾಃಕ್ರಿಯಾಳಿಹರಿಚಾಪಝಷಾರ್ಕಭೌಮವಾರಾನ್ವಿಹಾಯನವವಸ್ತ್ರಮುಶಂತಿಧಾರ್ಯಂ ॥

ಟೀ॥ ಹಸ್ತ, ಉತ್ತರ, ಉಷಾ, ಉಭಾ, ಸ್ವಾತೀ, ಪುನರ್ವಸು, ಪುಷ್ಯ, ಅನೂ, ಚಿತ್ತಾ, ವಿಶಾಖಾ, ರೋಹಿಣೀ, ಶತಭಿಷಕ್, ರೇವತೀ, ಈ ನಕ್ಷತ್ರಗಳಲ್ಲುತ್ತಮ. ರಿಕ್ತ ತಿಥಿಗಳನ್ನೂ ಮೇಷ, ವೃಶ್ಚಿಕ, ಸಿಂಹ, ಧ

ನುಸ್ಸು, ಹೀನ ರಾಶಿಗಳನ್ನೂ, ಆದಿತ್ಯಾಂಗಾರಕ ವಾರಗಳನ್ನೂ ಬಿಟ್ಟು ಕಡಮೆ ತಿಥಿ ರಾಶಿ ವಾರಗಳಲ್ಲಿ ನೂತನ ವಸ್ತ್ರವನ್ನು ಧರಿಸತಕ್ಕದ್ದು.

ಕೇಶ ಖಂಡನವು.

ಶ್ಲೋ॥ ಅಶ್ವೀಪುಷ್ಯಪುನರ್ವಸೂಮೃಗಶಿರಸ್ಸ್ವಾತ್ಯಂತವಿಷ್ಣುತ್ರಯಂ। ಚಂದ್ರಜ್ಞಾಮರಪೂಜ್ಯಶುಕ್ರಸಹಿತಾಃಪೂರ್ಣಾಜಯಾಖ್ಯಾಶ್ಶುಭಾಃ॥ ಪೂರ್ವಾಹ್ಣೇಶುಭಲಗ್ನಹೋರದಿವಸೇಯುಗ್ಮೇಚಮಾಸೇಶಿಶೋಃ। ಕೇಶಚ್ಛೇದನಮಿಷ್ಟದಂಮುನಿವರ್ಯೈರ್ವ್ಯಕ್ತಂವರಾಹಾದಿಭಿಃ॥

ಟೀ॥ ಅಶ್ವಿ, ಪುಷ್ಯ, ಪುನ, ಮೃಗಶಿರ, ಸ್ವಾತಿ, ರೇವತೀ, ಶ್ರವಣ, ಧನಿಷ್ಠಾ, ಶತಭಿಷಕ್, ಈ ನಕ್ಷತ್ರಗಳೂ ಸೋಮ, ಬುಧ, ಗುರು ಶುಕ್ರ ವಾರಗಳೊಂದಿಗೆ ಸೇರಿದ ಪೂರ್ಣ ತಿಥಿಗಳೂ, ಜಯ ತಿಥಿಗಳೂ ಕೇಶ ಖಂಡನದಲ್ಲಿ ಶುಭಕರಗಳು. ಮತ್ತು ಪೂರ್ವಾಹ್ನದಲ್ಲೂ ಶುಭಲಗ್ನ ಶುಭಹೋರೆ ಶುಭ ದಿವಸಗಳಲ್ಲಿಯೂ ೨-೪-೬-೮-೧೦ ಇಂತಾ ಸಮ ಮಾಸಗಳಲ್ಲಿಯೂ ಮಗುವಿಗೆ ಕೇಶ ಖಂಡನವನ್ನು ಮಾಡತಕ್ಕದ್ದು.

ಕರ್ಣ ವೇಧನವು.

ಶ್ಲೋ॥ ಮಾಸೇಷಷ್ಠೇಸಪ್ತಮೇವಾಷ್ಟಮೇವಾವೇಧ್ಯೌಕರ್ಣೌದ್ವಾದಶೇಷೋಡಶೇಹ್ನಿ। ಮಧ್ಯೇವಾಹ್ನಃಪೂರ್ವಭಾಗೇನರಾತ್ರೌ। ನಕ್ಷತ್ರೈರ್ದ್ವೇದ್ವೇತಿಥಿರ್ವರ್ಜಯಿತ್ವಾ॥

ಟೀ॥ ೬-೭-೮ನೇ ಮಾಸಗಳಲ್ಲಿ ಮಗು ಹುಟ್ಟಿದ ೧೨-೧೬ನೇ ದಿವಸಗಳಲ್ಲಿಯಾದರೂ, ಮಧ್ಯಾಹ್ನ ಕಾಲದಲ್ಲಿಯಾದರೂ, ಅದರ ಪೂರ್ವಭಾಗದಲ್ಲಿಯಾದರೂ ಒಳ್ಳೇದು. ೨ ನಕ್ಷತ್ರಗಳು ೨ ತಿಥಿಗಳು ಸೇರಿದ ದಿನಗಳನ್ನು ಬಿಟ್ಟು ಪೂರ್ಣ ತಿಥಿ ನಕ್ಷತ್ರಗಳಲ್ಲಿ ಶಿಶುವಿಗೆ ಕಿವಿ ಚುಚ್ಚತಕ್ಕದ್ದು. ರಾತ್ರಿಕಾಲದಲ್ಲಿ ಕರ್ಣವೇಧನವು ಕೂಡದೆಂದು ಭಾವವು.

ಶ್ಲೋ॥ ಹರಿಹರಕರಚಿತ್ರಾಸೌಮ್ಯಪೌಷ್ಣೋತ್ತರಾರ್ದ್ರಾ। ದಿತಿವಸುಷುಘಟಾಳೀಸಿಂಹಲಗ್ನೈರ್ವಿವರ್ಜೇ।ಶಶಿಬುಧಗುರುಶುಕ್ರೈರ್ವಾಸರೇಸುರ್ವ್ಯರಿಕ್ತಾ। ರಹಿತತಿಥಿಷುಶುದ್ಧೈರ್ನೈಧನೇಕರ್ಣವೇಧಃ॥

ಟೀ॥ ಶ್ರವಣ, ಆರ್ದ್ರಾ, ಹಸ್ತ, ಚಿತ್ರಾ, ಮೃಗ, ರೇವತಿ, ಉತ್ತರ, ಉಷಾ, ಉಭಾ, ಪುಷ್ಯ, ಪುನ, ಧನಿಷ್ಠಾ, ಈ ನಕ್ಷತ್ರಗಳಲ್ಲಿ ಉತ್ತಮ. ಕುಂಭ, ವೃಶ್ಚಿಕ, ಸಿಂಹಲಗ್ನಗಳನ್ನು ಪಂಚ ಪರ್ವಗಳನ್ನು ರಿಕ್ತ ತಿಥಿಗಳನ್ನು ಬಿಟ್ಟು ಇತರ ಲಗ್ನ ತಿಥಿಗಳಲ್ಲಿಯೂ, ಸೋಮ, ಬುಧ,

ಗುರು, ಶುಕ್ರವಾರಗಳಲ್ಲಿಯೂ, ಅಷ್ಟಮ ಶುದ್ಧಿ ಇರುವಾಗಲೂ ಕರ್ಣ ವೇಧನವು ಮಾಡತಕ್ಕದ್ದು:

ಶ್ಲೋ॥ ಕರ್ಣವೇಧನಲಗ್ನಸ್ಯನೈಷ್ಟಾಸ್ಸರ್ವೇಷ್ಟಮಸ್ಥಿತಾಃ। ಉಕ್ತೈನೈವವಿಧಾನೇನಕುರ್ಯಾತ್ಕರ್ಣಸ್ಯವೇಧನಂ। ಅನುಕ್ತಮಪಿಕುರ್ಯಾಚ್ಚೇತ್ಕರ್ಣಚ್ಛೇದೋಭವಿಷ್ಯತಿ॥

ಟೀ॥ ಕರ್ಣವೇಧನ ಲಗ್ನಕ್ಕೆ ಅಷ್ಟಮ ಸ್ಥಾನದಲ್ಲಿ ಯಾವ ಗ್ರಹವು ಇರಕೂಡದು. ಹಿಂದೆ ಹೇಳಲ್ಪಟ್ಟ ಕ್ರಮದಂತೆ ಕರ್ಣವೇಧನ ಮಾಡದೆ ಮನಸ್ಸಿಗೆ ಬಂದಂತೆ ಮಾಡಿದರೆ ಚುಚ್ಚಿದ ಕಿವಿಯು ಕಿತ್ತು ಹೋಗುವದು.

ಚೌಲವಿಧಿಯು.

ಶ್ಲೋ॥ ತೃತೀಯವರ್ಷಸ್ಯಥಪಂಚಮೇಬ್ದೆಗತತ್ರಿಭಾಗೆಪ್ರವದಂತಿಚೌಲಂ। ಉದಗ್ಗತೇರ್ಕೇಗುರುಶುಕ್ರತೇಜಃ ಪ್ರಕಾಶಿತಂವ್ಯೋಮ್ನಿಚಶುಕ್ಲಪಕ್ಷೆ॥

ಟೀ॥ ಮಗಹುಟ್ಟಿದ ೩ ವರ್ಷದಲ್ಲಾದರೂ-ಅಥವಾ ೫ನೇವರ್ಷದಲ್ಲಾದರೂ ೫ ವರ್ಷದಲ್ಲಿ ಮೂರುಪಾಲುಕಳದು ಹೋದಮೇಲೆ ಉತ್ತರಾಯಣದಲ್ಲಿ ಗುರು,-ಶುಕ್ರರು ಆಕಾಶದಲ್ಲಿ ಪ್ರಕಾಶಿಸುತ್ತಿರುವಾಗ ಶುಕ್ಲಪಕ್ಷದಲ್ಲಿ ಚೌಲ ಮಾಡತಕ್ಕದ್ದು.

ಶ್ಲೋ॥ ಆದಿತ್ಯಸೌಮ್ಯವಸುವೈಷ್ಣವಪೌಷ್ಣತಿಷ್ಯಾ। ತ್ವಾಷ್ಟ್ರಶ್ವಿಚಂಡಕಿರಣೇಷುದಿವಾಪ್ರಶಸ್ತಂ।ಸ್ವಾತೀವಿಧಾತೃವರುಣೋತ್ತರಭಾನಿಮಧ್ಯಾ।ನ್ಯಾಹುರ್ನಿಶಾಸ್ವಪಿನಚಕ್ಷುರಕರ್ಮಕಾರ್ಯಂ.

ಟೀ॥ ಪುನರ್ವಸೂ, ಮೃಗಶಿರಾ, ಧನಿಷ್ಠಾ, ಶ್ರವಣ, ರೇವತೀ, ಪುಷ್ಯ, ಚಿತ್ರಾ, ಅಶ್ವಿನಿ, ಹಸ್ತ ಈ ನಕ್ಷತ್ರಗಳಲ್ಲಿ ಉತ್ತಮವು, ಸ್ವಾತೀ, ರೋಹಿಣೀ, ಶತಭಿಷಕ್, ಉತ್ತರ, ಉತ್ತರಾಭಾದ್ರ, ಉತ್ತರಾಷಾಢಾ, ಈನಕ್ಷತ್ರಗಳುಮಧ್ಯಮಗಳು ಏವಂಚ ಚೌಲ ಮಧ್ಯಾಹ್ನಕಾಲದಲ್ಲೇ ಮಾಡತಕ್ಕದ್ದೇಹೊರ್ತು ರಾತ್ರಿಕಾಲದಲ್ಲಿ ಮಾಡಕೂಡದು.

ಶ್ಲೋ॥ಷಷ್ಠ್ಯಷ್ಟಮೀಪ್ರತಿಪದಸ್ತಿಥಯಶ್ಚರಿಕ್ತಾವರ್ಜ್ಯಾಃಶಶಾಂಕಗುರುಸೋಮಜಭಾರ್ಗವಾಣಾಂ। ವಾರಾಂಶಕೋದಯವಿಲೋಕನಮಿಷ್ಟಮಾಹುಃಕ್ಷೌರೇತುಕರ್ಮಣಿಶುಭಂನದಿಶಂತಿಚಾನ್ಯೇ.

ಟೀ॥ ಕ್ಷೌರಕರ್ಮದಲ್ಲಿ ಷಷ್ಠಿ, ಅಷ್ಟಮಿ, ಪ್ರತಿಪತ್, ರಿಕ್ತತಿಥಿಗಳು, ಇವುಗಳನ್ನು ಬಿಡತಕ್ಕದ್ದು ಮತ್ತು ಚಂದ್ರ, ಗುರು, ಬುಧ, ಶುಕ್ರ, ಇ

ವರುಗಳ ವಾರಗಳು ಅಂಶಗಳ, ಲಗ್ನಗಳು, ವೀಕ್ಷಣಗಳು, ಇವುಗಳು ಶುಭಪ್ರದಗಳು, ಇತರ ಗ್ರಹಗಳ ವಾರ, ಅಂಶ, ಲಗ್ನವೀಕ್ಷಣಗಳು, ಅಶುಭಗಳು.

ಶ್ಲೋ॥ ಕರ್ಕ್ಯಂಗನಾಮಿಥುನಮೀನಸತುಲೋಕ್ಷನಕ್ರಾಃಪ್ರಜ್ಯಾಃ ಕ್ರಿಯಹಾಳಿಹರಿಭಾಪಘಟಾಜಘನ್ಯಾಃ॥ ತೇಪಿಸ್ವವೀರ್ಯಶುಭಖೇಟಯುತಾವಿಧೇಯಾಚೌಲೇಘಟೋಶುಭಯುತೋಪಿನಿಷಿದ್ಧಏವ ॥

ಟೀ॥ ಚೂಡಾಕರ್ಮದಲ್ಲಿ ಕಟಕ, ಕನ್ಯಾ, ಮಿಥುನ, ಮೀನ, ತುಲಾ, ವೃಷಭ, ಮಕರ, ಈ ರಾಶಿಗಳು, ಉತ್ತಮಗಳು, ಮೇಷ, ವೃಶ್ಚಿಕ, ಸಿಂಹ, ಧನುಸ್ಸು, ಕುಂಭರಾಶಿಗಳು ಅಧಮಗಳು, ಅಂಥಾ ಅಧಮರಾಶಿಗಳು ತಮ್ಮ ಬಲದೊಂದಿಗೂ, ಶುಭ ಗ್ರಹಗಳೊಂದಿಗೂ ಕೂಡಿಕೊಂಡು ಇದ್ದರೆ ಆ ರಾಶಿಗಳಲ್ಲೂ, ಮಾಡಬಹುದು. ಆದರೆ ಕುಂಭರಾಶಿ ಮಾತ್ರ ಯೆಷ್ಟು ಬಲವಿದ್ದರೂ ಬಿಡತಕ್ಕದ್ದಾಗಿ ಇದೆ.

ಶ್ಲೋ॥ ತ್ರಿಕೋಣಕೇಂದ್ರಾಯಗತೇಷುಸೌಮ್ಯೇ। ಷ್ವಾಯಾರಿದುಶ್ಚಿಕ್ಯಭವಾಶ್ರಿತೇಷು। ಪಾಪೇಷ್ವಶುದ್ಧೇಷ್ಟಮಕೇಶಿಶೂನಾಂ।ಚೌಲಂಪ್ರಶಸ್ತಂಮುನಿಭಿಃಪ್ರದಿಷ್ಟಮ್ ॥

ಟೀ॥ ಶುಭ ಗ್ರಹಗಳು ಲಗ್ನ ೪-೫-೭-೯-೧೦-೧೧ ಈ ಸ್ಥಾನಗಳಲ್ಲಿ ಇರುವಾಗಲೂ, ೩-೬-೧೧ ಈ ಸ್ಥಾನಗಳಲ್ಲಿ ಪಾಪ ಗ್ರಹಗಳಿರುವಾಗಲೂ ಅಷ್ಟಮಶುದ್ಧಿ ಇರುವಾಗಲೂ ಮಗುವಿಗೆ ಚೌಲಕರ್ಮವನ್ನು ಮಾಡುವದುತ್ತಮ.

ಶ್ಲೋ॥ ಸೂನೋರ್ಮಾತರಿಗರ್ಭಿಣ್ಯಾಂಚೂಡಾಕರ್ಮನಕಾರಯೇತ್।ಯದಿಕುರ್ಯಾದ್ವಿಪತ್ತಿಸ್ಯಾದ್ಗರ್ಭಸ್ಯೋತಶಿಶೋಶ್ಚ ವಾ ॥

ಟೀ॥ ಮಗುವಿನ ತಾಯಿ ಗರ್ಭವತಿಯಾಗಿರುವಾಗ ಮಗುವಿಗೆ ಚೌಲಕರ್ಮವನ್ನು ಮಾಡಕೂಡದು, ಹಾಗೆಮಾಡಿದರೆ ತಾಯಿ ತಂದೆಗಳಿಗಾದರು ಅಥವಾಮಗುವಿಗಾದರು ಅನಿಷ್ಟ ಸಂಭವಿಸುವದು.

ಅಕ್ಷರಾಭ್ಯಾಸ.

ಶ್ಲೋ॥ ಉದಗರ್ಕೇಪಂಚಮೇಬ್ದೇಪಂಚಮೇಮಾಸಿಪಂಚಮೇ । ದಿವಸೇ ಪಿಚಬಾಲಾನಾಮಕ್ಷರಗ್ರಹಣಂಸ್ಮೃತಂ ॥

ಟೀ॥ ಬಾಲಕರಿಗೆ ೫ನೇ ವರ್ಷ, ೫ನೇ ಮಾಸ, ೫ನೇ ದಿವಸದಲ್ಲಿ ವಿದ್ಯಾಭ್ಯಾಸ ಮಾಡಿಸತಕ್ಕದ್ದು. ಆ ಕಾಲ ಉತ್ತರಾಯಣ ವಾಗಿದ್ದರೆ ಉತ್ತಮ.

ಶ್ಲೋ॥ ಉದಗ್ಗತೆಭಾಸ್ವತಿಪಂಚಮಬ್ದೇಪ್ರಾಪ್ತೇಕ್ಷರಸ್ವೀಕರಣಂಶಿ
ಶೂನಾಂ । ಸರಸ್ವತೀಂವಿಘ್ನವಿನಾಯಕಂಚಗುಡೌದನಾದ್ಯೈರ
ಭಿಪೂಜ್ಯಕುರ್ಯಾತ್ ॥

ಟೀ॥ ಸೂರ್ಯನು ಉತ್ತರಾಯಣವಲ್ಲಿರುವಾಗ ಮಗುವಿಗೆ ೫ನೇ ವರುಷದಲ್ಲಿ ಸರಸ್ವತೀ ವಿಘ್ನೇಶ್ವರರಿಗೆ ಮಧುರವಾದ ಭಕ್ಷ್ಯಭೋಜ್ಯಾದಿಗಳಿಂದ ಪೂಜೆಯಂಮಾಡಿ ವಿದ್ಯಾಭ್ಯಾಸವಂ ಮಾಡಿಸತಕ್ಕದ್ದು.

ಶ್ಲೋ॥ ಹಸ್ತಾದಿತ್ಯಸಮೀರಮಿತ್ರಪುರಜಿತ್ತ್ವಾಷ್ಟ್ರಾಶ್ವಿಚಿತ್ರಾಚ್ಯು
ತೇ। ಷ್ವರಾರ್ಕ್ಕಜವಾಸರಾದಿರಹಿತೇರಾಶೌಚರೇಚೋಭಯೇ। ಪ
ಕ್ಷೇಪೂರ್ಣನಿಶಾಕರೇಪ್ರತಿಪದಂರಿಕ್ತಾಂವಿಹಾಯಾಷ್ಟಮೀಂ । ಷ
ಷ್ಠೀಮಷ್ಟಮಶುದ್ಧಿಭಾಜಿಭವನೇಪ್ರೋಕ್ತಾಕ್ಷರಸ್ವೀಕೃತಿಃ॥

ಟೀ॥ ಹಸ್ತ, ಪುನ, ಸ್ವಾತೀ, ಅನೂ, ಆದ್ರಾ, ರೇವತೀ, ಅಶ್ವಿನೀ, ಚಿತ್ರಾ, ಶ್ರವಣ, ಈ ನಕ್ಷತ್ರಗಳಲ್ಲಿ ಉತ್ತಮ, ಆದಿತ್ಯ, ಅಂಗಾರಕ,ಶನಿವಾರಗಳನ್ನು, ಬಿಟ್ಟು ಮಿಕ್ಕ ವಾರಗಳಲ್ಲಿಯೂ ಚರದ್ವಿಸ್ವಭಾವ ರಾಶಿಗಳಲ್ಲಿಯೂ, ಶುಕ್ಲ ಕೃಷ್ಣ ಪಕ್ಷಗಳಲ್ಲಿ ಚಂದ್ರನು ಪೂರ್ಣನಾಗಿರುವಾಗಲೂ ಉತ್ತಮ. ಪಾಡ್ಯಮಿಗಳನ್ನೂ ರಿಕ್ತತಿಥಿಗಳನ್ನು ೨ ಅಷ್ಟಮಿಗಳನ್ನು, ೨ ಷಷ್ಠಿಗಳನ್ನು ಬಿಟ್ಟು ಅಷ್ಟಮ ಶುದ್ಧಿ ಇರುವ ಶುಭಲಗ್ನದಲ್ಲಿ ಅಕ್ಷರ ಸ್ವೀಕಾರ ಮಾಡಿಸತಕ್ಕದ್ದು.

ಉಪನಯನ ಪ್ರಕರಣವು.

ಶ್ಲೋ॥ಉಕ್ತರ್ತೌಗರ್ಭಾಷ್ಟಮಾದ್ಯೇಕ್ಷವರ್ಷೇವಿಪ್ರಾದೀನಾಮುಚ್ಯ
ತೇಮೌಂಜಿಬಂಧಃ॥ ಅರ್ಥಾಯಸ್ತ್ರೀಧರ್ಮಪುತ್ರಾಖ್ಯಸಂಸ್ಥೇಚೇದ್ವಾ
ಗೀಶಸ್ಸ್ಯಾಚ್ಛ್ರೇಷ್ಠೋಮೌಂಜಿಬಂಧಃ ॥

ಟೀ॥ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಸೂತ್ರಕಾರರಿಂದ ಹೇಳಲ್ಪಟ್ಟಿರುವ ವಸಂತ ಗ್ರೀಷ್ಮ ಶರದೃತುಗಳಲ್ಲಿಯೂ, ಹುಟ್ಟಿದ್ದು ಮೊದಲು ಬ್ರಾಹ್ಮರಿಗೆ ೮ನೇ ವರ್ಷ, ಕ್ಷತ್ರಿಯರಿಗೆ ೧೧ನೇ ವರ್ಷ ವೈಶ್ಯರಿಗೆ ೧೨ನೇ ವರ್ಷಗಳಲ್ಲಿಯೂ ೨--೧೧--೭--೯--೫ ಈ ರಾಶಿಗಳಲ್ಲಿ ಬೃಹಸ್ಪತಿ ಇರುವಾಗ ಬ್ರಾಹ್ಮಣಾದಿ ಮೂರು ವರ್ಣದವರಿಗೆ ಉಪನಯನವಂ ಮಾಡತಕ್ಕದ್ದು.

ಶ್ಲೋ॥ ಋಗ್ವೇದಾಧಿಪತಿರ್ಜೀವೋಯಜುರ್ವೇದಾಧಿಪಸ್ಸಿತಃ । ಸಾಮ
ವೇದಾಧಿಪೋಭೌಮಶ್ಶಶಿಜೋಽಥರ್ವಣಾಯಕಃ ॥

ಟೀ॥ ಋಗ್ವೇದಕ್ಕೆ ಬೃಹಸ್ಪತಿಯು, ಎಜುರ್ವೇದಕ್ಕೆ ಶುಕ್ರನು, ಸಾ-

ಮವೇದಕ್ಕೆ ಅಂಗಾರಕನು, ಅಥರ್ವಣ ವೇದಕ್ಕೆ ಬುಧನು ಅಧಿಪತಿಗ ಳೆಂದು ತಿಳಿಯತಕ್ಕದ್ದು.

ಶ್ಲೋ॥ ಚಂದ್ರಾದಿತ್ಯೋತ್ತರಾಶ್ವಿಶ್ರವಣಪಸುಮರುತ್ತ್ವಾಷ್ಟ್ರಪೌಷ್ಣಾರ್ಕಮಿತ್ರ। ಪ್ರಾಜೇಶಾರ್ಯೇಷುಸೌಮ್ಯಾಮರಗುರುಶಶಭೃಗ್ಭಾವರಾಶ್ಯಂಶಕೇಷು। ತ್ಯಕ್ತ್ವಾನಧ್ಯಾಯರಿಕ್ತಾಪಿತೃತಿಥಿಷುಯಮಾರಾರ್ಕಯುಕ್ತಾನ್ಯರಾಶೀ। ಗೋಜೋಪಾಂತ್ಯಾಜ್ಜನಾಕರ್ಕಿತುಲಮಿಥುನಭೇಷ್ವಷ್ಟಮೇಧಾಮ್ನಿಶುದ್ಧೇ ॥

ಟೀ॥ ಹ್ಮ, ಪುನ, ಉತ್ತರ, ಉಷಾ, ಉಭಾ, ಅಶ್ವಿನೀ, ಶ್ರವಣ, ಧನಿಷ್ಠಾ, ಸ್ವಾತಿ, ಚಿತ್ರಾ, ರೇವ, ಹಸ್ತ, ಅನೂ, ರೋ, ಪುಷ್ಯ, ಈ ನಕ್ಷತ್ರಗಳಲ್ಲಿಯೂ ಬುಧ, ಗುರು, ಸೋಮ, ಶುಕ್ರ, ಅಂಗಾರಕ, ಇವರುಗಳ ರಾಶಿಗಳಲ್ಲಿಯೂ ಅಂಶಗಳಲ್ಲಿಯೂ ಉತ್ತಮ, ಅನಧ್ಯಾಯ ದಿನಗಳನ್ನು ರಿಕ್ತ ತಿಥಿಗಳನ್ನು, ಶ್ರಾದ್ಧ ದಿನಗಳನ್ನು. ಶನಿ, ಅಂಗಾರಕ, ಸೂರ್ಯ, ಇವರುಗಳಿರುವ ರಾಶಿಗಳನ್ನೂ ಬಿಟ್ಟು ವೃಷಭ, ಮೇಷ, ಕುಂಭ, ಕನ್ಯಾ, ಕಟಕ, ತುಲಾ, ಮಿಥುನ ರಾಶಿಗಳಲ್ಲಿಯೂ, ಉಪನಯನ ಲಗ್ನಕ್ಕೆ ಅಷ್ಟಮಶುದ್ಧಿ ಇರುವಾಗಲೂ ಉಪನಯನವನ್ನು ಮಾಡಿಸತಕ್ಕದ್ದು.

ಶ್ಲೋ॥ ಮೈತ್ರಹಸ್ತತ್ರಯೇವಿಷ್ಣುತ್ರಯೇಪೌಷ್ಣೋತ್ತರಾತ್ರಯೇ। ಧಾತ್ರದ್ವಯೇತಿದಿಜ್ಯೇಚದಸ್ರಭೇಷ್ವುತ್ತಮಂವ್ರತಂ ॥

ಟೀ॥ ಅನೂರಾಧಾ, ಜ್ಯೇಷ್ಠಾ, ಮೂಲ, ಹಸ್ತ, ಚಿತ್ರಾ, ಸ್ವಾತೀ, ಶ್ರವಣ, ಧನಿಷ್ಠಾ ಶತಭಿಷಕ್, ರೇವತೀ, ಉತ್ತ, ಉಷಾ, ಉಭಾ, ರೋಹಿಣೀ, ಮೃಗಶೀರ್ಷ, ಪುನ, ಪುಷ್ಯ, ಅಶ್ವಿನೀ ಈ ನಕ್ಷತ್ರಗಳಲ್ಲಿ ಉಪನಯನ ವ್ರತ ಮಾಡುವದುತ್ತಮ.

ಶ್ಲೋ ॥ ಚಂದ್ರೋಮಾತಾಪಿತಾಸೂರ್ಯಃಪ್ರಾಣಾಶ್ಚೈವಬೃಹಸ್ಪತಿಃ। ತಸ್ಮಾದ್ಬಲತ್ರಯಮ್ಪ್ರೇಕ್ಷ್ಯಂಲಗ್ನೇವಾಗೋಚರೇಪಿವಾ ॥

ಟೀ॥ ಚಂದ್ರನು ತಾಯಿ, ಸೂರ್ಯನು ತಂದೆಯು, ಬೃಹಸ್ಪತಿಗಳು ಪ್ರಾಣವು ಆದ್ದರಿಂದ ಈ ಮೂರು ಗ್ರಹಗಳು ಜಾತಕದಲ್ಲಿಯಾದರೂ ಗೋಚಾರದಲ್ಲಿಯಾದರೂ ಬಲಿಷ್ಠರಾಗಿರತಕ್ಕದ್ದು.

ಶ್ಲೋ॥ ಶಾಖೇಶರವಿವರ್ಣೇಶಗುರೂಣಾಮ್ಬಲಪೂರ್ವಕಂ। ತಥಾಷ್ಟಮಂಗುರುಬಲಂಮುಖ್ಯಮಾಚಾರ್ಯಶಿಷ್ಯಯೋಃ ॥

ಟೀ॥ ಶಾಖಾಧಿಪತಿಯು, ಸೂರ್ಯನು, ವರ್ಣಾಧಿಪತಿಯು, ಗುರುವು,

ಶ್ಲೋ॥ ಉದಗ್ಗತೇಭಾಸ್ವತಿ

ಶೂನಾಂ । ಸರಸ್ವತೀಂ ವಿಘ್ನ

ಭಿಪೂಜ್ಯಕುರ್ಯಾತ್ ॥

ಟೀ॥ ಸೂರ್ಯನು ಉತ್ತರಾಯಣದಲ್ಲಿ

ಷದಲ್ಲಿ ಸರಸ್ವತೀ ವಿಘ್ನೇಶ್ವರರಿಗೆ

ಳಿಂದ ಪೂಜೆಯಂಮಾಡಿ ವಿದ್ಯಾಭ್ಯಾಸ

ಶ್ಲೋ॥ ಹಸ್ತಾದಿತ್ಯಸವಿಶಾಖಮಿತ್ರ

ತೇ। ಷ್ಟ್ಯಾರಾರ್ಕ್ಯಕರ್ಣಜವಾಸ

ಕ್ಷೆಪೂರ್ಣನಿಶಾಕರೆಪ್ರತಿ

ಷ್ಮೀಮುಷ್ಟ್ವಮುಕುವ್ಛಿಭಾಜಿ

ಟೀ॥ ಹಸ್ತ, ಪುನ, ಸ್ವಾತೀ,

ಚಿತ್ರಾ, ಶ್ರವಣ, ಈ ನಕ್ಷತ್ರಗಳಲ್ಲಿ

ನಿವಾರಗಳನ್ನು, ಬಿಟ್ಟು

ಶಿಗಳಲ್ಲಿಯೂ, ಶುಕ್ಲ ಕೃಷ್ಣ

ವಾಗಲೂ ಉತ್ತಮ. ಪಾಡ್ಯಮಿ

ಮಿಗಳನ್ನು, ೦ ಷಷ್ಠಿಗಳನ್ನು

ಗ್ನದಲ್ಲಿ ಅಕ್ಷರ ಸ್ವೀಕಾರ ಮಾಡ

ಉಪನಯನ

ಶ್ಲೋ॥ಉಕ್ತರಾಗಭಾರ್ಯಷ್ಟ

ತೇಮೌಂಜಿಬಂಧಃ॥ ಅಥಾ

ಗೀಶೆನ್ಯಾಬ್ಧೆಕೋರ್ಮಾಂಜಿಬಂ

ಟೀ॥ ಬ್ರಾಹ್ಮಣ ಕ್ಷತ್ರಿಯ

ಟ್ಟರುವ ವಸಂತ ಗ್ರೀಷ್ಮ ಶರತ್

ಲು ಬ್ರಾಹ್ಮರಿಗೆ ೮ನೇ ವರ್ಷ, ಕ್ಷ

೧೧ನೇ ವರ್ಷಗಳಲ್ಲಿಯೂ ೦-೧೧

ಇರುವಾಗ ಬ್ರಾಹ್ಮಣಾದಿ

ಮಾಡತಕ್ಕದ್ದು.

ಶ್ಲೋ॥ ಋಗ್ವೇದಾಧಿಪತಿ

ವೇದಾಧಿಪೋಭೌಮತ್ಯ

ಟೀ॥ ಋಗ್ವೇದಕ್ಕೆ ಬೃಹ

ಟೀ॥ ಹಗಲನ್ನು ಮೂರು ಭಾಗವಮಾಡಿ ೧ನೇ ಭಾಗದಲ್ಲಿ ದೈವಕಾರ್ಯ ಗಳನ್ನೂ ೨ನೇ ಭಾಗದಲ್ಲಿ ಮನುಷ್ಯರ ಕಾರ್ಯವನ್ನೂ, ೩ನೇ ಭಾಗದಲ್ಲಿ ಪಿ ತೃಕಾರ್ಯಗಳನ್ನೂ ಮಾಡತಕ್ಕದ್ದು.

ಶ್ಲೋ॥ ಏಕಸ್ಮಿನ್ಕೇಂದ್ರಗೇಜೀವೇಶುಕ್ರೇವಾಪಾಪಕೇಂದ್ರಜಾಃ । ದೋ ಷಾವಿನಾಶಮಾಯಾಂತಿ ಪಾಪಂಭಾಗೀರಥೀಜಲಾತ್ ॥

ಟೀ॥ ಒಬ್ಬ ಬೃಹಸ್ಪತಿಯಾದರೂ, ಒಬ್ಬ ಶುಕ್ರನಾದರೂ ಕೇಂದ್ರ ಸ್ಥಾನಗಳಲ್ಲಿದ್ದರೆ ಗಂಗಾನದಿಯು ಪಾಪಗಳನ್ನು ಪರಿಹರಿಸುವಂತೆ ಪಾಪಗ್ರಹಗಳು ಕೇಂದ್ರಸ್ಥಾನಗಳಲ್ಲಿ ಸೇರುವದರಿಂದುಂಟಾಗುವ ದೋ ಷಗಳನ್ನು ಹೋಗಲಾಡಿಸುವನು,

ಶ್ಲೋ॥ ಮಿತ್ರರಾಶಿಗತೇಜೀವೇಶುಕ್ರೇವಾಪಾಪಕೇಂದ್ರಜಾಃ। ಹರೇರ್ನ ಶ್ಯಂತಿದೋಷಾಶ್ಚ ಸ್ಮರಣಾದಘರಾಶಯಃ ॥

ಟೀ॥ ಗುರುವಾದರೂ, ಶುಕ್ರನಾದರೂ ಮಿತ್ರಕ್ಷೇತ್ರದಲ್ಲಿದ್ದರೆ ಪಾಪ ಗ್ರಹಗಳು ಕೇಂದ್ರಗಳಲ್ಲಿ ಇರುವ ದೋಷಗಳನ್ನು ಹರಿಸ್ಮರಣೆಯು ಪಾಪಗಳನ್ನು ಹರಿಸುವಂದದಿ ಹೋಗಲಾಡಿಸುತ್ತಾನೆ.

ಶ್ಲೋ॥ ಅತಿಮಿತ್ರ ನವಾಂಶಸ್ಥೇಶಾಖೇಶೇಸತಿ ತ್ರಿಕೋಣಗೇ । ದೋಷಾವಿ ನಾಶಮಾಯಾಂತಿಗ್ರೀಷ್ಮೆಷುಸಲಿಲಂಯಥಾ ॥

ಟೀ॥ ಶಾಖಾಧಿಪತಿಯು ಅತಿ ಮಿತ್ರನವಾಂಶವಲ್ಲಿದ್ದರೂ ಪಂಚಮ ಕೋಣಗಳಲ್ಲಿದ್ದರೂ ಗ್ರೀಷ್ಮಕಾಲದಲ್ಲಿ ನೀರುಗಳೊಣಗಿಹೋಗುವಂ ತೆ ಸಮಸ್ತ ದೋಷಗಳೂ ನಾಶವನ್ನು ಹೊಂದುತ್ತವೆ.

ಶ್ಲೋ॥ ಯತ್ರೈಕಾದಶಗಸ್ಸೂರ್ಯಶ್ಚಂದ್ರೋವಾಮಿತ್ರರಾಶಿಗಃ।ಹಂ ತಿಲಗ್ನೋದ್ಭವಂದೋಷಂಪೂತನಾಮಿವಕೇಶವಃ ॥

ಟೀ॥ ಲಗ್ನಕ್ಕೆ ೧೧ರಲ್ಲಿ ಸೂರ್ಯನಿದ್ದರೂ ಚಂದ್ರನು ಅತಿಮಿತ್ರನವಾಂ ಶದಲ್ಲಿ ಇದ್ದರೂ, ಈ ಯೋಗವು ಬಾಲಕೃಷ್ಣನು ಪೂತನಿಯನ್ನು ಕೊಂ ದಂತೆ ಲಗ್ನದಿಂದ ಹುಟ್ಟದ ಸಮಸ್ತ ದೋಷಗಳನ್ನು ಹರಿಸುತ್ತದೆ.

ಶ್ಲೋ॥ ಅತಿಮಿತ್ರಗತಸ್ಸೂರ್ಯಶ್ಚಂದ್ರೋವಾಯದಿಲಾಭಗಃ । ಹಂ ತಿದೋಷಚಯಂತದ್ವತ್ಪಾಪಸಂಘಂಹರಸ್ಮೃತಃ ॥

ಟೀ॥ ಅತಿ ಮಿತ್ರಕ್ಷೇತ್ರದಲ್ಲಿರುವ ರವಿಯೂ ೧೧ರಲ್ಲಿರುವ ಚಂದ್ರನೂ ಶಿವ ಹರಿಸ್ಮರಣೆಯು ಪಾಪವನ್ನು ಹೋಗಲಾಡಿಸಿದಂತೆ ದೋಷಸಮೂ ಹವನ್ನು ಹರಿಸುತ್ತಾರೆ.

ಶ್ಲೋ॥ ತ್ರಿಷಷ್ಠಲಾಭಗೋಭೌಮಃಶಶೀವಾಯದಿತುಂಗಗಃ। ಸರ್ವ

ಇವರುಗಳು ಬಲಿಷ್ಠರಾಗಿರಬೇಕು. ಆದರೂ ಆಚಾರ್ಯ ಶಿಷ್ಯರಿಬ್ಬರಿಗೂ ಮುಖ್ಯವಾಗಿ ಗುರುಬಲವಿರತಕ್ಕದ್ದು.

ಶ್ಲೋ॥ ಉಕ್ತೇಪಿವರ್ಷೇನಬಲೀಗುರುಶ್ಚೇಚ್ಛಾಂತ್ಯಾಂತ್ಯಾಪ್ರಶಸ್ತಂವ್ರತಬಂಧಕರ್ಮ। ಅನುಕ್ತವರ್ಷೇನಬಲಪ್ರದೋಪಿನೈವ್ರತಯೋರಬ್ದಬಲಂಬಲೀಯಃ॥

ಟೀ॥ ಬ್ರಾಹ್ಮಣಾದಿಮೂರು ವರ್ಣಗಳಿಗೆ ಹೇಳಲ್ಪಟ್ಟ ವರ್ಷಗಳಲ್ಲಿ ಒಂದುವೇಳೆ ಗುರು ಬಲವಿಲ್ಲದಿದ್ದರೂ ಶಾಂತಿ ಮೊದಲಾದ ಕರ್ಮಗಳಿಂದ ಉಪನಯನವನ್ನು ಮಾಡಬಹುದು. ಹೇಳಲ್ಪಡದ ವರ್ಷಗಳಲ್ಲಿ ಬಲಿಷ್ಠನಾಗಿದ್ದರೂ ಉಪನಯನವನ್ನು ಮಾಡ ಕೂಡದು. ಯಾತಕ್ಕಂದರೆ ಗುರುಬಲ, ವರ್ಷಬಲ, ಇವುಗಳೊಳಗೆ ವರ್ಷಬಲವೇ ಶ್ರೇಷ್ಠವು.

ಶ್ಲೋ॥ ಜನ್ಮಾಂತನಿಧನಸ್ಥೋಪಿಪೂಜಯಾಶುಭದೋಗುರುಃ। ಉಕ್ತಾಬ್ದೇಚೇದನುಕ್ತೇತುನಶುಭೋಬಲವಾನಪಿ॥

ಟೀ॥ ಗುರುವು ಹೇಳಲ್ಪಟ್ಟ ವರ್ಷಗಳಲ್ಲಿ ಜನ್ಮ, ದ್ವಾದಶ, ಅಷ್ಟಮಸ್ಥಾನಗಳಲ್ಲಿದ್ದರೂ ಗುರು ಪ್ರೀತಿಕರವಾದ ಪೂಜಾದಿ ಶಾಂತಿಗಳಿಂದ ಶುಭಪ್ರದನಾಗುತ್ತಾನೆ. ಹೇಳಲ್ಪಡದ ವರ್ಷಗಳಲ್ಲಾದರೂ ಬಲಿಷ್ಠನಾಗಿ ಇದ್ದರೂ ಶುಭಪ್ರದನಲ್ಲ.

ಶ್ಲೋ॥ ಕೋದಂಡಕರ್ಕಿಮೀನೇಷುಸ್ಥಿತೋಪಿಶುಭದೋಗುರುಃ। ತದ್ರಾಶಿಭಾಗಸಂಸ್ಥೋಪಿಶುಭದಃಪ್ರೋಚ್ಯತೇಸ್ವಯಂ॥

ಟೀ॥ ಗುರುವು ಕಟಕ, ಧನುಸ್ಸು, ಮೀನ ರಾಶಿಗಳಲ್ಲಿಯೂ ಅವುಗಳ ಅಂಶಗಳಲ್ಲಿಯೂ ಇದ್ದರೆ ಆ ರಾಶಿಗಳು ಹೇಳಲ್ಪಟ್ಟ ಜನ್ಮ, ಅಷ್ಟಮ, ದ್ವಾದಶ ರಾಶಿಗಳಾಗಿದ್ದರೂ ಶುಭಪ್ರದನಾಗುವನು.

ಶ್ಲೋ॥ ಸ್ವೋಚ್ಚೇಸ್ವಮಿತ್ರೇಸ್ವಗೃಹೇತ್ರಿಕೋಣೇಜೀವೋಗತೋಯದ್ಯುಪನೀಯಕಾಲೇ। ಶಶೋಷ್ಟಚತುರ್ಥೇಸಿಧನೇತೃತೀಯೇಕರಾಂತ್ಯಸಂಸ್ಥೋಪಿಶುಭಪ್ರದಸ್ಸ್ಯಾತ್॥

ಟೀ॥ ಉಪನಯನ ಕಾಲದಲ್ಲಿ ಗುರುವು ಉಚ್ಚ, ಸ್ವಕ್ಷೇತ್ರ, ಮೂಲತ್ರಿಕೋಣ, ಮಿತ್ರಕ್ಷೇತ್ರಗಳಲ್ಲಿದ್ದರೆ ಆ ರಾಶಿಗಳು ಜನ್ಮ, ಅಷ್ಟಮ, ದ್ವಾದಶ, ತೃತೀಯ, ಚತುರ್ಥ, ದಶಮ, ಈ ಸ್ಥಾನಗಳಾಗಿದ್ದರೂ ಶುಭಪ್ರದನಾಗುತ್ತಾನೆ.

ಶ್ಲೋ॥ ದ್ವಿತೀಯೋಚತೃತೀಯನಾಚಪಂಚಮೀಸಪ್ತಮೀತಥಾ। ತ್ರಯೋದಶೀಚದಶಮೀಪ್ರಶಸ್ತಾತಿಥಯೋವ್ರತೇ॥

ಟೀ॥ ಉಪನಯನದಲ್ಲಿ ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ತ್ರಯೋದಶೀ, ದಶಮೀ, ಈ ತಿಥಿಗಳು ಶ್ರೇಷ್ಠಗಳು.

ಶ್ಲೋ॥ ಪೂರ್ವಪಕ್ಷಶ್ಶುಭಃಪ್ರೋಕ್ತಃಕೃಷ್ಣಶ್ಚಾಂತ್ಯತ್ರಿಕಂವಿನಾ।
ಕೃಷ್ಣಪಕ್ಷೇಪಿತತ್ರ್ಯಂಶೇತ್ರಯೋದಶ್ಯಪಿಕೇಚನ ॥

ಟೀ॥ ಉಪನಯನದಲ್ಲಿ ಶುಕ್ಲಪಕ್ಷವು ಶುಭಕರವು, ಏಕಾದಶೀ, ದ್ವಾದಶೀ, ತ್ರಯೋದಶೀ, ಚತುರ್ದಶೀ, ಅಮಾವಾಸ್ಯೆ ಈ ೫ ತಿಥಿಗಳನ್ನು ಬಿಟ್ಟು ಕಡಮೆ ಕೃಷ್ಣಪಕ್ಷದ ತಿಥಿಗಳು ಶುಭಕರಗಳು. ಅಲ್ಲಿ ಕೆಲವರು ತ್ರಯೋದಶಿಯಲ್ಲಿಯೂ ಮಾಡಬಹುದೆಂದು ಹೇಳುವರು.

ಶ್ಲೋ॥ ಆಪಂಚಮ್ಯಾಸ್ತುತಿಥಯಃಪರಾಸ್ತ್ವತಿನಿಂದಿತಾಃ।ನಿತ್ಯಾನಧ್ಯಾಯದಿವಸಾನ್ವರ್ಜಯೇದ್ಬೌಜನಾಯನೇ ॥

ಟೀ॥ ಕೃಷ್ಣಪಕ್ಷಪಂಚಮಿಯ ತರುವಾಯ ೧೦ ತಿಥಿಗಳು ತ್ಯಾಜ್ಯಗಳು, ಆದ್ದರಿಂದ ಆ ತಿಥಿಗಳನ್ನೂ, ಅನಧ್ಯಾಯ ತಿಥಿಗಳನ್ನೂ ಬಿಟ್ಟು ಇತರ ತಿಥಿಗಳಲ್ಲಿ ಉಪನಯನ ಕರ್ಮವನ್ನು ಮಾಡತಕ್ಕದ್ದೆಂದು ಭಾವವು.

ಅನಧ್ಯಾಯದಿನಗಳು.

ಶ್ಲೋ॥ ನೈಮಿತ್ತಿಕಾಸ್ತ್ವನಧ್ಯಾಯಾಧೃತಿಪಾತಾರ್ಧವಿಶ್ರುತಾಃ।
ಅಷ್ಟಮ್ಯಾಂಚಚತುರ್ದಶ್ಯಾಂಪೂರ್ಣಿಮಾಯಾಂಕುಹೂತಿಥೌ।
ಸಂಧ್ಯಯೋರ್ಗರ್ಜಿತೇನೈವಸ್ವಾಧ್ಯಾಯಃಪ್ರತಿಪತ್ಸ್ವಪಿ । ಪೂರ್ವರಾತ್ರ್ಯಾಂಯಥಾಮೇಘೋಯತ್ರಗರ್ಜತಿವಾಸರೇ। ನವೇದಾಧ್ಯಯನಂಕಾರ್ಯಂಸರ್ವಥೈವಮಹಾನಿಶಿ ॥

ಟೀ॥ ವೈಧೃತಿ, ವ್ಯತೀಪಾತ, ಮಹಾಪಾತ, ಈ ದಿವಸಗಳ ಅರ್ಧ ದಿನಗಳು ಬಂದರೂ, ಅಷ್ಟಮೀ, ಚತುರ್ದಶೀ, ಪೂರ್ಣಿಮಾ, ಅಮಾವಾಸ್ಯೆ, ಪ್ರಾತಃಕಾಲ ಸಾಯಂಕಾಲಗಳಲ್ಲಿ ಮೇಘಗರ್ಜನೆ ಉಂಟಾದ ದಿನಗಳೂ, ಪ್ರತಿಪತ್ತುಗಳು, ಪೂರ್ವರಾತ್ರಿಯಲ್ಲಿ ಯಾವದಿವಸ ಮೇಘಗರ್ಜನೆಯಾಗುತ್ತದೋ ಆ ದಿನವೂ, ಅರ್ಧರಾತ್ರಿಯೂ, ಇವುಗಳಲ್ಲಿ ವೇದಾಧ್ಯಯನ ಮಾಡಕೂಡದು.

ಶ್ಲೋ॥ ತ್ರಯೋದಶೀಸಪ್ತಮೀಚಚತುರ್ಥೀಕಲಯಾಯದಿ । ರಾತ್ರೌಸ್ಪೃಶತಿಮೌನೀಸ್ಯಾತ್ಸಾಯಂಸಂಧ್ಯೋಷತತ್ರಮಾನವಃ ॥

ಟೀ॥ ತ್ರಯೋದಶೀ, ಸಪ್ತಮೀ, ಚತುರ್ಥೀ, ಈ ಮೂರು ತಿಥಿಗಳೂ ರಾತ್ರಿಯಲ್ಲಿ ೧ ಘಳಿಗೆಮಾತ್ರ ಸಂಬಂಧಿಸಿದ್ದರೆ ಆದಿನ ಸಾಯಂಕಾ

ದೋಷಜಾತಂ ಹಂತಿ ಪಾಪಂ ಪಂಚಾಕ್ಷರೀ ಯಥಾ ॥

ಟೀ॥ ೩-೬-೧೧ ಈ ಸ್ಥಾನಗಳಲ್ಲಿರುವ ಕುಜನೂ ಉಚ್ಚಕ್ಷೇತ್ರದಲ್ಲಿರುವ ಚಂದ್ರನು ಸಹ ಪಂಚಾಕ್ಷರೀ ಮಂತ್ರವು ಪಾಪಗಳನ್ನು ಹರಿಸುವಂತೆ ಸರ್ವ ದೋಷಗಳನ್ನು ಹರಿಸುತ್ತಾರೆ.

ಶ್ಲೋ॥ ಸ್ವಕಮಿತ್ರಗತೋ ಭೌಮಶ್ಶಶೀ ವಾ ಯದಿ ಲಾಭಗಃ । ಹಂತಿ ದೋಷಚಯಂ ಸರ್ವಂ ಪಿನಾಕೀ ತ್ರಿಪುರಂ ಯಥಾ ॥

ಟೀ॥ ಮಿತ್ರಕ್ಷೇತ್ರದಲ್ಲಿರುವ ಕುಜನೂ ಲಾಭದಲ್ಲಿರುವ ಚಂದ್ರನೂ ಸಹ ತ್ರಿಪುರವನ್ನು ಈಶ್ವರನು ಹೊಡದಂತೆ ಸರ್ವ ದೋಷಗಳನ್ನು ಹರಿಹರಿಸುತ್ತಾರೆ.

ಶ್ಲೋ॥ ಲಗ್ನಾತ್ತ್ರಿಷಷ್ಠಗಸ್ಸೂರ್ಯಸ್ಸ್ವತುಂಗಸ್ಥೋ ಭವೇದ್ಯದಿ। ನಾಶಯತ್ಯಖಿಲಾನ್ದೋಷಾನುದಯಾತ್ತಿಮಿರಂ ಯಥಾ ॥

ಟೀ॥ ಉಪನಯನ ಲಗ್ನಕ್ಕೆ ೩-೬ ಈ ಸ್ಥಾನಗಳಲ್ಲಿ ಸೂರ್ಯನು ಉಚ್ಚಗತನಾಗಿ ಇದ್ದರೆ ಸೂರ್ಯೋದಯದಲ್ಲಿ ಅಂಧಕಾರದಂತೆ ಸರ್ವದೋಷಗಳೂ ನಾಶವನ್ನು ಹೊಂದುತ್ತವೆ.

ಶ್ಲೋ॥ ಕೇಂದ್ರತ್ರಿಕೋಣಗಸ್ಸೌಮ್ಯೋ ಮಿತ್ರರಾಶ್ಯಂಶಗೋ ಯದಿ । ಪಾಪಕೇಂದ್ರಕೃತಾನ್ದೋಷಾನ್ಹಂತಿ ಭಂ ಕೇಸರೀ ಯಥಾ ॥

ಟೀ॥ ಬುಧನು ಲಗ್ನದ ಕೇಂದ್ರತ್ರಿಕೋಣಗಳಲ್ಲಾದರೂ ಮಿತ್ರರಾಶ್ಯಂಶಗಳಲ್ಲಿಯಾದರೂ ಇದ್ದರೆ ಈ ಯೋಗವು ಕೇಂದ್ರದಲ್ಲಿ ಪಾಪ ಗ್ರಹಗಳಿರುವ ದೋಷಗಳನ್ನು ಸಿಂಹವು ಆನೆಗಳನ್ನು ಹೊಡಿಯುವಂತೆ ನಾಶಮಾಡುವದು.

ಶ್ಲೋ॥ ಲಗ್ನಾಧಿಪೋ ವಾಂಶಪತಿರ್ಬಲಿಷ್ಠಃ ಕೇಂದ್ರತ್ರಿಕೋಣೇ ತ್ರಿಭವೇ ಸ್ಥಿತೋಪಿ। ಲಗ್ನಸ್ಯ ಕೇಂದ್ರೇಷ್ವಶುಭಸ್ಥದೋಷಾನ್ನಿಹಂತಿ ಸೌಮ್ಯೈರ್ಯುತವೀಕ್ಷಿತೋ ವಾ ॥

ಟೀ॥ ಲಗ್ನಾಧಿಪತಿಯಾದರೂ ನವಾಂಶಾಧಿಪತಿಯಾದರೂ ಬಲಿಷ್ಠನಾಗಿ ೧-೩-೪-೫-೧೧ ಈ ಸ್ಥಾನಗಳಲ್ಲಿ ಶುಭ ಗ್ರಹಗಳಿಂದ ನೋಡಲ್ಪಟ್ಟವನಾಗಿಯೂ ಕೂಡಿದವನಾಗಿಯೂ ಇದ್ದರೆ ಲಗ್ನಕ್ಕಿಂತ ಅನ್ಯ ಕೇಂದ್ರಗಳಲ್ಲಿ ಪಾಪ ಗ್ರಹಗಳಿರುವ ದೋಷಗಳನ್ನು ಹರಿಸುತ್ತಾರೆ.

ಶ್ಲೋ॥ ವಿಪ್ರಾವಟೋರ್ವಿನಶ್ಯೇತ ಮಂದಭೌಮೌ ದ್ವಿತೀಯಗೌ । ಅನ್ಯೇಷ್ವಮಥ ಪಾಪಸ್ಥಾ ದ್ವಾದಶಸ್ಥಾ ತು ಬಂಧನಂ ॥

ಟೀ॥ ಉಪನಯನಕ್ಕೆ ಅಂಗಾರಕ ಶನಿಗಳು ದ್ವಿತೀಯಸ್ಥಾನದಲ್ಲಿದ್ದ

ರೆ ವಟುವಿಗೆ ವಿದ್ಯಾನಾಶವನ್ನು ಮಾಡುತ್ತಾರೆ, ಅವರುಗಳೊಬ್ಬರಿಗೊಬ್ಬರು ಅಷ್ಟಮದಲ್ಲಾದರೂ ದ್ವಾದಶದಲ್ಲಾದರೂ ಇದ್ದರೆ ಆ ವಟುವಿಗೆ ಬಂಧನವನ್ನುಂಟುಮಾಡುತ್ತಾರೆ.

ಶ್ಲೋ॥ ಕುಜಾರ್ಕಜೌಬಂಧನದೌವ್ಯಯಸ್ಥೌವಿದ್ಯಾಪ್ರದೌವಾಧನ
ಬಂಧಸಂಸ್ಥೌ । ವ್ಯಯಸ್ಥಮರ್ಕಂಕ್ಷಿತಿಜೋವಿಪಶ್ಯನ್ನಾಚಾರ್ಯ
ಮಂಥಂಕುರುತೇಬಲಾಢ್ಯಃ ॥

ಟೀ॥ ಕುಜ ಶನಿಗಳು ೧೨ನೇ ಸ್ಥಾನದಲ್ಲಿದ್ದರೆ ವಟುವಿಗೆ ಬಂಧನ ಉಂಟಾಗುವದು, ಅವರುಗಳು ೨-೪ ಈ ಸ್ಥಾನಗಳಲ್ಲಿದ್ದರೆ ವಿದ್ಯೆಯನ್ನುಂಟುಮಾಡುತ್ತಾರೆ, ಅವರಲ್ಲಿ ಬಲಿಷ್ಠನಾದ ಅಂಗಾರಕನು ೧೨ನೇ ರಾಶಿಯಲ್ಲಿ ಇರುವ ಸೂರ್ಯನನ್ನು ನೋಡುವಂಥವನಾಗಿ ಬ್ರಹ್ಮೋಪದೇಶ ಮಾಡುವ ಗುರುವನ್ನು ಕುರುಡನನ್ನಾಗಿ ಮಾಡುತ್ತಾನೆ.

ಶ್ಲೋ॥ ವ್ಯಯಸ್ಥಂರವಿಮಾರ್ಕಿರ್ವಾಸ್ವದೃಷ್ಟ್ಯಾಯದಿಪಶ್ಯತಿ। ಶಿ
ಷ್ಯವಿದ್ಯಾಂಬಲೀಹನ್ಯಾದ್ವಿಬಲೀರೋಗದಶ್ಶಿಶೋಃ ॥

ಟೀ॥ ದ್ವಾದಶಸ್ಥಾನದಲ್ಲಿರುವ ಸೂರ್ಯನನ್ನು ಶನಿ ಬಲಿಷ್ಠನಾಗಿ ತನ್ನ ೩-೭-೧೦ ಈ ದೃಷ್ಟಿಗಳಿಂದ ನೋಡಿದರೆ ಶಿಷ್ಯನಿಗೆ ವಿದ್ಯಾನಾಶವನ್ನು ಮಾಡುತ್ತಾನೆ. ದುರ್ಬಲನಾಗಿ ನೋಡಿದರೆ ಶಿಶುವಿಗೆ ರೋಗವನ್ನುಂಟುಮಾಡುತ್ತಾನೆ.

ಲಗ್ನ ಚಂದ್ರಫಲವು-ವಾಸಿಷ್ಠದಲ್ಲಿ,

ಶ್ಲೋ॥ ಪ್ರಾಲೇಯರಶ್ಮಿರ್ಯದಿಲಗ್ನಸಂಸ್ಥಃ ವಲಕ್ಷಪಕ್ಷೇಪಿಭವೇತ್ಸ
ರೋಗೀ। ಮೃತೀಚಸೌಮ್ಯಗ್ರಹವರ್ಗಗೋಪಿಖಲೋಪಿನಿಸ್ಸ್ವಶ್ಚ್ಯುತಿಕರ್ಮ
ಹೀನಃ ॥

ಟೀ॥ ಶುಕ್ಲಪಕ್ಷದಲ್ಲಿಯೂ ಚಂದ್ರನು ಲಗ್ನದಲ್ಲಿದ್ದರೂ ಶುಭಗ್ರಹಷಡ್ವರ್ಗದಲ್ಲಿದ್ದರೂ ಆ ಹುಡುಗನನ್ನು ರೋಗಿಷ್ಠನನ್ನಾಗಿಯೂ, ದುಷ್ಟನನ್ನಾಗಿಯೂ ದರಿದ್ರನನ್ನಾಗಿಯೂ ಕರ್ಮಹೀನನನ್ನಾಗಿಯೂ ಮಾಡುತ್ತಾನೆ.

ಕಾಶ್ಯಪದಲ್ಲಿ,

ಶ್ಲೋ॥ ಸ್ವೋಚ್ಚಸಂಸ್ಥೋಪಿಸೀತಾಂಶುರ್ವ್ರತಿನಂಯದಿಲಗ್ನಗಃ।
ತಂಕರೋತಿಶಿಶುಂನಿಸ್ವಂಸತತಂಕ್ಷಯರೋಗಿಣಂ ॥

ಟೀ॥ ಚಂದ್ರನು ಉಚ್ಚಸ್ಥಾನದಲ್ಲಿದ್ದರೂ ಲಗ್ನದಲ್ಲಿದ್ದರೂ ವಟುವ

ನ್ನು ಆ ಲಾಗಾಯಿತು ದರಿದ್ರನನ್ನಾಗಿಯೂ, ಕ್ಷಯರೋಗಿಯನ್ನಾಗಿಯೂ ಮಾಡುತ್ತಾನೆ.

ಇಲ್ಲಿ ಗರ್ಗ ಮುನೀಶ್ವರನು ಮಾಡಿದ ವ್ಯವಸ್ಥೆ ಯೇನೆಂದರೆ.

ಶ್ಲೋ॥ ಪ್ರಾಲೇಯರಶ್ಮಿರ್ಯದಿಲಗ್ನಸಂಸ್ಥೋವಲಕ್ಷಪಕ್ಷೇಶುಭಕೃನ್ನಿತಾಂತಂ । ಸೋಪೇತಸೌಮ್ಯಗ್ರಹವರ್ಗಗಶ್ಚದ್ಬಟೋರ್ಹ್ಯಾಯು ರಾರೋಗ್ಯಸುಖಾನಿದದ್ಯಾತ್॥

ಟೀ॥ ಶುಕ್ಲಪಕ್ಷದ ಚಂದ್ರನು ಉಪನಯನ ಲಗ್ನದಲ್ಲಿದ್ದರೆ ಶುಭವನ್ನುಂಟುಮಾಡುವನು, ಮತ್ತು ಶುಭಗ್ರಹ ಷಡ್ವರ್ಗದಲ್ಲಿದ್ದರೆ ವಟುವಿಗೆ ವಿಶೇಷವಾಗಿ ಆಯುಸ್ಸು, ಆರೋಗ್ಯ, ಐಶ್ವರ್ಯ, ಸೌಖ್ಯ, ಇವುಗಳನ್ನು ಕೊಡುವನು.

ಲಗ್ನ ದೋಷಕ್ಕೆ ಭಂಗವು-ಗಾರ್ಗ್ಯಃ.

ಶ್ಲೋ॥ ಲಗ್ನೇಕುಳೀರೇಗುರುಚಂದ್ರಸಂಸ್ಥೇಮೇಷೇಸಿತಜ್ಞೌವೃಷಭೇಪತಂಗೇ । ಶೇಷೈಸ್ತ್ರಿಷಷ್ಠಾಯಗತೈರ್ಗ್ರಹೈಸ್ಸ್ಯಾದ್ಯಶ್ಯೋಪನೀತಸ್ಸ ಮುಪೈತಿಲಕ್ಷ್ಮೀಂ ॥

ಟೀ॥ ಕಟಕವು ಲಗ್ನವಾಗಿದ್ದು ಅಲ್ಲಿ ಗುರು ಚಂದ್ರರು ಕೂಡಿರುವಾಗಲೂ, ಶುಕ್ರ ಬುಧರು ಮೇಷ ಲಗ್ನದಲ್ಲಿ ಇರುವಾಗಲೂ,ವೃಷಭ ಲಗ್ನದಲ್ಲಿ ಸೂರ್ಯನಿರುವಾಗಲೂ, ಮಿಕ್ಕ ಶನಿ ಅಂಗಾರಕ ಮೊದಲಾದವರು ೩=೬=೧೧ ಈ ಸ್ಥಾನದಲ್ಲಿರುವಾಗಲೂ, ಉಪನಯನ ಮಾಡಲ್ಪಟ್ಟ ಹುಡುಗನು ಐಶ್ವರ್ಯವನ್ನು ಹೊಂದುವನು.

ಶ್ಲೋ॥ ಕೇಂದ್ರೇಸುರೇಜ್ಯೇಭನೇಪತಂಗೇಚಂದ್ರೇಶುಭಾಂಶೇಭವತೀತ್ರಿತೀಯೇ। ವಾಗೀಶ್ವರೀತಸ್ಯಮುಖೇವಸಂತಿಪದ್ಮಾಯಥಾಪದ್ಮವನೇಸದಾಚ॥

ಟೀ॥ ಗುರುವು ಉಪನಯನ ಲಗ್ನಕ್ಕೆ ೧-೪=೭=೧೦ನೇ ಸ್ಥಾನಗಳಲ್ಲಿದ್ದರೂ, ಸೂರ್ಯನು ಉಪನಯನ ಲಗ್ನದಲ್ಲಿದ್ದರೂ ಚಂದ್ರನು, ಶುಭನವಾಂಶವನ್ನು ಪಡೆದು ೩ನೇ ಸ್ಥಾನದಲ್ಲಿದ್ದರೂ ಆ ವಟುವಿನ ಮುಖದಲ್ಲಿ ಸರಸ್ವತಿಯು ಯಾವಾಗ್ಯೂ ಕಮಲ ವನದಲ್ಲಿನ ಲಕ್ಷ್ಮಿಯಂತೆ ವಾ. ಸಮಾಡುವಳು.

ಶ್ಲೋ॥ಲಗ್ನೇಸಿತೇಕರ್ಮಣಿದೇವಪೂಜ್ಯೇಭವೇದ್ರವಿಶ್ಚೇತಕರಶ್ಶುಭಾಂಶೇ। ಹೃದಿಸ್ಥಿತಾಸಾತ್ರ್ಯ್ಯಪಿವರ್ಧಯಂತಿಪ್ರಿಯಂಕ್ಷಣಾನ್ಯೈವಯಥೇಂದ್ರಿಯಾಣೀ

ಟೀ॥ ಉಪನಯನ ಲಗ್ನದಲ್ಲಿ ಶುಕ್ರನು, ಕರ್ಮಸ್ಥಾನದಲ್ಲಿ ಗುರು

ವು, ಶುಭನವಾಂಶದಲ್ಲಿ ಸೂರ್ಯನೂ ಚಂದ್ರನೂ ಇವರುಗಳು ಇದ್ದರೆ ವಟುವಿನ ಹೃದಯದಲ್ಲಿ ಸರ್ವಶಾಸ್ತ್ರವೂ ವೃದ್ಧಿ ಹೊಂದುವವು.

ಶ್ಲೋ॥ ಭೃಗೌಮೀನೇವೃಷೆವಾಪಿಜೀವೇಕೇಂದ್ರತ್ರಿಕೋಣಗೇ । ಕರ್ಕಿ
ಚಾಪಧರ್ಷುಷೆತಸ್ಮಿನ್ಯೋಗಃಶುಭತರಾಹ್ವಯಃ ॥

ಟೀ॥ ಶುಕ್ರನು ಮೀನ, ವೃಷಭ ಈ ರಾಶಿಗಳಲ್ಲಿದ್ದರೂ ಬೃಹಸ್ಪತಿಯು ಕೇಂದ್ರತ್ರಿಕೋಣದಲ್ಲಿದ್ದರೂ ಅಥವಾ ಕಟಕ ಧನುಸ್ಸು ಮೀನಗಳಲ್ಲಿದ್ದರೂ ವಟುವಿಗೆ ಅತ್ಯಂತ ಶುಭವೆಂಬ ಯೋಗ ಉಂಟಾಗುವದು.

ಶ್ಲೋ॥ ಜೀವಃಕಾವ್ಯೋಪಿವಾಯಸ್ಯಮೌಂಜೀಬಂಧನಲಗ್ನಗಃ । ತ
ಸ್ಯವಿದ್ಯಾಪ್ರಭೂತಾಸ್ಯಾದ್ವಿವಾಹಶ್ಚಾಚಿರಾದ್ಭವೇತ್ ॥

ಟೀ॥ ಗುರುವಾದರೂ ಶುಕ್ರನಾದರೂ ಉಪನಯನ ಲಗ್ನದಲ್ಲಿದ್ದರೆ ವಟುವಿಗೆ ಸಕಲ ವಿದ್ಯೆಗಳೂ ಬರುವವು, ಶೀಘ್ರವಾಗಿ ಅವನಿಗೆ ಮದುವೆಯೂ ಆಗುವದು.

ಶ್ಲೋ॥ ದೋಷೆಬಲವಿಹೀನೇಚಗುಣೆಬಹುಬಲೈರ್ಯುತೇ। ಅಪವಾದಬಲೈ
ರ್ದೋಷಪ್ರಧ್ವಂಸಾಭಾವಕಶ್ಶುಭಃ ॥

ಟೀ॥ ದೋಷಗಳು ಬಲಹೀನಗಳಾಗಿಯೂ, ಗುಣಗಳು ಬಲಿಷ್ಠವಾಗಿಯೂ ಇದ್ದರೆ ವಿಶೇಷ ಶಾಸ್ತ್ರದಿಂದ ಉಪನಯನ ಮುಹೂರ್ತಕ್ಕೆ ವಿಶೇಷ ಶುಭಉಂಟಾಗುವದು.

ಶ್ಲೋ॥ ಕರ್ತುರ್ಭಾರ್ಯಾಗರ್ಭಿಣೀಚೇದ್ವ್ಯಾಸ್ಸ್ಯಾತ್ಕವೋಪನಾಯನಂ।
ಷಣ್ಮಾಸಾತ್ಪರತಸ್ಸೋಪಿನಕಾರ್ಯಾಇತಿಶೌನಕಃ ॥

ಟೀ॥ ಪುರುಷನು ತನ್ನ ಹೆಂಡತಿಯು ಗರ್ಭವತಿಯಾದ ೬ ತಿಂಗಳ ಮೇಲೆ ಗೃಹನಿರ್ಮಾಣವನ್ನಾದರೂ, ಮಗನ ಉಪನಯನವನ್ನಾದರೂ ಮಾಡಕೂಡದು. ೫ ತಿಂಗಳವರಿಗೆ ಮಾಡಬಹುದೆಂದು ತಾತ್ಪರ್ಯವು.

ಶ್ಲೋ॥ ರಜಸ್ವಲಾವಟೋರ್ಮಾತಾಇಡಾವಾಚನತಃಪುರಾ। ನೈವೋಪ
ನಯನಂಕಾರ್ಯಂಪರತಶ್ಚೇಚ್ಛುಭಂಜಗುಃ ॥

ಟೀ॥ ನಾಂದಿ ಆವಾಹನಕ್ಕೆ ಮುಂದಾಗಿಯೇ ಹುಡುಗನ ತಾಯಿ ರಜಸ್ವಲೆಯಾದರೆ ಉಪನಯನ ಮಾಡಕೂಡದು, ನಾಂದಿಯಾದ ತರುವಾಯವಾದರೆ ಉಪನಯನ ಮಾಡಬಹುದು

ರಜಸ್ವಲಾದೋಷ ಭಂಗವು.

ಶ್ಲೋ॥ ಅಲಬ್ಧೇಸುಮುಹೂರ್ತಸ್ಯರಜೋದೋಷೆಚಮಾತರಂ।ಸ್ತ್ರೀ
ಯಂಸಂಪೂಜ್ಯತತ್ಕುರ್ಯಾನ್ಮೌಂಜೀಬಂಧನಮುತ್ತಮಂ ॥

ಟೀ॥ ಉಪನಯನ ಮುಹೂರ್ತಕ್ಕೆ ರಜಸ್ವಲಾದೋಷವು ಪ್ರಾಪ್ತವಾಗದೆ ಇರುವಾಗ ತಾಯಿಯನ್ನು ಪೂಜಿಸಿ ಶುಭಕರ್ಮವನ್ನು ಮಾಡತಕ್ಕದ್ದು.

ಶ್ಲೋ॥ ಶಾಖಾಧಿಪತಿವಾರಶ್ಚ ಶಾಖಾಧಿಪಬಲಂ ಶಿಶೋಃ । ಶಾಖಾಧಿಪತಿಲಗ್ನಂ ಚ ದುರ್ಲಭಂ ತ್ರಿತಯಂ ವ್ರತೇ ॥

ಟೀ॥ ಉಪನಯನದಲ್ಲಿ ಮಗುವಿನ ಶಾಖಾಧಿಪನ ವಾರವು, ಅವನ ಬಲವು, ಅವನ ಲಗ್ನವು, ಈ ಮೂರೂ ದುರ್ಲಭವಾಗಿರ್ಪುದು.

ಶ್ಲೋ॥ ನಜನ್ಮಭಂ ನೈಧನಶುದ್ಧಲಗ್ನಂ ನಜನ್ಮನಕ್ಷತ್ರಚತಸ್ನವಾಂಶಂ । ನಜನ್ಮನೈಶೋನಚವಾಂತ್ಯಕೇಶೋ ಲಗ್ನೇ ಪ್ರಶಸ್ತಂ ಖಲು ರಾತ್ರಿನಾಥಃ ॥

ಟೀ॥ ಉಪನಯನ ಲಗ್ನವು ವಟುವಿನ ಜನ್ಮರಾಶಿಗೆ ಅಷ್ಟಮವಾಗಿರಕೂಡದು, ಅಷ್ಟಮಾಂಶವಾಗಿಯೂ ಇರಕೂಡದು, ನೈಧನ ತಾರೆಯಾಗದು, ಉಪನಯನ ಲಗ್ನಕ್ಕೆ ಅಷ್ಟಮದಲ್ಲಿಯೂ ದ್ವಾದಶದಲ್ಲೂ ಚಂದ್ರನಿರಕೂಡದು. ಏವಂಚ ಲಗ್ನವು ಅಷ್ಟಮ ಶುದ್ಧಿಯುಳ್ಳದ್ದಾಗಿಯೂ ಶುಭಗ್ರಹ ಸಹಿತವಾಗಿಯೂ ಇರಬೇಕು.

ಕೇಂದ್ರದಲ್ಲಿರುವ ಸೂರ್ಯಾದಿ ಪಾಪಗ್ರಹಗಳ ಫಲವು.

ಶ್ಲೋ॥ ಕುಜೇ ಕೇಂದ್ರೇ ಕೂಜಿತೋ ದೋಷಶ್ಶಿಷ್ಯಾಚಾರ್ಯವಿನಾಶನಂ । ಮಂದೇ ತು ರುಧಿರೋ ದೋಷಃ ಕರೋತಿ ಮಹತೀಂ ಗದಾಂ । ರಾಹೌ ರಂಧ್ರಾಹ್ವಯೋ ದೋಷಶ್ಶಿಶೋರ್ಮಾತೃವಿನಾಶನಂ । ಕೇತೌ ಕೇಂದ್ರೇ ತೂಗ್ರದೋಷೋ ವಿದ್ಯಾಯುರ್ಧನನಾಶನಂ । ಪಂಚದೋಷೇತರಂ ಲಗ್ನಂ ಶುಭದಂ ಚೋಪನಾಯನೇ । ದ್ವಾದಶಸ್ಥಂ ರವಿಂ ಭೌಮಃ ಪಶ್ಯನ್ನಾಚಾರ್ಯನೇತ್ರಹೃತ್ ॥

ಟೀ॥ ಉಪನಯನ ಲಗ್ನಕ್ಕೆ ಕೇಂದ್ರಗಳಲ್ಲಿ ಅಂಗಾರಕನಿದ್ದರೆ ಕೂಜಿತವೆಂಬದಾಗಿ ಒಂದು ದೋಷ ಉಂಟಾಗುತ್ತದೆ. ಅದು ಗುರು ಶಿಷ್ಯರಿಗೆ ನಾಶಕರವು, ಶನಿ ಇದ್ದರೆ ರುಧಿರವೆಂಬ ದೋಷವು, ಅದು ಹುಡುಗನಿಗೆ ಮಹಾರೋಗಕರವು, ರಾಹುವಿದ್ದರೆ ರಂಧ್ರವೆಂಬ ದೋಷವು, ಅದು ಹುಡುಗನ ತಾಯಿಗೆ ನಾಶಕರವು, ಕೇತುವಿದ್ದರೆ ಉಗ್ರವೆಂಬ ದೋಷವು, ಅದು ವಿದ್ಯೆ, ಧನ, ಆಯುಗಳಿಗೆ ನಾಶಕರವು, ಇಂತಾ ಈ ದೋಷಗಳಿಲ್ಲದ ಲಗ್ನದಲ್ಲಿ ಮಾಡಿದ ಉಪನಯನವು ಶುಭಕರವು. ಇದೂ ಅಲ್ಲದೆ ಉಪನಯನ ಲಗ್ನಕ್ಕೆ ದ್ವಾದಶದಲ್ಲಿರುವ ಸೂರ್ಯನನ್ನು ಅಂಗಾರಕನು

ನೋಡಿದರೆ ಆಚಾರ್ಯನ ಕಣ್ಣು ಹೋಗುವುದು.

ಶ್ಲೋ॥ ಸರ್ವತ್ರಶುಭದಶ್ಶುಕ್ರೋರಿಃಫಷಷ್ಠಾಷ್ಟವರ್ಜಿತಃ । ಷಷ್ಠಾಷ್ಟಮೌವಿನಾಜೀವಸ್ಸರ್ವತ್ರಶುಭಕೃತ್ಸದಾ ॥

ಟೀ॥ ಶುಕ್ರನು ೬-೮-೧೦ ಈ ಸ್ಥಾನಗಳನ್ನು ಬಿಟ್ಟು ಮಿಕ್ಕ ಸ್ಥಾನಗಳಲ್ಲೆಲ್ಲಾ ಶುಭಪ್ರದನು, ಗುರುವು ೬-೮ ಸ್ಥಾನಗಳನ್ನು, ಬಿಟ್ಟು ಕಡಮೆ ಸ್ಥಾನಗಳಲ್ಲೆಲ್ಲಾ ಶುಭಕರನು.

ಶ್ಲೋ॥ ವಿಶೇಷಾನ್ನೈಧನಸ್ಥಾನೇನೇಷ್ಯಂತೇಸರ್ವದಾಗ್ರಹಾಃ। ಆಚಾರ್ಯಂತಂಶುಭಾಘ್ನಂತಿಶಿಷ್ಯಂಘ್ನಂತಿಶುಭೇತರಾಃ ॥

ಟೀ॥ ಉಪನಯನ ಲಗ್ನಕ್ಕೆ ಅಷ್ಟಮಸ್ಥಾನದಲ್ಲಿ ಸರ್ವಗ್ರಹಗಳೂ ಅಶುಭಕರವು, ಅದರಲ್ಲಿ ಶುಭಗ್ರಹಗಳು ಇದ್ದರೆ ಗುರುವಿಗೆ ಹಾನಿಕರವು, ಪಾಪಗ್ರಹಗಳು ಇದ್ದರೆ ಶಿಷ್ಯನಿಗೆ ನಾಶವನ್ನು ಮಾಡುತ್ತಾರೆ.

ಅನಂತರ ಒಂದೇ ದಿನದಲ್ಲಿ ವಿವಾಹೋಪನಯನ ವಿಷಯು.

ಶ್ಲೋ॥ ವಿವಾಹೋಪನಯೌಯತ್ರತ್ವೇಕಸ್ಮಿನ್ದಿವಸೇಯದಿ । ಮೌಂಜೀಬಂಧನಂಪೂರ್ವಂಪರಂವೈವಾಹಿಕಂಜಗುಃ ॥

ಟೀ॥ ಒಂದೇ ದಿನದಲ್ಲಿ ವಿವಾಹವನ್ನೂ ಉಪನಯನವನ್ನೂ ಮಾಡಬೇಕಾಗಿದ್ದರೆ ಮೊದಲು ಉಪನಯನವನ್ನು ಮಾಡಿ ತರುವಾಯ ವಿವಾಹವನ್ನು ಮಾಡತಕ್ಕದ್ದು.

ಶ್ಲೋ॥ ಚೌಲೋಪನಯಸೀಮಂತಜಾತನಾಮಾನ್ನಪುಂಸವೇ । ಚಾತುರ್ವ್ರತೇತ್ಯುಪಾಕರ್ಮಸೋದರಾಣ್ಯಗಪತ್ತ್ಯಜೇತ್ ॥

ಟೀ॥ ತಂದೆಯು ಏಕೋದರರಾದ ತನ್ನ ಮಕ್ಕಳಿಗೆಲ್ಲರಿಗೂ ಒಂದೇ ಸಾರಿ ಚೌಲ, ಉಪನಯನ, ಸೀಮಂತ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಪುಂಸವನ, ವೇದವ್ರತ, ಪ್ರಥಮ ಶ್ರಾವಣ ಹೋಮ ಈ ಕರ್ಮಗಳನ್ನು ಒಂದೇಸಾರಿ ಮಾಡಕೂಡದು. ಒಬ್ಬೊಬ್ಬನಿಗೆ ಪ್ರತ್ಯೇಕ ಪ್ರತ್ಯೇಕ ಮಾಡತಕ್ಕದ್ದು.

ವೇದಾರಂಭವು.

ಶ್ಲೋ॥ ಹಸ್ತಾಶ್ವಯುಕ್ಶ್ರವಣತಿಷ್ಯಸಮೀರಮಿತ್ರಚಿತ್ರಾದಿತಿತ್ರಿಪುರಜಿತ್ತ್ಯಜಲೇಸುರೇಷು । ಶಸ್ತೋತ್ತ್ರಾಕಮಲಸಮ್ಭವಪಾಷ್ಣಭೇಷುಪ್ರೋಕ್ತಂನವಶ್ರುತಿಸಮಾಗಮನಂದ್ವಿಜಾನಾಂ ॥

ಟೀ॥ ಹಸ್ತ, ಅಶ್ವಿನಿ, ಶ್ರವಣ, ಪುಷ್ಯ, ಸ್ವಾತಿ, ಅನೂರಾಧಾ, ಚಿತ್ರಾ, ಪುನರ್ವಸು, ಆರ್ದ್ರಾ, ಪೂರ್ವಾಷಾಢಾ, ಮೂಲ, ಉತ್ತರ, ಉ

ಷಾ, ಉಭಾ, ರೋಹಿಣೀ, ರೇವತೀ, ಈ ನಕ್ಷತ್ರಗಳಲ್ಲಿ ಬ್ರಾಹ್ಮಣರಿಗೆ ವೇದಾರಂಭ ಮಾಡತಕ್ಕದ್ದು.

ಶ್ಲೋ॥ ರಿಕ್ತಾಷ್ಟಮೀಪಂಚದಶೀನಿಷಿದ್ಧಾಃತ್ರಯೋದಶೀಸಪ್ತಮಿ ಕಾಚಮಧ್ಯೇ । ವಿದ್ಯಾಗಮೇತಾಃಪ್ರಿತಮಂತ್ರಿಣಾಂಸ್ಯುರ್ವಾರೋದ ಯೌಮಧ್ಯಮಮಿಂದುಭಾನ್ವೋಃ ॥

ಟೀ॥ ವೇದವನ್ನು ಸ್ವಲ್ಪ ಕಲಿತು ಬಿಟ್ಟು ಪುನಹ ಆರಂಭಿಸುವಂತಾ ವರಿಗೆ ರಿಕ್ತತಿಥಿಗಳು, ಅಷ್ಟಮಿ, ಪೂರ್ಣಿಮಾ, ಇವುಗಳು ನಿಷಿದ್ಧಗ ಳು, ತ್ರಯೋದಶೀ, ಸಪ್ತಮಿ ಇವುಗಳು ಮಧ್ಯಗಮಳು, ಸೂರ್ಯ ಚಂ ದ್ರವಾರಗಳು ಇವರುಗಳ ಲಗ್ನಗಳೂ ಸಹ ಮಧ್ಯಮಗಳೂ.

ಶ್ಲೋ॥ ವೇದಾರಂಭೇದ್ವಿಸ್ವಭಾವಾವಸಿಷ್ಠಾವಂಧ್ಯೌಪ್ರೋಕ್ತಾಯೆಚ ರಾರಾಶಯಶ್ಚ । ಶುದ್ಧೇರಾಶೌನ್ಮೃಧನಚಾಂದ್ರವಾರೇಕುರ್ಯಾದ್ರಾ ಜ್ಞಾಸರ್ವವಿದ್ಯಾಸಮಾಪ್ತಿಂ ॥

ಟೀ॥ ವೇದಾರಂಭ ವಿಷಯದಲ್ಲಿ ಸ್ಥಿರ ರಾಶಿಗಳೂ ಚರ ರಾಶಿಗಳು ಇ ವು ನಿಷ್ಫಲಗಳು, ಆರಂಭ ಲಗ್ನಕ್ಕೆ ೪ನೇ ರಾಶಿಯು ಶುದ್ಧವಾಗಿರುವಾಗ ಲೂ ಚಂದ್ರವಾರದಲ್ಲೂ ಕ್ಷತ್ರಿಯನಿಗೆ ವಿದ್ಯಾರಂಭವನ್ನು ಮಾಡಿದರೆ ಅ ದು ಸರ್ವ ವಿದ್ಯಾಸಮಾಪ್ತಿಯನ್ನು ಮಾಡುವದು.

ಶ್ಲೋ॥ ಜನ್ಮಯೋಗಶಕುನಾದಿವಿಸ್ತರೇಗೋಚರೇಚಶುಭದೇನ್ಯಯೋ ಷಿತೋಃ । ಸಾಂಪ್ರದಾಯಸಮಯೇಗುಣಾನ್ವಿತೇಪಾಣಿಪೀಡನವಿಧ ರ್ವಿಧೀಯತೇ ॥

ಟೀ॥ ಜನನಕಾಲದ ಶುಭಗ್ರಹ ಸಂಪತ್ತಿಯು, ಶುಭ ಶಕುನಗಳು, ಶುಭಗೋಚಾರಗಳು, ಸುಗುಣಗಳುಳ್ಳ ಸಂಪ್ರದಾಯ ಸಮಯಗಳಲ್ಲಿ ಯೂ, ಸ್ತ್ರೀ ಪುರುಷರಿಗೆ ವಿವಾಹವು ಶುಭಪ್ರದವು.

ಶ್ಲೋ॥ ಅರ್ಕೇಕರ್ಕಟಕನ್ಯಕಾಘಟಧನುರ್ಮುಕ್ತೇಭ್ಯಗೌಮಂತ್ರಿಣಿ ಸ್ಫಾರಜ್ಯೋತಿಷಿಶೀತರೋಚಿಷಿಬಲೋಪೇತೇವಿರಿಕ್ತೇತಿಥೌ। ರೋಹಿಣ್ಯು ತ್ತರರೇವತೀಪಿತೃಮರುನ್ಮಿತ್ರೇಂದುಹಸ್ತಾಸುರೇ। ಷ್ವಾರಾರ್ಕ್ಯರ್ಕಜ ವಾಸವೈಶ್ಚರಹಿತೇಷೂದ್ವಾಹಕರ್ಮಾರಭೇತ್ ॥

ಟೀ॥ ಸೂರ್ಯನು ಕರ್ಕಟಕ, ಕನ್ಯಾ, ಕುಂಭ, ಧನುಸ್ಸು ಈ ರಾಶಿಗ ಳನ್ನು ದಾಟಿದಾಗಲೂ, ಗುರು ಶುಕ್ರರು ಆಕಾಶದಲ್ಲಿ ಪ್ರಕಾಶಿಸುತ್ತಿರು ವಾಗಲೂ, ಚಂದ್ರನು ಬಲವಂತನಾಗಿರುವಾಗಲೂ, ರಿಕ್ತತಿಥಿಗಳನ್ನು ಬಿ ಟ್ಟು ರೋಹಿಣೀ ಉತ್ತರಾ, ಉಷಾ, ಉಭಾ, ರೇವತಿ, ಮಖಾ, ಸ್ವಾತೀ,

ಅನೂ, ಮೃಗಶಿರ, ಹಸ್ತ, ಮೂಲ ಈ ನಕ್ಷತ್ರಗಳಲ್ಲಿಯೂ, ಕುಜ ರವಿ ಶನಿವಾರಗಳನ್ನು ಬಿಟ್ಟು ಕಡಮೆ ವಾರಗಳಲ್ಲಿಯೂ ವಿವಾಹ ಕರ್ಮವನ್ನು ಮಾಡತಕ್ಕದ್ದು.

ಶ್ಲೋ॥ ಶ್ರೇಷ್ಠಾ ಸ್ತ್ರೀಯುಮಾಂಗನಾಘಟಧನುರ್ಗೋಗರ್ಕಿಕಂಠೀರವಾ।ಮಧ್ಯಾಸ್ಸಾಮ್ಯಾಯುತಾಸ್ತದೂರ್ಧ್ವರಹಿತಾಸ್ಸರ್ವೇವಿವಾಹೇಹಿತಾಃ। ಸಾಮ್ಯಾಃಕೇಂದ್ರಧನಾಯಪುತ್ರಸಹಿತಾಃಸ್ತ್ರೀಪಾಪಷಷ್ಠಾಯಗಾಃ। ಪೂಜ್ಯಾಶುಕ್ರಗುರೂಮೃತಾವಶುಭದೌಶುದ್ಧೋಭವೇತ್ಸಪ್ತಮಃ ॥

ಟೀ॥ ವಿವಾಹದಲ್ಲಿ ತುಲಾ,ಮಿಥುನ, ಕನ್ಯಾ, ಕುಂಭ,ಧನುಸ್ಸು,ವೃಷಭ, ಕರ್ಕಾಟಕ, ಸಿಹ್ಮ ಈರಾಶಿಗಳು ಶುಭಗಳು, ಇತರರಾಶಿಗಳುಮಧ್ಯಮಗಳು, ಸರ್ವರಾಶಿಗಳೂ ಪಾಪಗ್ರಹ ಸಂಬಂಧವಿಲ್ಲದೆ ಶುಭಗ್ರಹಗಳೊಂದಿಗೆ ಕೂಡಿ ಇದ್ದರೆ ಶುಭಕರಗಳಾಗಿಯೇ ಇರುವವು, ಶುಭಗ್ರಹಗಳು ೧-೨-೪-೫-೧೦-೧೧ ಈ ಸ್ಥಾನಗಳಲ್ಲಿ ಇದ್ದರೂ, ಪಾಪಗ್ರಹಗಳು ೩-೬-೧೧ ಈ ರಾಶಿಗಳಲ್ಲಿ ಇರುವಾಗಲೂ ಶುಭಫಲವುಂಟಾಗುತ್ತದೆ. ಗುರು ಶುಕ್ರರು ಮೂಢರೂ, ಅಸ್ತಂಗತರಾಗಿಯೂ ಇದ್ದರೆ ಅಶುಭಕರವು, ಏವಂಚ ಗುರು ಶುಕ್ರರಿಗೆ ಮೌಢ್ಯ ಅಸ್ತಮಗಳಿಲ್ಲದೆ ಇರುವಾಗಲೂ, ವಿವಾಹ ಲಗ್ನಕ್ಕೆ ಸಪ್ತಮಶುದ್ಧಿ ಇರುವಾಗಲೂ ವಿವಾಹವು ಶುಭಕರವಾಗುವದು.

ವಿವಾಹ ಪ್ರಶ್ನವು.

ಶ್ಲೋ ॥ ಶುಭೇದಿನೇದೈವವಿದಂತ್ವಭಿಜ್ಞಂ ತಾಂಬೂಲಪುಷ್ಪಾಕ್ಷತಪೂರ್ಣಪಾಣಿಃ। ಕರ್ತಾಚಗತ್ವಾಪ್ರಣಿಪತ್ಯಪೃಚ್ಛೇನ್ನಿವೇದ್ಯತಸ್ಮೈವರಕನ್ಯಯೋರ್ಭಂ॥

ಟೀ॥ ವಿವಾಹವನ್ನು ಮಾಡಿಸುವವನು ಶುಭದಿನದಲ್ಲಿ ಪುಷ್ಪ ತಾಂಬೂಲಗಳನ್ನುಕೈಯಲ್ಲಿ ತೆಗದುಕೊಂಡು ಜ್ಯೋತಿಶ್ಶಾಸ್ತ್ರವನ್ನು ತಿಳಿದ ಬ್ರಾಹ್ಮಣನ ಬಳಿಗೆ ಹೋಗಿ ವಂದನಮಾಡಿ ಕನ್ಯಾವರರ ನಕ್ಷತ್ರಗಳನ್ನು ತಿಳಿಸಿ ವಿವಾಹವನ್ನು ಕುರಿತು ಪ್ರಶ್ನೆ ಮಾಡತಕ್ಕದ್ದು.

ಗೋತ್ರವರ್ಜ್ಯ.

ಶ್ಲೋ॥ ಸ್ವಗೋತ್ರಪ್ರವರೋಪೇತಾಹೀನಾಧಿಕಕುಲೋದ್ಭವಾ। ಕನ್ಯಾವಯೋಧಿಕಾನೇಷ್ಟಾದುರ್ಲಕ್ಷಣಗುಣಾನ್ವಿತಾ ॥

ಟೀ॥ ವರನ ಗೋತ್ರದವಳಾಗಿಯೂ, ಪ್ರವರ ವುಳ್ಳವಳಾಗಿಯೂ, ವರ

ನಿಗಿಂತ ಉತ್ತಮ ಕುಲದಲ್ಲಿ ಹುಟ್ಟಿದವಳಾಗಿಯೂ,ಹೀನ ಕಾಲದವಳಾಗಿಯೂ,ವರನಿಗಿಂತ ದೊಡ್ಡವಳಾಗಿಯೂ ದುರ್ಲಕ್ಷಣಗುಣಗಳುಳ್ಳವಳಾಗಿಯೂ ಇರುವ ಕನ್ಯಕೆಯನ್ನು ಬಿಡತಕ್ಕದ್ದು.

ಶ್ಲೋ॥ ಕುಲಂಚ ಶೀಲಂಚವಪುರ್ವಯಶ್ಚ ವಿದ್ಯಾಂಚ ವಿತ್ತಂಚಸನಾಥತಾಂಚ। ಏತಾನ್ಗುಣಾಂತ್ಸಪ್ತಪರೀಕ್ಷ್ಯದೇಯಾಃ ಕನ್ಯಾಬುಧೈಶ್ಶೇಷಮಚಿಂತನೀಯಂ ॥

ಟೀ॥ ವರನ ಕುಲ, ನಡತೆ, ದೇಹ, ವಯಸ್ಸು, ವಿದ್ಯೆ, ಧನ, ಪಾಲಕರು, ಈ ೭ ಗುಣಗಳನ್ನು ಪರೀಕ್ಷಿಸಿ ಕನ್ಯೆಯನ್ನು ಕೊಡಬೇಕು. ಮಿಕ್ಕವಿಷಯಗಳನ್ನು ಯೋಚಿಸಕೆಲಸವಿಲ್ಲ, ಅಂದರೆ ಕನ್ಯೆಯನ್ನು ಕೊಡುವನು ಇವುಗಳನ್ನು ಚೆನ್ನಾಗಿ ತಿಳಿದು ಕೊಡಬೇಕು.

ಜನ್ಮನಕ್ಷತ್ರ ನಾಮನಕ್ಷತ್ರ ವಿಷಯ.

ಶ್ಲೋ॥ ದಂಪತ್ಯೋರ್ಜನ್ಮತಾರಾಭ್ಯಾಂನಾಮನಕ್ಷತ್ರಭ್ಯಾಮಥಾಪಿವಾ। ಸ್ತ್ರೀಜನ್ಮತಾರಾ ಪೂರ್ವಾಭ್ಯಾಮುಪ್ರಯಾತಾಪ್ರಜ್ಞಾಶ್ಶುಭಾಶುಭಂ ॥

ಟೀ॥ ದಂಪತಿಗಳ ಜನ್ಮನಕ್ಷತ್ರಗಳಿಂದಲಾಗಲೀ ನಾಮನಕ್ಷತ್ರಗಳಿಂದಲಾಗಲೀ ಕನ್ಯೆಯ ನಕ್ಷತ್ರಮೊದಲಾಗಿ ಜ್ಯೋತಿಶ್ಶಾಸ್ತ್ರಜ್ಞನು ಶುಭಾಶುಭಗಳನ್ನು ಹೇಳತಕ್ಕದ್ದು.

ಶ್ಲೋ॥ ಜನ್ಮಧಿಷ್ಣ್ಯಭವನೊದ್ಭವಮ್ಫಲಜನ್ಮಿನೀಪುರುಷಯೋಶ್ವಿಚಿಂತಯೇತ್। ಜನ್ಮಧಿಷ್ಣ್ಯಭವನಾನಭಿಜ್ಞಯಾನಾಮತೋಖಿಲಮಿದಂವಿಚಿಂತಯೇತ್ ॥

ಟೀ॥ ಸ್ತ್ರೀಪುರುಷರಿಗೆ ಜನ್ಮನಕ್ಷತ್ರ ಜನ್ಮರಾಶಿಗಳನ್ನು ವಿಚಾರಿಸಿ ಶುಭಾ ಶುಭ ಫಲಗಳನ್ನು ಯೋಚಿಸಬೇಕು. ಅದು ತಿಳಿಯದಿದ್ದರೆ ನಾಮ ನಕ್ಷತ್ರರಾಶಿಗಳಿಂದ ಶುಭಾಶುಭಗಳನ್ನು ಚಿಂತಿಸತಕ್ಕದ್ದು.

ಶ್ಲೋ॥ ಅಜ್ಞಾತಜನ್ಮನಾಂನೄಣಾಂನಾಮಭಮ್ಪರಿಕಲ್ಪಯೇತ್। ತೇನೈವಚಿಂತಯೇತ್ಸರ್ವಂರಾಶಿಕೂಟಾದಿಜನ್ಮವತ್ ॥

ಟೀ॥ ಜನ್ಮ ನಕ್ಷತ್ರತಿಳಿಯದ ಮನುಷ್ಯರಿಗೆ ನಾಮನಕ್ಷತ್ರವನ್ನೆ ಹಿಡಿಯತಕ್ಕದ್ದು, ಅದರಿಂದಲೇ ರಾಶಿಕೂಟಮುಂತಾದ ಎಲ್ಲಾವರ್ಗಗಳನ್ನೂ ಆಲೋಚಿಸತಕ್ಕದ್ದು.

ಶ್ಲೋ॥ ಜನ್ಮನಾಜನ್ಮಕುವಿನೀತನಾಮ್ನಾನಾಮ್ನೈವಕಾರಯೇತ್।ಉಭಯೋಪ್ರಲೋಕೀಯೇಚೆತ್ಸ್ಯಂಜನ್ಮಸ್ತ್ರೀಣ್ಯನಾಮತಃ ॥

ಟೀ॥ ಪುರುಷನಿಗೂ ಸ್ತ್ರೀಗೂ ಜನ್ಮ ನಕ್ಷತ್ರಗಳನ್ನೇ ಹಿಡಿಯುವದೊಂದು ಪಕ್ಷವು, ನಾಮ ನಕ್ಷತ್ರಗಳನ್ನೇ ಹಿಡಿಯುವದೊಂದು ಪಕ್ಷವು, ಈ ಎರಡು ಪಕ್ಷಗಳೂ ದುರ್ಬಲಗಳಾಗಿರುವ ಪಕ್ಷದಲ್ಲಿ ಪುರುಷನ ಜನ್ಮ ನಕ್ಷತ್ರದಿಂದಲೂ, ಸ್ತ್ರೀಯು ನಾಮ ನಕ್ಷತ್ರದಿಂದಲೂ ಶುಭಾ ಶುಭಗಳನ್ನು ಯೋಚಿಸತಕ್ಕದ್ದು.

ಏಕನಕ್ಷತ್ರ ವಿವಾಹವು.

ಶ್ಲೋ॥ ರೋಹಿಣ್ಯಾರ್ದ್ರಾಮಘೇಂದ್ರಾಗ್ನಿತಿಷ್ಯಶ್ರವಣಪೌಷ್ಣಭಂ ।
ಅಹಿರ್ಬುಧ್ನ್ಯರ್ಕ್ಷಮೇಷಾಂಚನಕ್ಷತ್ರೈಕ್ಯೇಶುಭಾವಹಃ ॥

ಟೀ॥ ರೋಹಿಣೀ, ಆರ್ದ್ರಾ, ಮಘಾ, ವಿಶಾಖಾ, ಪುಷ್ಯ, ಶ್ರವಣ, ರೇವತೀ, ಉಭಾ, ಈ ನಕ್ಷತ್ರಗಳಲ್ಲಿ ಹುಟ್ಟಿದ ಸ್ತ್ರೀ ಪುರುಷರು ಒಂದೇ ನಕ್ಷತ್ರದವರಾಗಿದ್ದರೂ ಶುಭಕರಗಳು.

ಶ್ಲೋ॥ ಅಶ್ವಿನೀಚಯಮಸ್ವಾತಿಸಾರ್ಪಫಾಲ್ಗುಣಿಮೇವಚ । ಮೈ
ತ್ರವಾರುಣಮೂಲಾಖ್ಯಂನಕ್ಷತ್ರೈಕ್ಯೇಪಿಮಧ್ಯಮಾ॥

ಟೀ॥ ಅಶ್ವಿನೀ, ಭರಣೀ, ಸ್ವಾತೀ, ಆಶ್ಲೇಷಾ, ಪೂರ್ವಫಲ್ಗುನೀ, ಅನೂ, ಶತಭಿಷಕ್, ಮೂಲ, ಈ ೮ ನಕ್ಷತ್ರಗಳಲ್ಲಿ ಹುಟ್ಟಿದ ಸ್ತ್ರೀಪುರುಷರಿಗೆ ನಕ್ಷತ್ರಗಳೊಂದಾಗಿದ್ದರೆ ಮಧ್ಯಮವು.

ಶ್ಲೋ॥ ಅಜೈಕಪಾಚ್ಛ್ರವಿಷ್ಠಾಚಪುನರ್ವಸ್ವಥಕೃತ್ತಿಕಾ । ಮೃಗ
ಶೀರ್ಷಂಚಚಿತ್ರಾಚಸವಿತೋತ್ತರಫಲ್ಗುನೀ । ಜ್ಯೇಷ್ಠಾಚವಿಶ್ವತೋ
ಯಂಚನಕ್ಷತ್ರೈಕ್ಯೇವಿನಶ್ಯತಿ । ಏಕರಾಶೌಪೃಥಗ್ಧಿಷ್ಣ್ಯೇಚೋತ್ತ
ಮವಾಪ್ಪಾಣಿಪೀಡನಂ ॥

ಟೀ॥ ಪೂರ್ವಾಭಾದ್ರ, ಧನಿಷ್ಠಾ, ಪುನರ್ವಸೂ, ಕೃತ್ತಿಕಾ, ಮೃಗಶೀರ್ಷ, ಚಿತ್ರಾ, ಹಸ್ತ, ಉತ್ತರಾ, ಜ್ಯೇಷ್ಠ, ಪೂಷಾ, ಉಭಾ ಈ ನಕ್ಷತ್ರಗಳಲ್ಲಿ ಹುಟ್ಟಿದ ಸ್ತ್ರೀಪುರುಷರಿಗೆ ನಕ್ಷತ್ರೈಕ್ಯ ವುಂಟಾದರೆ ಸ್ತ್ರೀಪುರುಷರಿಗೆ ನಾಶಕರವಾಗುತ್ತದೆ. ಮತ್ತು ಸ್ತ್ರೀ ಪುರುಷರಿಗೆ ಜನ್ಮ ರಾಶಿಯೊಂದಾಗಿ ನಕ್ಷತ್ರಗಳು ಬೇರೆಯಾಗಿ ಇದ್ದಲ್ಲಿ ವಿವಾಹ ಉತ್ತಮವಾದುದು.

ಶ್ಲೋ॥ ರಾಶ್ಯೈಕ್ಯೇಚೇದ್ಭಿನ್ನಮೃಕ್ಷಂದ್ವಯೋಸ್ಸ್ಯಾನ್ನಕ್ಷತ್ರೈಕ್ಯೇ
ರಾಶಿಯುಗ್ಮಂತಥೈವ । ನಾಡೀದೋಷೋನೋಗಣಾನಾಂಚದೋಷೋ
ನಕ್ಷತ್ರೈಕ್ಯೇಭಿನ್ನಪಾದಶ್ಶುಭಸ್ಯಾತ್ ॥

ಟೀ॥ ದಂಪತಿಗಳೊಂದೇ ರಾಶಿಯಲ್ಲಿ ಹುಟ್ಟಿದವರಾಗಿ ಇದ್ದರೆ ನಕ್ಷತ್ರ

ಭೇದ ಉಂಟಾದರೂ ಹಾಗೆ ಒಂದೇ ನಕ್ಷತ್ರದಲ್ಲಿ ಹುಟ್ಟಿದವರಾಗಿದ್ದರೆ ರಾಶಿಭೇದ ಉಂಟಾದರೂ ನಾಡೀ ದೋಷವು ಗಣ ದೋಷವು ಸಹ ಉಂಟಾಗುವದಿಲ್ಲ. ವಧೂವರರು ಒಂದೇ ನಕ್ಷತ್ರದಲ್ಲಿ ಹುಟ್ಟಿದ್ದರೂ ಬೇರೆ ಬೇರೆ ಪಾದಗಳಲ್ಲಿ ಹುಟ್ಟಿದವರಾದರೆ ಅವರ ವಿವಾಹವು ಶುಭಕರವಾಗುವದು.

ಗ್ರಂಥಾಂತರದಲ್ಲಿ.

ಶ್ಲೋ॥ ಏಕರ್ಕ್ಷೇಚೈಕಪಾದಂತುವಿವಾಹಪ್ರಾಣಹಾನಿದಃ ದಂಪತ್ಯೋರೇಕನಕ್ಷತ್ರೇಭಿನ್ನಪಾದೇಶುಭಾವಹಃ ॥

ಟೀ॥ ಒಂದೇ ನಕ್ಷತ್ರದಲ್ಲೂ, ಒಂದೇಪಾದದಲ್ಲೂ, ಹುಟ್ಟಿದವರಿಗೆ ವಿವಾಹವು ಅವರಿಗೆ ಪ್ರಾಣಹಾನಿಕರವು, ಒಂದೇ ನಕ್ಷತ್ರದಲ್ಲೂ ಬೇರೆ ಬೇರೆ ಪಾದಗಳಲ್ಲಿ ಹುಟ್ಟಿದವರಿಗೆ ವಿವಾಹವು ಶುಭಕರವು.

ಶ್ಲೋ॥ ವಾರುಣಾರ್ಕಮರುದ್ಧಸ್ರವಹ್ನ್ಯೈಪಕ್ಷ್ಮವಿಧುಃಪಿತಾ।ಏಷುಸ್ತ್ರೀಪೂರ್ವವತ್ವೇಪಿರಾಶ್ಯೈಕ್ಯೈನತುದೋಷಭಾಕ್ ॥

ಟೀ॥ ಶತಭಿಷಕ್, ಹಸ್ತ, ಸ್ವಾತೀ, ಅಶ್ವಿನೀ, ಕೃತ್ತಿಕಾ, ಪೂಷಾ, ಮೃಗಶಿರ, ಮಖಾ, ಈ ನಕ್ಷತ್ರಗಳಲ್ಲಿ ಕನ್ಯೆಯು ಪ್ರಥಮ ಪಾದದಲ್ಲಿ ಹುಟ್ಟಿದ್ದರೆ ದಂಪತಿಗಳು ಒಂದೇ ನಕ್ಷತ್ರ ಒಂದೇ ರಾಶಿಯಲ್ಲಿ ಹುಟ್ಟಿದವರಾದರೂ ದೋಷವಿಲ್ಲ.

ಶ್ಲೋ॥ ಯುಗ್ಮಪಾದೇತಚಧಿಷ್ಣ್ಯೇತುವರಃಪೂರ್ವಾರ್ಧಗೋಜಯಃ। ಅಪರಾರ್ಧೋದ್ಭವಾನಾರೀಚೈಕರ್ಕ್ಷೇಪಿಶುಭಾವಹಃ॥

ಟೀ॥ ಸ್ತ್ರೀಪುರುಷರೊಂದೇ ನಕ್ಷತ್ರದಲ್ಲಿ ಹುಟ್ಟಿದವರಾಗಿ ಇರುವಾಗ ಆ ನಕ್ಷತ್ರವು ದ್ವಿಪಾದ ನಕ್ಷತ್ರವಾಗಿಯೂ ಅದರಲ್ಲಿ ವರನು ಪೂರ್ವಾರ್ಧದಲ್ಲಿಯೂ, ಸ್ತ್ರೀಯು ಅಪರಾರ್ಧದಲ್ಲಿಯೂ, ಹುಟ್ಟಿದವರಾಗಿದ್ದರೆ ಅಂತವನಿಗೆ ಜಯವೂ, ಶುಭವೂ ಸಹ ಉಂಟಾಗುವದು.

ಶ್ಲೋ॥ ಏಕರಾಶೌದ್ವಿನಕ್ಷತ್ರೇಪುಂತಾರಾಪ್ರಥಮಾಭವೇತ್। ಅತೀವಶೋಭನಂಪ್ರೋಕ್ತಂಸ್ತ್ರೀತಾರಾಚೇದ್ವಿನಾಶನಂ ॥

ಟೀ॥ ಎರಡು ನಕ್ಷತ್ರಗಳ ಸಂಬಂಧವುಳ್ಳ ಒಂದು ರಾಶಿಯಲ್ಲಿ ಹುಟ್ಟಿದ ಸ್ತ್ರೀಪುರುಷರೊಳು ಆ ರಾಶಿಯ ನಕ್ಷತ್ರಗಳಲ್ಲಿ ಪುರುಷನ ನಕ್ಷತ್ರವು ಮುಂದಿನದಾಗಿ ಇದ್ದರೆ ವಿವಾಹವು ಶುಭಕರವು, ಸ್ತ್ರೀ ನಕ್ಷತ್ರವು ಮೊದಲನೇದಾಗಿ ಇದ್ದರೆ ಅವರಿಗೆ ನಾಶ ವುಂಟಾಗುತ್ತದೆ.

ನವಾಂಶವು.

ಶ್ಲೋ॥ ಶುಭಮೆಂಶೈಕ್ಯಮುದ್ವಾಹೇದಂಪತ್ಯೋರ್ನಾಮತಾರಕೇ ।

ಗ್ರಾಮಸಂಗ್ರಾಮಸೇವಾಸುಸಮಾಂಶಮಶುಭಂವಿದುಃ ||

ಟೀ|| ದಂಪತಿಗಳ ನಾಮ ನಕ್ಷತ್ರಗಳಿಗೆ ಅಂಶ ಒಂದೇಯಾಗಿದ್ದರೆ ಶುಭಕರವಹುದು, ಗ್ರಾಮಪ್ರವೇಶ ಯುದ್ಧಾರಂಭ ಅಧಿಕಾರ ಪ್ರವೇಶಗಳಲ್ಲಿ ಸಮಾಂಶವು ಅಶುಭಕರವು.

ಶ್ಲೋ|| ವಿರುದ್ಧೇರಾಶಿನಕ್ಷತ್ರೇಭವೇತಾಮಪಿಚೇತ್ತದಾ | ದಂಪತ್ಯೋಃ ಪ್ರೀತಯೇನೂನಾಂನಾಮಾಂತರಮಥಕ್ಷಿಪೇತ್ ||

ಶ್ಲೋ॥ ಕತ್ರಾಚಿದೇಕಜನ್ಯಾನಾಂ ನವಿವಾಹವ್ಯತುತತ್ರಯೇ। ಯತ್ರ ವರ್ಷೇಣತತ್ರೈಕಾವಿಧವೈವನಸಂಶಯಃ॥

ಟೀ॥ ಒಂದು ಗರ್ಭದಲ್ಲಿ ಹುಟ್ಟಿದ ಇಬ್ಬರು ಕನ್ಯೆಯರಿಗೆ ಆರು ತಿಂಗಳೊಳಗಾಗಿ ವಿವಾಹವಾದರೆ ಒಂದು ವರ್ಷವೊಳಗಾಗಿ ಅವರಲ್ಲೊಬ್ಬಳು ವಿಧವೆ ಯಾಗುತ್ತಾಳೆ ಯಾಗಿ ಅಂತವರಿಗೆ ವಿವಾಹವನ್ನು ಮಾಡಕೂಡದು,

ಶ್ಲೋ॥ ಪುತ್ರೀವಿವಾಹಾತ್ಸರತಸ್ತ್ವೈವಶುಭಪ್ರದಂಪುತ್ರವಿವಾಹಕರ್ಮ। ಪುತ್ರೀದ್ವಯಂನೈವಯುತತ್ರಯೇಪಿಪುತ್ರದ್ವಯಂವಾಪಿಕದಾಚಿದೇವ॥

ಟೀ॥ ಮೊದಲು ಕನ್ಯೆಗೆ ವಿವಾಹವನ್ನು ಮಾಡಿ ಆವಾಗಲೆ ಮಗನಿಗೆವಿವಾಹವನ್ನು ಮಾಡತಕ್ಕದ್ದು, ಅಷ್ಟೇಹೊರ್ತು ಇಬ್ಬರುಹೆಂಣು ಮಕ್ಕಳಿಗೆ ಒಂದೇ ಕಾಲದಲ್ಲೂ ಅಥವಾ ಆರು ತಿಂಗಳೊಳಗಾಗಿಯೂ ವಿವಾಹವನ್ನು ಮಾಡಕೂಡದು॥

ಶ್ಲೋ॥ ಮಹಾನದೀಪರ್ವತಮಂತರಾವಾಕೃತ್ವಾವಿವಾಹಂಸಹಜಸ್ಯತಸ್ಯ। ತಸ್ಯಾನುಜಸ್ಯಾಪಿತದೈವಕಾರ್ಯಂಮೌಂಜೀನಿಬಂಧಾಖ್ಯಮಿದಂಪ್ರಶಸ್ತಂ॥

ಟೀ॥ ಇಬ್ಬರು ಸಹೋದರರಲ್ಲಿ ಜ್ಯೇಷ್ಠ ಕನಿಷ್ಠರಿಗೆ ವಿವಾಹ ಉಪನಯನಗಳಂನು ಮಾಡಬೇಕಾಗಿ ಬಂದರೆ ಗಂಗಾದಿ ಮಹಾ ನದಿಗಳಾಗಲಿ ವಿಂಧ್ಯಾದಿ ಪರ್ವತಗಳಾಗಲಿ ಅಡ್ಡವಾಗಿರುವ ಬೇರೆ ಬೇರೆ ಸ್ಥಳಗಳಲ್ಲಿ ಮಾಡಿದರೆ ಶುಭಕರವು, ಅದರಲ್ಲಿಯೂ ದೊಡ್ಡವನಿಗೆ ಮುಂದಿನ ವಿವಾಹವನ್ನು ಮಾಡಿಸಿ ತಮ್ಮನಿಗೆ ಉಪನಯನವನ್ನು ಮಾಡತಕ್ಕದ್ದು.

ಶ್ಲೋ॥ ಶುಭಕೃತ್ಪುತ್ರಿಕೋದ್ವಾಹಾತ್ಪಶ್ಚಾತ್ಪುತ್ರಕರಗ್ರಹಃ। ಏಕತಿಥ್ಯಾಮಪಿಪ್ರಾಹಭಾರ್ಗವೋಭಿನ್ನವೇಳಯಾ॥

ಟೀ॥ ಮಗಳಿಗೂ ಮಗನಿಗೂ ವಿವಾಹಗಳನ್ನು ಒಂದೇ ದಿನದಲ್ಲಿ ಮಾಡಬೇಕಾಗಿ ಬಂದರೆ ಬೇರೆ ಬೇರೆ ಲಗ್ನಗಳನ್ನು ಇಟ್ಟುಕೊಂಡು ಒಂದೇ ತಿಥಿಯಲ್ಲೂ ಮಾಡಬಹುದೆಂಬದಾಗಿ ಶುಕ್ರಾಚಾರ್ಯರು ಹೇಳಿದರು.

ಶ್ಲೋ॥ ಪೃಥಜಂಟಪಯೋರೇಕಜನ್ಮನ್ಯೋರೇಕೋದರಸ್ಥಯೋಃ।

ಇಚ್ಛಂತಿಭಿನ್ನವೇಳಾಯಾಂತಯೋರುದ್ವಾಹಮಂಗಳಂ ||

ಟೀ|| ಏಕೋದರರಾದ ಇಬ್ಬರು ಕನ್ಯೆಯರಿಗೆ ಬೇರೆಬೇರೆ ವಿವಾಹ ಮಂಟಪಗಳಲ್ಲೂ ಬೇರೆಬೇರೆ ಲಗ್ನಗಳಲ್ಲೂ ವಿವಾಹ ಮಾಡಬಹುದೆಂದು ಕೆಲವರು ಹೇಳುತ್ತಾರೆ.

ಶ್ಲೋ|| ಏಕಲಗ್ನೇಪಿಭಿನ್ನಾಂಶೇವಸಿಷ್ಠಾತ್ರಿಪರಾಶರಾಃ | ತಯೋರ್ವಿವಾಹಮಿಚ್ಛಂತಿಪೃಥಗ್ಗ್ರಾಮೇಥಮಂಟಪೇ ||

ಟೀ|| ಒಂದೇ ಲಗ್ನದಲ್ಲಾದರೂ ಅಂಶಭೇದಗಳಲ್ಲೂ ಬೇರೆಬೇರೆ ಗ್ರಾಮಗಳಲ್ಲೂ ಬೇರೆಬೇರೆ ಮಂಟಪಗಳಲ್ಲೂ ಏಕೋದರರಾದ ಕನ್ಯೆಯರಿಗೆ ವಿವಾಹ ಮಾಡಬಹುದೆಂಬದಾಗಿ ವಸಿಷ್ಠರು, ಅತ್ರಿಯು, ಪರಾಶರರು, ಈ ಋಷೀಶ್ವರರುಗಳು ಹೇಳಿದರು.

ಶ್ಲೋ|| ಫಾಲ್ಗುನೇಚೈತ್ರಮಾಸೇಚಪುತ್ರೋದ್ವಾಹೋಪನಾಯನೇ| ಭೇದಾದಬ್ದಸ್ಯಕುರ್ವೀತನರ್ತುತ್ರಯವಿಲಂಬನಂ||

ಟೀ|| ಜ್ಯೇಷ್ಠ ಕನಿಷ್ಠ ಪುತ್ರರಿಗೆ ವಿವಾಹೋಪನಯನಗಳನ್ನು ಮಾಡಬೇಕಾದರೆ ಫಾಲ್ಗುನ ಮಾಸದಲ್ಲಿ ವಿವಾಹವನ್ನು ಚೈತ್ರಮಾಸದಲ್ಲಿ ಉಪನಯನವನ್ನು ಸಹ ಮಾಡಬಹುದು. ಆದರಲ್ಲಿ ವರ್ಷಭೇದವುಂಟಾಗಿ ಇರುವದರಿಂದ ಮೂರು ಋತು ಕಳಿಯಬೇಕೆಂಬ ಶಾಸ್ತ್ರಕ್ಕೆ ಒಂದು ವರ್ಷದೊಳಗಿನ ಮೂರು ಋತುಗಳೆಂಬದೇ ಅರ್ಥವಾದದರಿಂದ ಆ ದೋಷಕ್ಕೆ ಇಲ್ಲಿ ಪ್ರಸಕ್ತಿ ಇರುವದಿಲ್ಲ.

ಶ್ಲೋ || ಕುಮಾರ್ಯೋಸ್ಸುತಯೋಃಪುತ್ರಪುತ್ರ್ಯೋರೇಕೋದರಸ್ಥಯೋಃ| ವಿವಾಹೋಬ್ದಾಂತರೇಶಸ್ತಸ್ಸ್ಯಾದ್ಯೋರ್ನದ್ಯಂತರೇಯಥಾ ||

ಟೀ|| ಒಂದೇ ಗರ್ಭದಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗಾದರೂ, ಗಂಡು ಮಕ್ಕಳಿಗಾದರೂ, ಹೆಣ್ಣುಗಂಡುಗಳಿಗಾದರೂ ಒಂದೇ ಕಾಲದಲ್ಲಿ ಮದುವೆಮಾಡಬೇಕಾಗಿ ಬಂದರೆ ಮಹಾ ನದಿಯಡ್ಡವಾಗಿ ಆದರ ಉಭಯಪಾರ್ಶ್ವಗಳಲ್ಲಿರುವ ಗ್ರಾಮಗಳಲ್ಲಿ ಮಾಡಿದಂತೆ ಬೇರೆಬೇರೆ ವರ್ಷಗಳಲ್ಲಿ ಮಾಡಿದರೆ ಶುಭಕರವಹುದು.

ಶ್ಲೋ|| ಕಲ್ಪಯೇದ್ವೇದಿಕಾಂರಮ್ಯಾಂಮಂಟಪಂಚಪೃಥಕ್ಪೃಥಕ್ | ಭಿಂನೋನರಪ್ರಸೂತಾನಾಮೇಕತಿಥ್ಯಾಂಕರಗ್ರಹಃ ||

ಟೀ|| ಬೇರೆಬೇರೆ ರಮ್ಯಗಳಾದ ವಿವಾಹ ಮಂಟಪಗಳನ್ನು ವಿವಾಹ ವೇದಿಕೆಗಳನ್ನು ನಿರ್ಮಾಣಮಾಡಿ ಅವುಗಳಲ್ಲಿ ವಿವಾಹವ ಮಾಡಿಸುವದು, ಏಕೋದರರಲ್ಲದೆ ಸವತಿಗಳ ಮಕ್ಕಳುಗಳಿಗೆ ಒಂದೇ ತಿಥಿಯಲ್ಲೂ ವಿವಾ

ಹವನ್ನು ಮಾಡಬಹುದು.

ಶ್ಲೋ॥ ಮುಂಡನಾನ್ಮುಂಡನಂ ಚೈವ ಮುಂಡನಾನ್ನತುಮುಂಡನಂ॥

ಟೀ॥ ಮಕ್ಕಳಿಗೆ ವಿವಾಹೋಪನಯನಗಳನ್ನು ಮಾಡಬೇಕಾಗಿ ಬಂದಾಗ ಮೊದಲು ವಿವಾಹವನ್ನು ಮಾಡಿ ತರುವಾಯ ಉಪನಯನವನ್ನು ಮಾಡತಕ್ಕದ್ದು.

ಅಭಿಜಿದ್ಗೋಧೂಳಿ ಲಕ್ಷಣವು.

ಶ್ಲೋ॥ ಮಧ್ಯಂದಿನಗತೇಭಾನೌಮುಹೂರ್ತೋಭಿಜಿದಾಹ್ವಯಃ। ಸ
ರ್ವದೋಷಾನ್ನಿಹಂತ್ಯಾಶುಪಿನಾಕೀತ್ರಿಪುರಂಯಥಾ ॥

ಟೀ॥ ಸೂರ್ಯನು ಸರಿಯಾಗಿ ಆಕಾಶ ಮಧ್ಯದಲ್ಲಿ ನಿಂತಾಗ ಒಂದು ಮುಹೂರ್ತಕಾಲ ಅಭಿಜಿತ್ತೆಂಬ ಶುಭಕಾಲ, ಅಂಥಾ ಕಾಲವು ಮಹೇಶ್ವರನು ತ್ರಿಪುರಗಳನ್ನು ಸುಟ್ಟಂತೆ ಸಕಲ ದೋಷಗಳನ್ನು ನಾಶ ಮಾಡುತ್ತದೆ.

ಶ್ಲೋ॥ ಸೂರ್ಯಾಚ್ಚತುರ್ಥಂಯಲ್ಲಗ್ನಮಭಿತ್ಸಂಜ್ಞಕಂಚತತ್। ಸ
ರ್ವದೇಶೇಷ್ವಿದಂಮುಖ್ಯಂಸರ್ವವರ್ಣೇಷುಸರ್ವದಾ ॥

ಟೀ॥ ಸೂರ್ಯನಿರುವ ಲಗ್ನಕ್ಕೆ ನಾಲ್ಕನೇ ಲಗ್ನವು ಅಭಿಜಿತ್ ಅನ್ನಿಸಿಕೊಳ್ಳುತ್ತದೆ. ಇದು ಸರ್ವ ದೇಶಗಳಲ್ಲೂ ಸರ್ವ ವರ್ಣಗಳಲ್ಲೂ ಮುಖ್ಯವಾದುದು.

ಶ್ಲೋ॥ ಅಶೇಷದೋಷಾಪಹರಂಶುಭಪ್ರದಂಜಗುರ್ಮುನೀಂದ್ರಾಅಭಿ
ಜಿನ್ಮುಹೂರ್ತಕಂ। ತಥೈವಗೋಧೂಳಿಕನಾಮಧೇಯಂವಿವಾಹಯಾ
ತ್ರಾದ್ಯಖಿಲೋತ್ಸವೇಷು ॥

ಟೀ। ಪೂರ್ವ ಋಷಿಗಳು ವಿವಾಹ ಯಾತ್ರಿ ಮುಂತಾದ ಸರ್ವ ಶುಭಕಾರ್ಯಗಳಲ್ಲೂ ಅಭಿಜಿನ್ಮುಹೂರ್ತ ಗೋಧೂಳಿ ಲಗ್ನ ಇವೆರಡುಗಳನ್ನು ಸರ್ವ ದೋಷಹರಗಳನ್ನಾಗಿಯೂ ಶುಭಕರಗಳನ್ನಾಗಿಯೂ ಹೇಳುತ್ತಾರೆ.

ಶ್ಲೋ॥ ಅಭಿಜಿತ್ಸರ್ವಕಾರ್ಯೇಷುಶಸ್ತಂನತೋಪನಾಯನಂ । ಸೂ
ರ್ಯಾತ್ಸಪ್ತಮಲಗ್ನಂಯದ್ಗೋಧೂಳಿಕಮಿತಿಸ್ಮೃತಂ ॥

ಟೀ॥ ಅಭಿಜಿನ್ಮುಹೂರ್ತವು ಸರ್ವ ಶುಭಕಾರ್ಯಗಳಲ್ಲೂ ಪ್ರಶಸ್ತವಾದರೂ ಉಪನಯನದಲ್ಲಿ ಮಾತ್ರ ಅಪ್ರಶಸ್ತವು. ಸೂರ್ಯನಿರುವ ರಾಶಿಗೆ ೭ನೇ ರಾಶಿ ಗೋಧೂಳಿ ಲಗ್ನವನ್ನಿಸಿಕೊಳ್ಳುತ್ತದೆ.

ಶ್ಲೋ॥ ಪಾಶ್ಚಾತ್ಯಾನಾಂಕಳಿಂಗಾನಾಂಮುಖ್ಯಂಗೋಧೂಳಿಕಂ

ಸ್ಮೃತಂ| ಅಭಿಜಿತ್ಸರ್ವದೇಶೇಷುಮುಖ್ಯಂದೋಷವಿನಾಶಕೃತ್ ॥

ಟೀ॥ ಪಶ್ಚಿಮ ದೇಶದವರಿಗೂ ಕಳಿಂಗ ದೇಶದವರಿಗೂ ಗೋಧೂಳಿಲಗ್ನ ಮುಖ್ಯವು. ಕಡಮೆ ಯೆಲ್ಲಾ ದೇಶಗಳಲ್ಲೂ ಅಭಿಜಿತ್ತು ಶ್ರೇಷ್ಟವಾಗಿಯೂ ದೋಷ ಹರವಾಗಿಯೂ ಇರುವದು.

ನೂತನ ವಧೂಪ್ರವೇಶವು ವಾಸಿಷ್ಠ.

ಶ್ಲೋ ॥ ಷಷ್ಠಿಷ್ಟಮೆವಾದಶಮೆದಿನೆವಾವಿವಾಹವಾರಭ್ಯವಧೂಪ್ರ
ವೇಶಃ | ಸಂಚಾಂಗಶುದ್ಧಿಂಚದಿನಂವಿನಾಪಿತಿಥೌನಸದ್ಗೋಚರಕೇ
ಪಿಕಾರ್ಯಃ ॥

ಟೀ॥ ಮದುವೆಯಾದ ೬=೮=೧೦ ಈ ದಿನಗಳಲ್ಲಿ ಪಂಚಾಂಗ ಶುದ್ಧಿ ಇಲ್ಲದಿದ್ದಾಗ್ಯೂ ಗೋಚಾರ ನೆಟ್ಟಗೆ ಇಲ್ಲದಿದ್ದಾಗ್ಯೂ ಮದುವೆಯಾದ ಹೆಣ್ಣಿಗೆ ಪತಿಯು ಗೃಹ ಪ್ರವೇಶ ಮಾಡಿಸಬಹುದು.

ಶ್ಲೋ॥ ವಿವಾಹವಾರಭ್ಯವಧೂಪ್ರವೇಶೋಯುಗ್ಮೆದಿನೆ ಷೋಡಶವಾ
ಸರಾಂತೆ | ತದೂರ್ಧ್ವಮಬ್ದೆಯುಜಿಪಂಚಮೆವಾಶಸ್ತಸ್ತದೂ
ರ್ಧ್ವಂವಿಷಮೆಸಮೆವಾ ॥

ಟೀ॥ ವಿವಾಹ ದಿನ ಮೊದಲು ೧೬ ದಿನಗಳ ವರಿಗೂ ಯುಗ್ಮಗಳಾದ ೬-೮-೧೦-೧೨-೧೪-೧೬ ಈ ದಿನಗಳಲ್ಲಿ ನೂತನ ವಧುವಿಗೆ ಗೃಹಪ್ರವೇಶ ಮಾಡಿಸತಕ್ಕದ್ದು, ಅದು ಕಳೆದ ತರುವಾಯ ಸಮಗಳಾದ ೨=೪ ಈ ಸಂವತ್ಸರಗಳಲ್ಲಿ ಮಾಡತಕ್ಕದ್ದು, ಅಥವಾ ವಿಷಮವಾದಾಗ್ಯೂ ೫ನೇ ವರ್ಷದಲ್ಲಾದರೂ ಮಾಡತಕ್ಕದ್ದು, ಅದೂ ಕಳೆದ ಮೇಲೆ ಯಾವ ಸಂವತ್ಸರದಲ್ಲಾದರೂ ಶುಭದಿನ ವಾರ ನಕ್ಷತ್ರ ಲಗ್ನಗಳಲ್ಲಿ ನೂತನ ವಧೂ ಪ್ರವೇಶ ಮಾಡಿಸತಕ್ಕದ್ದು.

ಶ್ಲೋ॥ ವಧೂಪ್ರವೇಶಂಪ್ರಥಮೆಚವರ್ಷೆತೃತೀಯವರ್ಷೆಪಿಶುಭಂವ
ದಂತಿ | ವರ್ಷೆದ್ವಿತೀಯೆಸ್ತ್ಯಥವಾಚತುರ್ಥೆವಧೂಪ್ರವೇಶಸ್ತ್ವಥ
ಭರ್ತೃನಾಶಃ ॥

ಟೀ॥ ಹೊಸದಾಗಿ ಮದುವೆಯಾದ ಕನ್ಯೆಗೆ ಗೃಹಪ್ರವೇಶವು ೧ನೇ ೩ನೇ ವರ್ಷಗಳಲ್ಲಿ ಶುಭಕರವು, ೨ನೇ ೪ ನೇ ವರ್ಷಗಳಲ್ಲಿ ಅಶುಭಕರಗಳು.

ಪ್ರವೇಶತ್ರೈವಿಧ್ಯಂಮೂರುವಿಧ ಪ್ರವೇಶವು.

ಶ್ಲೋ॥ ವಧೂಪ್ರವೇಶೋನದಿವಾಪ್ರಶಸ್ತೋನೃಪಪ್ರವೇಶೋನನಿಶಿಪ್ರ
ಶಸ್ತಃ| ದಿವಾಚರಾತ್ರೌಚ ಗೃಹಪ್ರವೇಶಃಕರೋತಿಕರ್ತುಶ್ಚಥ
ಕಾರ್ಯಸಿದ್ಧಿಂ ॥

ಟೀ ॥ ಹಗಲಿನಲ್ಲಿ ಸ್ತ್ರೀಗೆ ನೂತನ ಗೃಹಪ್ರವೇಶ ಮಾಡಕೂಡದು, ರಾಜಗೃಹಪ್ರವೇಶವು ರಾತ್ರಿಯಲ್ಲಿ ಮಾಡತಕ್ಕದ್ದಧಿ. ನೂತನವಧೂಪ್ರವೇಶವು ರಾತ್ರಿಯಲ್ಲೂ ರಾಜಗೃಹಪ್ರವೇಶ ಹಗಲಲ್ಲಿಯೂ ಮಾಡತಕ್ಕದ್ದು, ಅದು ಮಂಗಳಕರವಾಗುತ್ತದೆ.

ವಧೂಪ್ರವೇಶ ನಕ್ಷತ್ರವಾರಾದಿಗಳು.

ಶ್ಲೋ ॥ ನೀಹಾರಾಂಶುವಸೂತ್ತರಾದಿತಿಗುರುಸಾರ್ಪಾಷ್ಟ್ರಸುರಾಧಾಶ್ವಿನೀ । ಶಕ್ರಾಹಾಸ್ತರವಾಯುವಾರುಣಹತಿತ್ವಾಪ್ಟೈಷುಶಸ್ತೇತಿಥೌ । ಕುಂಭಾಜಾಳಿಗತೇತವಾಖರಕರೇಪ್ರೋದಯೇಭಾರ್ಗವೇ। ಜೀವೇಶ್ಯಾಸ್ಸುಜಿತಾದಿನೇನವವಧೂಸದ್ಮಪ್ರವೇಶಶ್ಶುಭಃ॥

ಟೀ॥ ಮೃಗಶೀರ್ಷ, ಧನಿಷ್ಠಾ, ಉತ್ತರಾ, ಉಷಾ, ಉಭಾ, ಪುನರ್ವಸೂ, ಪುಷ್ಯ, ರೋಹಿಣೀ, ಅನೂರಾಧಾ, ಅಶ್ವಿನೀ, ಜ್ಯೇಷ್ಠಾ, ಹಸ್ತ, ಸ್ವಾತೀ, ಶತಭಿಷಕ್, ಶ್ರವಣ ಚಿತ್ರಾ ಈ ನಕ್ಷತ್ರಗಳಲ್ಲಿ ಪ್ರಶಸ್ತವಾದ ತಿಥಿಯಲ್ಲಿಯೂ, ಸೂರ್ಯನು ಕುಂಭ ಮೇಷ ವೃಶ್ಚಿಕಗಳಲ್ಲಿ ಇರುವಾಗಲೂ ಗುರು ಶುಕ್ರರು ಉದಯವಾಗಿರುವಾಗಲೂ ನೂತನ ವಧೂಗೃಹಪ್ರವೇಶವು ಶುಭಕರವಾಗಿಹುದು.

ಶ್ಲೋ॥ ಪಾಷೆಧಿಮಾಸೆಚಹರೌಪ್ರಸುಪ್ತೇದ್ವಿತೀಯವರ್ಷೇಗುರುಶುಕ್ರಮೂಢೇ। ನವೋಢಿಕಾಯಾನಕರೋತಿಮಂದಿರಪ್ರವೇಶಮೇವಂಮುನಯೋವದಂತಿ ॥

ಟೀ॥ ಪುಷ್ಯ ಮಾಸದಲ್ಲೂ, ಅಧಿಕ ಮಾಸದಲ್ಲೂ, ಆಷಾಢ, ಶ್ರಾವಣ, ಭಾದ್ರಪದ, ಅಶ್ವಿಯುಜ ಮಾಸಗಳಲ್ಲೂ ವಿವಾಹವಾದ ಯೆರಡನೇ ವರ್ಷದಲ್ಲೂ ಗುರು ಶುಕ್ರರು ಮೂಢದಲ್ಲೂ ನೂತನ ವಧೂಪ್ರವೇಶವನ್ನು ಮಾಡಕೂಡದೆಂದು ಮುನೀಶ್ವರರು ಹೇಳುತ್ತಾರೆ.

ಮಲಮಾಸ ಸ್ವರೂಪವು.

ಶ್ಲೋ ॥ ಅಸಂಕ್ರಾಂತಿಮಾಸೋಧಿಮಾಸಸ್ಸ್ಫುಟಸ್ಸ್ಯಾದ್ದ್ವಿಸಂಕ್ರಾಂತಿಮಾಸಃಕ್ಷಯಾಖ್ಯಃಕದಾಚಿತ್ । ಕ್ಷಯಃಕಾರ್ತಿಕಾದಿತ್ರಯೇನಾನ್ಯಥಾಸ್ಯಾತ್ತದಾವರ್ಷಮಧ್ಯೇಧಿಮಾಸದ್ವಯಂಚ॥

ಟೀ ॥ ಯಾವ ತಿಂಗಳಲ್ಲಿ ಸೂರ್ಯನ ಸಂಕ್ರಾಂತಿ ಇಲ್ಲವೋ ಅದು ಅಧಿಕಮಾಸವೆಂದು ವ್ಯಕ್ತನಾಗಿ ಇದೆ ಎರಡು ಸೂರ್ಯ ಸಂಕ್ರಾಂತಿಯುಳ್ಳ ಮಾಸವು ಕ್ಷಯಮಾಸವನ್ನಿಸಿಕೊಳ್ಳುತ್ತದೆ. ಅಂತಾ ಕ್ಷಯಮಾಸವು ಕಾರ್ತಿಕ ಮಾರ್ಗಶೀರ್ಷ, ಪುಷ್ಯ ಈ ಮೂರು ಮಾಸಗಳಲ್ಲಾಗುತ್ತ

ದೆ, ಇತರ ಮಾಸಗಳಲ್ಲಾಗುವದಿಲ್ಲ. ಅಂತಾ ಕ್ಷಯಮಾಸ ಉಂಟಾ ದಾಗ ಆ ವರ್ಷದ ಮಧ್ಯದಲ್ಲಿ ಎರಡು ಅಧಿಕ ಮಾಸಗಳುಂಟಾಗುತ್ತವೆಂ ದು ತಿಳಿಯುವದು.

ಶ್ಲೋ॥ ಕ್ಷಯಮಾಸೋಯದಾಜಾತಸ್ತಂಸರ್ಪಾಖ್ಯದ್ವಯಂಭವೇತ್। ಸಂಸರ್ಪಃಪೂರ್ವಮಾಸಸ್ಸ್ಯಾದಧಿಮಾಸಃಪರಸ್ಮೃತಃ ॥

ಟೀ॥ ಯಾವ ವರ್ಷದಲ್ಲಿ ಕ್ಷಯಮಾಸ ಬರುತ್ತದೋ ಆ ವರ್ಷ ದಲ್ಲಿಯುಂಟಾಗುವ ಎರಡು ಅಧಿಕಮಾಸಗಳಲ್ಲಿ ಮೊದಲನೇದು ಸಂಸ ರ್ಪವೆಂಬದಾಗಿಯೂ ೨ನೇದು ಅಧಿಕ ಮಾಸವೆಂಬದಾಗಿಯೂ ತಿಳಿ ಯುವದು.

ಶ್ಲೋ॥ ಗರ್ಭವಾದ್ದರ್ಷಿಕೆಭ್ಯತ್ಯೆಶ್ರಾದ್ಧೆಕರ್ಮಣಿಮಾಸಿಕೇ। ಸಪಿಂ ಡೀಕರಣೆನಿತ್ಯೆನಾಧಿಮಾಸಂವಿವರ್ಜಯೇತ್ ॥

ಟೀ॥ ಗರ್ಭಾಧಾನ ಸೀಮಂತ ಪುಂಸವನಾದಿ ಕರ್ಮಗಳನ್ನು ಚೆಂಗೆ ಡಿ ಸಹಸಾಲತೀರಿಸಿಕೊಳ್ಳುವದನ್ನು ಆಳಿರಿಸಿಕೊಳ್ಳುವದು, ಸಾಂವತ್ಸ ರಿಕಾದಿ ಶ್ರಾದ್ಧಗಳಲ್ಲಿಯೂ, ಸಪಿಂಡೀಕರಣದಲ್ಲೂ ಸಹ ಅಧಿಕಮಾಸವ ನ್ನು ಬಿಡಕೂಡದು, ಅದರಲ್ಲಿಯು ಮಾಡಿ ತೀರಬೇಕೆಂದು ಭಾವವು.

ಶ್ಲೋ॥ ಚೆಂದ್ರಸೂರ್ಯಗ್ರಹಸ್ನಾನಶ್ರಾದ್ಧದಾನಜಪಾದಿಕಂ। ಕಾ ರ್ಯಂಸ್ಯಾನ್ಮಲಮಾಸೇಪಿನಿತ್ಯನ್ನೈಮಿತ್ತಿಕಂಯಥಾ॥

ಟೀ॥ ಚೆಂದ್ರಸೂರ್ಯ ಗ್ರಹಣಸ್ನಾನ ಶ್ರಾದ್ಧ ಜಪಾದಿ ಕರ್ಮಗಳ ನು ಮಲಮಾಸದಲ್ಲೂ ಮಾಡತಕ್ಕದ್ದೇಯೆಂದು ಹೇಳಿದರು.

ಶ್ಲೋ॥ ವಾಪೀಕೂಪತಟಾಕಾದಿಪ್ರತಿಷ್ಠಾಯಜ್ಞಕರ್ಮಣಿ। ಗೃಹ ಪ್ರವೇಶಹೋಮಾದಿನಾನಾಕ್ರತುಮಹೋತ್ಸವಾಃ । ತೀರ್ಥಯಾ ತ್ರೋತ್ಸವಾದೀನಿಮಹಾದಾನವ್ರತಾನಿಚ । ಮಾಸಪ್ರಾಧಾನ್ಯಕಂ ಕರ್ಮಮುಕ್ತ್ವಾತತ್ಕಾಮ್ಯಕರ್ಮಚ। ನಕುರ್ಯಾನ್ಮಲಮಾಸೆಪಿ ಗುರೌಶುಕ್ರೇಥವಾಸ್ತಗೆ ॥

ಟೀ॥ ವಾಪೀಕೂಪತಟಾಕಾದಿ ಪ್ರತಿಷ್ಠೆಗಳು, ಯಜ್ಞಕರ್ಮಗಳು, ಗೃಹ ಪ್ರವೇಶ, ಹೋಮ. ದೇವೋತ್ಸವ, ತೀರ್ಥಯಾತ್ರಾ, ಮಹಾದಾ ನ, ಮಹಾವ್ರತ, ಮಾಸಪ್ರಧಾನಗಳಾದ ಇತರ ಕಾಮ್ಯ ಕರ್ಮಗಳು, ಇಂತಾವುಗಳನ್ನೆಲ್ಲಾ ಮಲಮಾಸದಲ್ಲೂ ಗುರು ಶುಕ್ರಾಸ್ತಮಯಗಳ ಲ್ಲಿಯೂ ಮಾಡಕೂಡದು.

ಸ್ತ್ರೀಯರ ಋತು ವಿಷಯ.

ಶ್ಲೋ॥ ಅನುಪಚಯಸ್ಥೇ ಚಂದ್ರೇ ಧರಣೀಸುತವೀಕ್ಷಣಾದ್ವಾಪಿ । ಪ್ರಥಮರಜೋದರ್ಶನತಶ್ಯುಭಾಶುಭಂಭವತಿವನಿತಾನಾಂ ॥

ಟೀ॥ ಚಂದ್ರನು ಆರ್ತವ ಲಗ್ನಕ್ಕೆ ೩-೬-೧೦ ಈ ಸ್ಥಾನಗಳಲ್ಲಿ ಇಲ್ಲದೆ ಇರುವಾಗಲೂ, ರಜೋದರ್ಶನ ಲಗ್ನಕ್ಕೆ ಅಂಗಾರಕನ ದೃಷ್ಟಿಯಿಂದಲೂ ಆ ಸ್ತ್ರೀಗೆ ಶುಭಾ ಶುಭಗಳು ಮಿಶ್ರವಾತಹುದು.

ದಿಕ್ಕುಗಳ ಫಲ.

ಶ್ಲೋ॥ ಶೈಲಚಂದ್ರಾಷ್ಟಜಲಧಿರಸಾಕ್ಷಿನವದಿಕ್ಕ್ರಮಾತ್ । ಪ್ರಾಗಾದಿಸ್ಯಾತ್ಪ್ರಜಾಸಂಖ್ಯಾಬಾಲಿಕಾಪ್ರಥಮಾರ್ತವೆ ॥

ಟೀ॥ ಕನ್ಯೆಯು ಮೊದಲನೇ ಋತುವಾದಲ್ಲಿ ಪೂರ್ವದಿಕ್ಕು ಮೊದಲು ಕ್ರಮವಾಗಿ ಪುತ್ರಸಂಖ್ಯೆಯು ಹ್ಯಾಗೆಂದರೆ, ೭-೧-೪-೮-೬-೨-೯-೧೦ ಇಷ್ಟಿಷ್ಟು ಪುತ್ರಸಂಖ್ಯೆಯನ್ನು ತಿಳಿಯುವದು.

ಆರ್ತವವಸ್ತ್ರನಿರ್ಣಯವು.

ಶ್ಲೋ॥ ಮೇಷಸಿಂಹೋಕ್ಷಧನುಷಾಮುದಯೇಧವಳಾಂಬರಾ। ಅಳಿಕರ್ಕಟನಕ್ರಾಣಾಮುದಯೆಮಲಿನಾಂಬರಾ। ಘಟಯುಗ್ಮಾಂಗನಾತೌಳಿಲಗ್ನೆರಕ್ತಯುತಾಂಬರಾ । ಪೃಚ್ಛಕಾಲೇಭವತ್ಯೇವಂಬಾಲಿಕಾಪ್ರಥಮಾರ್ತವೆ ॥

ಟೀ॥ ಕನ್ಯೆಯು, ಪ್ರಥಮ ಋತುವಾದಾಗ ಎಂತಾ ವಸ್ತ್ರ ಉಟ್ಟಿದ್ದಳೆಂದು ಪ್ರಶ್ನೆಮಾಡುವಲ್ಲಿ ಪ್ರಶ್ನೆಕಾಲ ಮೇಷ, ಸಿಹ್ಮ, ವೃಷಭ, ಧನುರ್ಲಗ್ನಗಳಾಗಿದ್ದರೆ ಬಿಳೀಶೀರೆಯುಟ್ಟಿದ್ದಳೆಂದುನ್ನು, ವೃಶ್ಚಿಕ, ಕಟಕ, ಮಕರ ಲಗ್ನಗಳಾದರೆ ಕೊಳಕು ಶೀರೆಯುಟ್ಟಿದ್ದಳೆಂದುನ್ನು ಕುಂಭ, ಮಿಥುನ, ಕನ್ಯೆ, ತುಲಾಲಗ್ನಗಳಾದರೆ ಕೆಂಪುಶೀರೆಯುಟ್ಟಿದ್ದಳೆಂದುನ್ನು ಹೇಳತಕ್ಕದ್ದು.

ಋತುಕಾಲದಲ್ಲಿ ಉಟ್ಟಿದ್ದವಸ್ತ್ರಫಲ.

ಶ್ಲೋ॥ ಸುಭಗಾಶ್ವೇತವಸ್ತ್ರಾಸ್ಯಾದ್ದೃಢವಸ್ತ್ರಾಪತಿವ್ರತಾ। ಕ್ಷೌಮವಸ್ತ್ರಾಕ್ಷಿತೀಶಾಸ್ಯಾನ್ನವವಸ್ತ್ರಾಶುಭಾನ್ವಿತಾ । ದುರ್ಭಗಾಜೀರ್ಣವಸ್ತ್ರಾಸ್ಯಾದ್ರೋಗಿಣೀರಕ್ತಧಾರಿಣಿ। ನೀಲಾಂಬರಧರಾನಾರಿವಿಧವಾಪುಷ್ಪಿಣೀಭವೇತ್ । ಮಲಿನಾಂಬರಸಂವೀತಾದರಿದ್ರಾಸ್ಯಾದ್ರಜಸ್ವಲಾ। ದೃಢವಸ್ತ್ರಫಲಂಸಮ್ಯಗ್ಗದಿತಂಮುನಿಪುಂಗವೈಃ॥

ಟೀ॥ ಸ್ತ್ರೀಯು ಪ್ರಥಮ ಋತು ವಾದಾಗ ಬಿಳೀ ಶೀರೆಯುಟ್ಟಿದ್ದ

ರೆ ಸೌಭಾಗ್ಯ ಉಂಟಾಗುವದು, ಅದರಲ್ಲಿ ದೃಢವಾದ ಶೀರೆಯುಟ್ಟಿದ್ದರೆ ಪತಿವ್ರತೆಯಾಗುವಳು, ಬಿಳೀ ರೇಷಮಿಾ ಶೀರೆಯುಟ್ಟಿದ್ದರೆ ಮಹಾರಾಜನ ಹೆಂಡತಿಯಾಗುವಳು. ಹೊಸ ಶೀರೆ ಯುಟ್ಟಿದ್ದರೆ ಶುಭ ಉಂಟಾಗುವದು. ಹರಕಲು ಶೀರೆ ಯುಟ್ಟಿದ್ದರೆ ನಿರ್ಭಾಗ್ಯೆಯಾಗುವಳು, ಕೆಂಪು ಶೀರೆಯುಟ್ಟಿದ್ದರೆ ರೋಗವತಿಯಾಗುವಳು, ಕರೀಶೀರೆ ಯುಟ್ಟಿದ್ದರೆ ಮುಂಡೆಯಾಗುವಳು, ಮಲಿನವಾಗಿ ಕೊಳಕುಶೀರೆ ಯುಟ್ಟಿದ್ದರೆ ದರಿದ್ರೆಯಾಗುವಳು, ಈ ಪ್ರಕಾರ ಋತುಕಾಲದಲ್ಲಿ ಉಟ್ಟಿದ್ದ ಶೀರೆಗಳ ಫಲಗಳನ್ನು ತಿಳಿಯುವದು.

ರಜೋಬಿಂದು ಫಲಗಳು.

ಶ್ಲೋ॥ ಇಂದ್ರಗುಣೋಗ್ನಿಯಮಪನವಾರ್ದ್ಧಿರನ್ಯೈವೃಷಿವಾಯುಧೃ
ಶದ್ವಿಸಂಖ್ಯಾಃ । ಕುಬೇರಈಶೇಶಿಬಿಂದುರೇಕೋವಸ್ತ್ರಾಷುನಕ್ತೋ
ನವಪುಷ್ಪಪತ್ಯಾಃ ॥

ಟೀ॥ ಪೂರ್ವದಿಕ್ಕು ಆಗ್ನೇಯಮೂಲೆ ಇವುಗಳಲ್ಲಿ ೩ ಬಿಂದುಗಳು, ದಕ್ಷಿಣ ದಿಕ್ಕಿನಲ್ಲೂ ನಿಋಋತಿಯಲ್ಲೂ ೪ ಬಿಂದುಗಳು, ಪಶ್ಚಿಮದಲ್ಲೂ ವಾಯುವ್ಯದಲ್ಲೂ ೨ ಬಿಂದುಗಳು, ಉತ್ತರ ಈಶಾನ್ಯ ದಿಕ್ಕುಗಳಲ್ಲಿ ೧ ಬಿಂದುವು. ಅಂದರೆ ಕನ್ಯೆಯು ಋತುಮಾದಳೆಂಬದಾಗಿ ಫಲಗಳನ್ನು ಕೇಳುವದಕ್ಕಾಗಿ ಜೋತಿಷ್ಕನ ಬಳಿಗೆ ಬಂದಂತಾವರು ಯಾವ ದಿಕ್ಕಿನಲ್ಲಿ ನಿಂತು ಕೇಳುತ್ತಾರೊ ಆ ದಿಕ್ಕನ್ನು ಹಿಡಿದು ಬಿಂದುಗಳ ಸಂಖ್ಯೆಯನ್ನು ಹೇಳತಕ್ಕದ್ದು.

ಶ್ಲೋ॥ ಪ್ರಾಪ್ನೋತಿಬಿಂದುನೈಕೇನಸೌಭಾಗ್ಯಂಚದ್ವಿಬಿಂದುನಾ ।
ಭೋಗಸ್ತ್ರೀಬಿಂದುನಾರೋಗೋದಾರಿದ್ರ್ಯಂಬಹುಬಿಂದುನಾ ॥

ಟೀ॥ ಒಂದು ಬಿಂದುವಿನಿಂದ ಸೌಭಾಗ್ಯವು, ಯೆರಡು ಬಿಂದುಗಳಿಂದ ಭೋಗವು, ಮೂರು ಬಿಂದುಗಳಿಂದ ರೋಗವು, ಬಹುಬಿಂದುಗಳಿಂದ ದಾರಿದ್ರ್ಯಉಂಟಾಗುತ್ತದೆ.

ಕಾಲ ಫಲವು.

ಶ್ಲೋ॥ ಪುತ್ರವತ್ಯಾಶ್ಚಭಂಪಾತಃಪೂರ್ವಾಹ್ಣೇತೀರ್ಥಗಾಮಿನಿ ।
ಮಧ್ಯಾಹ್ನೇಸುತಸೌಭಾಗ್ಯಾಚಾಪರಾಹ್ಣೇತುಜಾರಿಣೀ। ಸಾಯಾ
ಹ್ನೇಬಹುಪತ್ನೀಸ್ಯಾತ್ಸಂಧ್ಯಯೋರ್ವೇಶ್ಯತಾಂವ್ರಜೇತ್ । ಪೂರ್ವರಾ
ತ್ರೇಚಿರಾಯುಸ್ಯಾನ್ನಿಶಿಥೆವಿಧವಾಭವೇತ್ । ಸೀತಾಂತೇಸುಖಹೀನಾ
ಸ್ಯಾದುರ್ಭಗಾಸರ್ವಸಂಧಿಷು ॥

ಕ್ಷತ್ರಗಳಲ್ಲಿ ಋತುವಾದ ಹೆಣ್ಣು ತಾಂಬೂಲ, ಅಭ್ಯಂಜನ, ಪುಷ್ಪ, ಆ ಶನಿನ, ಇವುಗಳನ್ನು ಬಿಟ್ಟು ಆ ನಕ್ಷತ್ರಗಳಲ್ಲಿ ಋತುವಾದ ದೋಷಕ್ಕೆ ಶಾಂತಿ ಕರ್ಮವನ್ನು ಮಾಡುವವರಿಗೂ ಗಂಡನ ಮುಖ ನೋಡದೇ ಇರಬೇಕು. ಶಾಂತಿ ಕರ್ಮವಾದ ತರುವಾಯ ಬಿಟ್ಟದ್ದನ್ನೆಲ್ಲಾ ಸ್ವೀಕರಿಸಬಹುದು. ಮತ್ತು ಆರ್ದ್ರಾ ವಿಶಾಖಾ ಈ ನಕ್ಷತ್ರಗಳಲ್ಲಿ ಋತುವಾದವಳು ದುಃಖಿಸುತ್ತಿರುವಳು, ಪುನರ್ವಸು ಜ್ಯೇಷ್ಠಾ ಇವುಗಳಲ್ಲಿ ಋತುವಾದರೆ ವ್ಯಭಿಚಾರಿಣಿಯಾಗುವಳು, ಕೃತ್ತಿಕೆಯಲ್ಲಿ ಪುಷ್ಪವತಿಯಾದವಳು ದರಿದ್ರೆಯಾಗುವಳು.

ಶ್ಲೋ ॥ ಕೃತ್ತಿಕಾದಿತ್ಯರೌದ್ರೇಷುಮಖಾಜ್ಯೇಷ್ಠೇರಜಸ್ವಲಾ ! ಆದಿಪಾದೇಶುಭಂಪ್ರೋಕ್ತಂಸಾಕನ್ಯಾಮಂಗಳಪ್ರದಾ ॥ ದ್ವಿಪಾದೇಚೆದ್ವಿಜೋದ್ದಿಷ್ಟಂಪಂಚವಿಂಶತಿಭೋಜನಂ । ತ್ರಿಪಾದೇಪಚತುಷ್ಪಾದೇ ಶಾಂತಿಂಕುರ್ಯಾದ್ಯಥಾವಿಧಿ ॥

ಟೀ॥ ಕೃತ್ತಿಕಾ, ಪುನರ್ವಸು, ಆರ್ದ್ರಾ, ಜ್ಯೇಷ್ಠಾ, ಮಖಾ, ಈ ನಕ್ಷತ್ರಗಳ ೧ನೇ ಪಾದದಲ್ಲಿ ಋತುವಾದರೆ ಸ್ತ್ರೀರಿಗೆ ಮಂಗಳಪ್ರದವು. ೧ನೇ ಪಾದದಲ್ಲಾದರೆ ೨೫ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿದರೆ ತದ್ದೋಷ ಪರಿಹಾರವಾಗುವದು. ೩-೪ನೇ ಪಾದಗಳಲ್ಲಾದರೆ ಆ ದೋಷಕ್ಕೆ ಶಾಸ್ತ್ರೋಕ್ತ ಕ್ರಮದಿಂದ ಶಾಂತಿ ಕರ್ಮವನ್ನು ಮಾಡಬೇಕು.

ಶುಭನಕ್ಷತ್ರ ಫಲಗಳು=ಗ್ರಂಥಾಂತರದಲ್ಲಿ.

ಶ್ಲೋ ॥ ಧನಿಷ್ಠಾವಿಷ್ಣುಮೂಲಾಸುಸಾರ್ಯಾಸಾಸ್ಯುತ್ಸುತಪಂಚಕಂ । ಮೃಗೋತ್ತರಾಕರಸ್ವಾಷ್ಟ್ರಶತತಾರಾಸುವೃಷಕ । ದ್ವಿಪೈವಸ್ವಾತಿಮೂಲಾಶ್ವಿವೈತ್ರೇಷುಚಸುತಾಷ್ಟಕಂ। ಪ್ರಾಜಾಪತ್ಯೇಸುತಾಸ್ಸಪ್ತಚಾಂತ್ಯೇಚನರಕಂಭವೇತ್ ॥

ಟೀ॥ ಧನಿಷ್ಠಾ, ಶ್ರವಣ, ಮೂಲ, ಇವುಗಳಲ್ಲಿ ಋತುವಾದ ಹೆಂಗಸಿಗೆ ೫ ಮಕ್ಕಳು ಹುಟ್ಟುವರು. ಮೃಗಶೀರ್ಷ, ಉತ್ತರಾ, ಉಷಾ, ಉಭಾ, ಹಸ್ತ, ಚಿತ್ರಾ, ಶತಭಿಷಕ, ಇವುಗಳಲ್ಲಿಯಾದರೆ ೧೦ ಮಕ್ಕಳುಂಟಾಗುವರು. ವಿಶಾಖಾ, ಸ್ವಾತೀ, ಮೂಲ, ಅಶ್ವಿನೀ. ಅನೂರಾಧಾ, ಇವುಗಳಲ್ಲಿ ೮ ಮಕ್ಕಳುಂಟಾಗುವರು. ರೋಹಿಣಿಯಲ್ಲಿಯಾದರೆ ೭ ಮಕ್ಕಳು. ರೇವತಿಯಲ್ಲಿಯಾದರೆ ೯ ಮಕ್ಕಳುಂಟಾಗುವರು.

ದುಷ್ಟ ನಕ್ಷತ್ರ ಫಲಗಳು.

ಶ್ಲೋ ॥ ಪೂರ್ವಾತ್ರಯೇದರಿದ್ರಾಸ್ಯಾತ್ಕೃತ್ತಿಕಾಯಾಂತದುಭಗ

ಗಾ। ಆದ್ರಾರ್ಯಾಂಪುತ್ರನಾಶಸ್ಸ್ಯಾದ್ಭರಣ್ಯಾಂಸ್ವಮ್ರ್ತಿರ್ಭವೇತ್।
ಮಖಾಯಾಂಭರ್ತೃನಾಶಸ್ಸ್ಯಾತ್ಸಾರ್ಪೇಚಾಂಡಾಲಗಾಮಿನೀ ದರಿ
ದ್ರಿಣೀಚಜ್ಯೇಷ್ಠಾಯಾಂರತಿಹೀನಾಚಜಾಯತೇ ॥

ಟೀ॥ ಪೂಷ, ಪೂಷಾ, ಪೂಭಾ, ಇವುಗಳಲ್ಲಿ ಋತುವಾದರೆ ದರಿದ್ರಳಾ ಗಿಯೂ, ಕೃತ್ತಿಕೆಯಲ್ಲಿ ಸಭಾಗ್ಯಳಾಗಿಯೂ, ಆದ್ರ್ರೆಯಲ್ಲಿ ಪುತ್ರ ನಾಶವುಳ್ಳವಳಾಗಿಯೂ ಆಗುವಳು. ಭರಣಿಯಲ್ಲಿ ಅವಳಿಗೆ ಮೃತ್ಯುವ ಹುದು. ಮಖೆಯಲ್ಲಿ ಗಂಡನಾಶವು. ಆಶ್ಲೇಷದಲ್ಲಿ ಚಂಡಾಲ ಸಂಗ ಮಾಡುವಳು. ಜ್ಯೇಷ್ಠಯಲ್ಲಿ ದರಿದ್ರಳಾಗಿಯೂ ಭೋಗ ಸೌಖ್ಯವಿ ಲ್ಲದವಳಾಗಿಯೂ ಆಗುತ್ತಾಳೆ.

ಶ್ಲೋ ॥ ಪೂರ್ವತ್ರಯೇಭುಜಂಗರ್ಕ್ಷೇಯಾಮ್ಯರ್ಕ್ಷೇಚರಜಸ್ವಲಾ।
ಪ್ರಥಮಾಂಶೇಪತಿಘ್ನಿಸ್ಸ್ಯಾದ್ವಿತೀಯೇಮೃತಪುತ್ರಕಾ । ತೃತೀಯೇ
ತುದರಿದ್ರಾಸ್ಸ್ಯಾಚ್ಚತುರ್ಥೇತ್ವಶುಭಾವಹಾ ॥

ಟೀ॥ ಪೂಷ, ಪೂಷಾ, ಪೂಭಾ, ಆಶ್ಲೇಷಾ, ಭರಣೀ, ಈ ನಕ್ಷತ್ರಗಳ ಲ್ಲಿ ೧ನೇ ಪಾದದಲ್ಲಿ ಋತುವಾದರೆ ಗಂಡನಿಗೆ ನಾಶವು. ೨ನೇ ಪಾದದಲ್ಲಿ ಹುಟ್ಟಿದ ಮಕ್ಕಳು ಸಾಯುವವು. ೩ನೇ ಪಾದದಲ್ಲಿ ದಾರಿದ್ರ್ಯವು. ೪ನೇ ಪಾದದಲ್ಲಿ ಅಶುಭವು ಆಗುವದು.

ದುಷ್ಟತಿಥಿ ಫಲವು.

ಶ್ಲೋ॥ ಅಮಾರಿಕ್ತಾಷ್ಟಮಿಷಷ್ಠೀದ್ವಾದಶೀಪ್ರತಿಪಸ್ಸ್ವಪಿ। ಪ
ರಿಘಸ್ಯಚಪೂರ್ವಾರ್ಧೇವ್ಯತೀಪಾತೇಚವೈಧೃತೌ । ಸಂಧ್ಯಾಸೂಪ
ಪ್ಲವೇವಿಷ್ಟ್ಯಾಮಶುಭಂಪ್ರಥಮಾರ್ತವಂ ॥

ಟೀ॥ ಅಮಾವಾಸ್ಯೆ, ರಿಕ್ತಾ, ಅಷ್ಟಮಿ, ಷಷ್ಟೀ, ದ್ವಾದಶೀ, ಪ್ರ ತಿಪತ್, ಪರಿಘಯೋಗದ ಪೂರ್ವಾರ್ಧ, ವ್ಯತೀಪಾತ, ವೈಧೃತಿ, ಸಂಧ್ಯಾ ಕಾಲಗಳು, ಸಿಡಿಲುಬೀಳುವದು ಮುಂತಾದ ಉತ್ಪಾತಗಳು, ಭದ್ರಕರ ಣ, ಇಂತಾ ಅನಿಷ್ಟ ಕಾಲಗಳಲ್ಲಿ ಪ್ರಥಮಾರ್ತವವು ಅಶುಭಪ್ರದವು.

ಆರ್ತವ ಲಗ್ನದಲ್ಲಿ ಗ್ರಹಫಲವು.

ಶ್ಲೋ॥ ಕೇಂದ್ರತ್ರಿಕೋಣಾಯಧನಸ್ಥಿತಾಶ್ಚ ಶುಭಾಸ್ತ್ರಿಷಷ್ಠಾಯ
ಗತಾಶ್ಚಪಾಪಾಃ। ಶುಭಪ್ರದಾಸ್ಯುಃಪ್ರಥಮರ್ತುಕಾಲೇತಥಾವಿಧಿ
ಜ್ಞಾಜಗುರಾರ್ಯವರ್ಯ್ಯಾಃ ॥

ಟೀ॥ ಪ್ರಥಮ ರುತುಕಾಲದಲ್ಲಿ ರುತುವಾದ ಲಗ್ನಕ್ಕೆ ೧-೪-೭-೫= ೯=೧೦=೧೧ ಈ ಸ್ಥಾನಗಳಲ್ಲಿ ಶುಭ ಗ್ರಹಗಳಿದ್ದು ಪಾಪಗ್ರಹಗ

ಳು ೩-೬-೧೧ನೇ ಸ್ಥಾನಗಳಲ್ಲಿ ಇದ್ದರೆ ಶುಭಪ್ರದರಾಗುತ್ತಾರೆ.

ಶ್ಲೊ॥ ಅಷ್ಟಮಸ್ಥೆ ನಿಶಾನಾಥೇಭರ್ತುರ್ಮೃತ್ಯುರ್ಧನಕಾರಕಂ। ಚಂದ್ರ ತಾರಾಬಲಯುತೇರಜಃಪುತ್ರಾರ್ಥಸಂಪದಃ। ಲಗ್ನಾದ್ವಾಜನ್ಮಲ ಗ್ನಾದ್ವಾಭೂಮಿಜೀವಾಥವಾವಿಧೌ । ಸತ್ಪುತ್ರಾಪ್ರಥಮಾರ್ತೌ ಸ್ಯಾತ್ಕನ್ಯಾಚೋಪಚಯಸ್ಥಿತೇ ॥

ಟೀ॥ ಋತುವಾದ ಲಗ್ನಕ್ಕೆ ೮ರಲ್ಲು ಚಂದ್ರನಿದ್ದರೆ ಗಂಡನಿಗೆ ಅನಿಷ್ಟಕರವು, ಚಂದ್ರತಾರಾಬಲ ಯುಕ್ತನಾಗಿದ್ದರೆ ಪುತ್ರಧನ ಪ್ರದವು. ಋತುವಾದ ಲಗ್ನಕ್ಕಾದರೂ ಜನ್ಮಲಗ್ನಕ್ಕಾದರೂ ೩-೬-೧೧ರಲ್ಲಿ ಕುಜನಾದರೂ ಚಂದ್ರನಾದರೂ ಇದ್ದರೆ ಸತ್ಪುತ್ರ ಸಂತಾನ ಉಂಟಾಗುವದು.

ಆರ್ತವಲಗ್ನ ಶುಭಾಶುಭ ಫಲಗಳು.

ಶ್ಲೊ॥ ಮೇಷೇತುವ್ಯಭಿಚಾರಸ್ಯಾದ್ವೃಷಭೇಸೌಖ್ಯವರ್ಧನಂ । ಮಿಥುನೇಸ್ಯಾತ್ಪುತ್ರವತಿಕರ್ಕಟೇಜಾತಿಜಾರಿಣೀ।ಸಿಂಹೇಪುತ್ರವತಿನಾರಿ ಕನ್ಯಾಯಾಂಶ್ರೀಮತೀಭವೇತ್ । ಭಾಗ್ಯಯುಕ್ತಾತುಲಾಯಾಂಚ ವೃಶ್ಚಿಕೇವ್ಯಭಿಚಾರಿಣೀ । ಧುಶ್ಚರೀಧನುಃಪೂರ್ವೇಸ್ಯಾದಪರೇತುಪತಿವ್ರತಾ। ಮಕರೇಮಾನಹೀನಾಸ್ಯಾತ್ಕುಂಭೇಧನಪತೀಭವೇತ್। ಮೀನೆ ಪುತ್ರವತೀಚೈವಪ್ರಥಮಾರ್ತಾವಿದಂಫಲಂ ॥

ಟೀ॥ ಮೇಷಲಗ್ನದಲ್ಲಿ ಪ್ರಥಮ ಋತುವಾದರೆ ವ್ಯಭಿಚಾರಿಯಾಗುತ್ತಾಳೆ. ವೃಷಭದಲ್ಲಿ ಸೌಖ್ಯವತಿಯು, ಮಿಥುನದಲ್ಲಿ ಪುತ್ರವತಿಯು, ಕಟಕದಲ್ಲಿ ಹಾದರಗಿತ್ತಿಯು, ಸಿಹ್ಮದಲ್ಲಿ ಪುತ್ರವತಿಯು, ಕನ್ಯೆಯಲ್ಲಿ ಐಶ್ವರ್ಯವತಿಯು, ತುಲೆಯಲ್ಲಿ ಭಾಗ್ಯವತಿಯು, ವೃಶ್ಚಿಕದಲ್ಲಿ ವ್ಯಭಿಚಾರಿಯು, ಧನುಸ್ಸಿನ ಪೂರ್ವಾರ್ಧದಲ್ಲಿ ಕೆಟ್ಟ ಚರ್ಯೆಯುಳ್ಳವಳು, ಅದರ ಉತ್ತರಾರ್ಧದಲ್ಲಿ ಪತಿವ್ರತೆಯು, ಮಕರದಲ್ಲಿ ಮಾನಹೀನೆಯು, ಕುಂಭದಲ್ಲಿ ಧನವಂತೆಯು, ಮೀನದಲ್ಲಿ ಸಂತಾನವುಳ್ಳವಳೂ ಆಗುತ್ತಾಳೆ.

ಗ್ರಂಥಾಂತರದಲ್ಲಿ.

ಶ್ಲೊ॥ ಮೇಷೇಸಿಂಹೇಚಕನ್ಯಕಾಯಾಂಗ್ರಾಮಸ್ಯಬಾಹ್ಯೇಪ್ರಥಮಾರ್ತವಂಸ್ಯಾತ್ । ವೃಷೇಚಗೋಷ್ಠೇಧನುಷಿಸ್ವಗೇಹೇಗ್ರಾಮೇಘಟೇ ನ್ಯಸ್ಯಗೃಹೇಂಗನಾಯಾಃ ॥ ಮೀನೇಮೃಗೇಕರ್ಕಟಕೇಘಟೇಂಬುತೀರೇ ಸ್ನಾಯುಗ್ಮತುದಿಗಂಬರಸ್ಯಾತ್ । ವನೇಚಮಧ್ಯೇಪ್ಯಥವೃಶ್ಚಿಕೇಚಗರ್ಗಾದಯೋಜ್ಞಿಮುದೀರಯಂತಿ ॥

ಟೀ॥ ಮೇಷ, ಸಿಂಹ, ಕನ್ಯಾ, ಈ ೩ ರಾಶಿಗಳಲ್ಲಿ ಕನ್ಯೆಯು ಊರಿನ ಹೊರಗೆ ಋತುವಾಗುತ್ತಾಳೆ. ವೃಷಭದಲ್ಲಿ ದನಕಟ್ಟುವ ಸ್ಥಳದಲ್ಲಿ, ಧನುಸ್ಸಿನಲ್ಲಿ, ತನ್ನ ಮನೆಯಲ್ಲಿ, ತಾಲೆಯಲ್ಲಿ, ಗ್ರಾಮ ಮಧ್ಯದಲ್ಲಿ, ಅಥವಾ ಅನ್ಯರ ಮನೆಯಲ್ಲಿ, ಮೀನ, ಕುಂಭ, ಕರ್ಕಾಟಕ ಅವುಗಳಲ್ಲಿ ಸಮೀಪದಲ್ಲಿ ಮಿಥುನದಲ್ಲಾದರೆ ದಿಗಂಬರವಾಗಿರುತ್ತಾಳೆ. ವೃಶ್ಚಿಕದಲ್ಲಿ ಅರಣ್ಯದಲ್ಲಿ ಪ್ರಥಮಾರ್ತವ ಆಗುತ್ತಾಳೆಂದು ಗರ್ಗಾದಿಗಳು ಹೇಳಿದರು.

ರಜೋದರ್ಶನ ಸ್ಥಾನಫಲವು.

ಶ್ಲೋ॥ ಗ್ರಾಮಬಾಹ್ಯೇಪರಗ್ರಾಮೇಸಾಸ್ತ್ರೀಸ್ಯಾದ್ವ್ಯಭಿಚಾರಿಣೀ। ಪತಿವ್ರತಾಪಶುಸ್ಥಾನೇ ಸುಜೀವಾಗೃಹಮಧ್ಯಮೇ। ಗ್ರಾಮಮಧ್ಯೇ ಸುವೃದ್ಧಸ್ಯಾದ್ವಿಧವಾಸಾದ್ದಿಗಂಬರಾ ॥ ಅನ್ಯಸ್ಯಗೇಹೇದುಶ್ಶೀಲಾ ದೀರ್ಘಾಯುರ್ಜಲಸನ್ನಿಧೌ । ವನಮಧ್ಯೇತುಸೌಭಾಗ್ಯಧನಧಾನ್ಯಸಮನ್ವಿತಾ.

ಟೀ॥ ಗ್ರಾಮಬಾಹ್ಯದಲ್ಲೂ ಪರಗ್ರಾಮದಲ್ಲೂ ಋತುವಾದವಳು ವ್ಯಭಿಚಾರಿಯಾಗುವಳು, ಪಶುಸ್ಥಾನದಲ್ಲಾದವಳು ಪತಿವ್ರತೆಯಾಗುವಳು. ಸ್ವಗೃಹಮಧ್ಯದಲ್ಲಿ ಸೌಖ್ಯವುಳ್ಳವಳಾಗುವಳು, ಗ್ರಾಮ ಮಧ್ಯದಲ್ಲಿ ಶುಭಕರವಾಗುವದು, ಬೆತ್ತಲೆಯಾದವಳು ವಿಧವೆಯಾಗುವಳು, ಅನ್ಯರ ಮನೆಯಲ್ಲಿ ಋತುವಾದವಳು ಕೆಟ್ಟ ನಡತೆಯುಳ್ಳವಳಾಗುತ್ತಾಳೆ. ಜಲಸಮೀಪದಲ್ಲಾದವಳು ದೀರ್ಘಾಯುಷ್ಮತಿಯಾಗುತ್ತಾಳೆ, ಅರಣ್ಯದಲ್ಲಾದವಳು ಸೌಭಾಗ್ಯ ಧನಧಾನ್ಯವತಿಯಾಗುತ್ತಾಳೆ.

ಪ್ರಥಮಾರ್ತವ ನಕ್ಷತ್ರದಲ್ಲಿ ಗ್ರಹಫಲವು.

ಶ್ಲೋ ॥ ಪ್ರಥಮಾರ್ತವನಕ್ಷತ್ರೇಸಮಾಹೇಜೇಮೃತಪ್ರಜಾ । ಜ್ಞಾಶುಕ್ರಸಹಿತವಂಧ್ಯಾಸಗುರೌಸ್ಯಾತ್ತಪಸ್ವಿನೀ ॥ ಸಾದಿತ್ಯೇತುಪತಿಘ್ನೀಸ್ಯಾದ್ರಾಹುಯುಕ್ತೇತುಜಾರಿಣೀ। ಶನೌತಿಪ್ಯತಿಚೇದಾಸೀಗ್ರಹಹೀನೇಸುವಾಸಿನೀ ॥

ಟೀ॥ ಋತುವಾದ ನಕ್ಷತ್ರದಲ್ಲಿ ಕುಜನಿದ್ದರೆ ಹುಟ್ಟುವ ಮಕ್ಕಳು ಸಾಯುತ್ತವೆ, ಬುಧ ಶುಕ್ರರಿದ್ದರೆ ಬಂಜೆಯು, ಗುರುವಿದ್ದರೆ ತಪಸ್ಸು ಮಾಡುವಳು, ಸೂರ್ಯನಿದ್ದರೆ ಗಂಡನನ್ನು ಕೊಲ್ಲುತ್ತಾಳೆ, ರಾಹುವಿದ್ದರೆ ಜಾರೆಯಾಗುವಳು, ಶನಿಯಿದ್ದರೆ ಚಾಕರಿ ಮಾಡಿ ಜೀವಿಸುವಳು, ಆದ್ದರಿಂದ ಪ್ರಥಮ ಋತುವಾದ ನಕ್ಷತ್ರದಲ್ಲಿ ಯಾವ ಗ್ರಹವೂ ಇಲ್ಲದಿದ್ದರೆ ದೀರ್ಘ ಸುಮಂಗಲಿಯಾಗಿರುವಳು.

ರಜಸ್ವಲಾ ಚಕ್ರವು.

ಶ್ಲೋ॥ ರಜಸ್ವಲಾಯಾಂಕನ್ಯಾಯಾಂ ದಿಕ್ಚಕ್ರೇಭಾನಿವಿನ್ಯಸೇತ್ ।
ಪ್ರಾಚ್ಯಾದಿದಿಕ್ಷುಚತ್ವಾರಿತ್ರೀಣಿತ್ರೀಣಿವಿದಿಕ್ಷುಚ ॥

ಟೀ॥ ಕನ್ಯೆ ರಜಸ್ವಲೆಯಾದಾಗ ದಿಕ್ಕುಗಳ ಆಕಾರವಾಗಿ ಒಂದು ಚಕ್ರವನ್ನೇರ್ಪಡಿಸಿ, ಅದರಲ್ಲಿ ಪೂರ್ವದಿಕ್ಕಿನಲ್ಲಿ ಸೂರ್ಯನಿರುವನಕ್ಷತ್ರ ಮೊದಲ್ಗೊಂಡು ನಕ್ಷತ್ರಗಳು ೪, ಆಗ್ನೇಯದಲ್ಲಿ ೩, ದಕ್ಷಿಣದಲ್ಲಿ ೪, ನಿಋತಿಯಲ್ಲಿ ೩, ಪಶ್ಚಿಮದಲ್ಲಿ ೪, ವಾಯುವ್ಯದಲ್ಲಿ ೩, ಉತ್ತರದಲ್ಲಿ ೪, ಈಶಾನ್ಯದಲ್ಲಿ ೩ ಈ ಮೇರೆ ನಕ್ಷತ್ರಗಳನ್ನು ಬರಿಯ ತಕ್ಕದ್ದು.



ಶ್ಲೋ॥ ಭಾನುಭಾಚ್ಚಂದ್ರನಕ್ಷತ್ರಪರ್ಯಂತಂಗಣಯೇತ್ಕ್ರಮಾತ್ ।
ಆಯುಸ್ಸಂಪದವೈಧವ್ಯಪುತ್ರಾಸ್ಸಿದ್ಧಿಕ್ಷುವಿನಿರ್ದಿಶೇತ್ । ವಿದಿಕ್ಷುಕ್ಷತ
ರೋಗಾರ್ತಿಮರಣಾನಿವದೇತ್ಕ್ರಮಾತ್ ॥

ಟೀ॥ ಸೂರ್ಯನಿರುವ ನಕ್ಷತ್ರ ಮೊದಲು ಚಂದ್ರನಿರುವ ನಕ್ಷತ್ರ ಪರ್ಯಂತರ ಎಣಿಸಿದರೆ ಮೂಡಲದಿಕ್ಕು ಮೊದಲು ೪ ದಿಕ್ಕುಗಳಲ್ಲಿಯೂ ೧ ನೇನಕ್ಷತ್ರಕ್ಕೆ ಫಲ ಆಯುಸ್ಸು, ೨ ನೇ ನಕ್ಷತ್ರಕ್ಕೆ ಸಂಪತ್ತು, ೩ನೇ ನಕ್ಷತ್ರಕ್ಕೆ ವೈಧವ್ಯ,೪ ನೇ ನಕ್ಷತ್ರಕ್ಕೆ ಪುತ್ರರು. ಈ ಮೇರೆ ಫಲವ

ತಿಳಿಯು ತಕ್ಕದ್ದು. ವಿದಿಕ್ಕುಗಳಲ್ಲಿ ಇರುವ ಮೂರು ನಕ್ಷತ್ರಗಳಿಗೂ ಕ್ರಮವಾಗಿ ೧ನೇದಕ್ಕೆ ಘಾಯು, ೨ನೇ ದಕ್ಕೆ ರೋಗ ಪೀಡೆ, ೩ ನೇದಕ್ಕೆ ಮರಣವೆಂಬದಾಗಿ ಫಲಗಳನ್ನು ತಿಳಿಯುಬೇಕು. ಅಂದರೆ ಋತುವಾದ ನಕ್ಷತ್ರವು ಸೂರ್ಯನಿರುವ ನಕ್ಷತ್ರಕ್ಕೆ ೧-೨-೪-೮-೯-೧೧-೧೫-೧೬-೧೮-೨೨-೨೩-೨೫ನೇದಾಗಿ ಇದ್ದರೆ ಶುಭ ಫಲವು, -೩-೫-೬-೭-೧೦-೧೨-೧೩-೧೪-೧೭-೧೯-೨೦-೨೧-೨೪-೨೬-೨೭-೨೮ನೇದಾಗಿ ಇದ್ದರೆ ಅಶುಭಫಲವೆಂದು ತಿಳಿಯುವದು, ಈ ದಿಕ್ಚಕ್ರದಲ್ಲಿ ಅಭಿಜಿತ್ತು ನಕ್ಷತ್ರವನ್ನು ಶೇರಿಸಿ ಕೊಂಡು ಅಶ್ವಿನಿ ಮೊದಲು ೨೮ ನಕ್ಷತ್ರಗಳನ್ನು ಗಣಿಸಬೇಕೆಂದು ತಾತ್ಪರ್ಯವು.

ರಜಸ್ವಲಾಶುದ್ಧಿಃ.

ಶ್ಲೋ॥ ಪ್ರಥಮೇಹನಿಚಂಡಾಲೀದ್ವಿತೀಯೇಪತಿತಾಸ್ಮೃತಾ। ತೃತೀಯೇ ರಜಕೀಪ್ರೋಕ್ತಾಚತುರ್ಥೇಶೂದ್ರಿಕಾಭವೇತ್ ॥

ಟೀ॥ ಮುಟ್ಟಾದವಳು ಪ್ರಥಮ ದಿನದಲ್ಲಿ ಚಂಡಾಲ ಸ್ತ್ರೀಯಂತೆ ಅಶುದ್ಧಳು, ೨ನೇ ದಿನದಲ್ಲಿ ಕುತಿಕೆಯು, ೩ನೇ ದಿನದಲ್ಲಿ ಅಗಸಗಿತ್ತಿಯಂತೆ, ೪ನೇ ದಿನದಲ್ಲಿ ಶೂದ್ರಿಯಂತೆ ಆಗುತ್ತಾಳೆ.

ಶ್ಲೋ॥ ಪಂಚಮೇಹನಿಶುದ್ಧಾಸ್ಯಾದ್ಧವ್ಯಕವ್ಯಾದಿಕರ್ಮಸು। ಚತು
ರ್ಥೇಹನಿಭರ್ತುಃಸ್ಯಾಚ್ಛುದ್ಧಾಸಂಭೋಗಕರ್ಮಣೀ ॥

ಟೀ॥ ೫ನೇ ದಿನದಲ್ಲಿ ದೇವಕರ್ಮ ಪಿತೃಕರ್ಮಗಳಿಗೆ ಪರಿಶುದ್ಧೆಯಾಗಿ ಯೋಗ್ಯೆಯಾಗುತ್ತಾಳೆ. ೪ನೇ ದಿನದಲ್ಲಿ ಗಂಡನ ಸಂಭೋಗಕ್ಕೆ ಮಾತ್ರ ಯೋಗ್ಯಳಾಗುತ್ತಾಳೆ.

ನಾರದೀಯೇ.

ಶ್ಲೋ॥ ರಜಸ್ವಲಾಯಾದಿಸ್ನಾತಾಪುನರೇವರಜಸ್ವಲಾ । ಅಷ್ಟಾದಶ
ದಿನಾದರ್ವಾಗಶುಚಿತ್ವಂನವಿದ್ಯತೇ ॥

ಟೀ॥ ಋತುವಾದ ಹೆಂಗಸು ಸ್ನಾನವಾದ ತರುವಾಯು ೧೮ ದಿನಗಳೊಳಗೆ ಪುನಃ ಮುಟ್ಟಾದರೆ, ಅವಳು ಸ್ನಾನಮಾತ್ರದಿಂದಲೇ ಪರಿಶುದ್ಧೆಯಾಗುತ್ತಾಳೆ.

ಶ್ಲೋ॥ ಏಕೋನವಿಂಶತೇರರ್ವಾಗೇಕಾಹಂಸ್ಯಾತ್ತದೂರ್ಧ್ವತಃ ।ವಿಂಶ
ತ್ಯುತ್ತರಕಾಲೇತುತ್ರಿರಾತ್ರಂತುಶುಚಿರ್ಭವೇತ್ ॥

ಟೀ॥ ೧೯ ದಿನದೊಳಗೆ ಮುಟ್ಟಾದರೆ ಒಂದೇ ದಿನ ಅಶುಚಿತ್ವವು, ೨೦ ದಿನಕ್ಕೆ ಮೇಲೆ ಮುಟ್ಟಾದರೆ ತ್ರಿರಾತ್ರಿಯು ಶುಚಿಯಾಗಿರಬೇಕು.

ಶ್ಲೋ॥ ಸೀಮಂತಲಗ್ನಾದೇಕೋಪಿಕ್ರೂರಃಪಂಚಾಷ್ಟರಿಪ್ಫಗಃ।ಯ
ದಿಸೀಮಂತಿನೀಂಹನ್ಯಾತ್ತದ್ಗರ್ಭಂವಾಸಸಂಶಯಃ॥

ಟೀ॥ ಸೀಮಂತಲಗ್ನಕ್ಕೆ ೫–೮=೧೨ನೇ ರಾಶಿಗಳಲ್ಲಿ ಒಬ್ಬ ಪಾಪಗ್ರಹವಾದರೂ ಇದ್ದರೆ ಅವನು ಆ ಗರ್ಭಿಣಿಯನ್ನಾದರೂ ಹೊಟ್ಟೆಯಲ್ಲಿರುವ ಶಿಶುವನ್ನಾದರೂ ಸಂದೇಹವಿಲ್ಲದೆ ಕೊಲ್ಲುವನು.

ಇಪ್ಪತ್ತೊಂದು ಮಹಾದೋಷನಿರ್ಣಯವು.

ಶ್ಲೋ॥ಅನ್ಯಃಪಂಚಾಂಗಶುದ್ಧಿಸ್ಸ್ಯಾದ್ವಿತೀಯಸ್ಸೂರ್ಯಸಂಕ್ರಮಃ।
ತೃತೀಯಃಕರ್ತರೀದೋಷಶ್ಚಂದ್ರಷಷ್ಠಾಷ್ಟರಿಫಗಃ। ಉದಯೋ
ಸ್ತಾಂಶಯೋಶ್ಶುದ್ಧಿರಹಿತೋದುರ್ಮುಹೂರ್ತಜಃ।ಗಂಡಾಂತಂಪಾ
ಪಷಡ್ವರ್ಗಂಭೃಗುಷಟ್ಕಂಕುಜಾಷ್ಟಮಂ। ದಂಪತ್ಯೋರಷ್ಟಮಂ
ಲಗ್ನಂರಾಶಿರ್ವಿಷಘಟೀಭವೇತ್ । ಕುನವಾಂಶೋವಾರದೋಷಃಖಾ
ರ್ಜೂರಿಕಸಮಾಂಘ್ರಿಭಂ । ಗ್ರಹಣೋತ್ಪಾತಭಂಕ್ರೂರವಿದ್ಧರ್ಕ್ಷ
ಕ್ರೂರಸಂಯುತಂ। ಅಕಾಲಗರ್ಜಿತಂವೃಷ್ಟಿರ್ಮಹಾಪಾತಸ್ಸವೈ
ಧೃತಿಃ। ಮಹಾದೋಷಾಇಮೇಚೈಷಾಂಫಲವಕ್ಷ್ಯೇಪೃಥಕ್ಪೃಥಕ್॥

ಟೀ॥ ೧ನೇದು ಪಂಚಾಂಗ ಶುದ್ಧಿಯಿಲ್ಲದ್ದು, ೨ನೇದು ಸಂಕ್ರಾಂತಿ, ೩ನೇದು ಕರ್ತರೀ ದೋಷವು, ೪ನೇದು ೬–೮–೧೦ ಸ್ಥಾನಗಳಲ್ಲಿ ಚಂದ್ರನ ಇರುವಿಕೆಯು. ೫ನೇದು ಉದಯಾಸ್ತಾಂಶ ಶುದ್ಧಿ ಇಲ್ಲದ್ದು ೬ನೇ ದುರ್ಮುಹೂರ್ತವು. ೭ನೇದು ಗಂಡಾಂತವು, ೮ನೇದು ಗಂಡಾಂತವು, ೯ನೇದು ಪಾಪಷಡ್ವರ್ಗವು, ೧೦ನೇದು ಭೃಗುಷಟ್ಕವು, ೧೧ನೇದು ಕುಜಾಷ್ಟಮವು, ೧೨ನೇದು ದಂಪತಿಗಳ ಲಗ್ನಕ್ಕೆ ಅಷ್ಟಮಲಗ್ನವು, ೧೩ನೇದು ಲಗ್ನಕ್ಕೆ ವಿಷಘಟಿಕಾ ಸಂಬಂಧವು, ೧೪ನೇದು ವಾರದೋಷವು, ೧೫ನೇದು ಖಾರ್ಜೂರ ಚಕ್ರದಲ್ಲಿ ಸಮವಾದ ನಕ್ಷತ್ರವು, ೧೬ನೇದು ಗ್ರಹಣೋತ್ಪಾತ ನಕ್ಷತ್ರವು, ೧೮ನೇದು ಕ್ರೂರಗ್ರಹ ಯುಕ್ತನಕ್ಷತ್ರವು, ೧೯ನೇದು ಅಕಾಲ ಗರ್ಜಿತವೃಷ್ಟಿಗಳು, ೨೦ನೇದು ಮಹಾಪಾತದೋಷವು, ೨೧ನೇದು ವೈಧೃತಿ ದೋಷವು, ಇಂತಾ ಇಪ್ಪತ್ತೊಂದು ಮಹಾದೋಷಗಳ ಫಲಗಳನ್ನು ಪ್ರತ್ಯೇಕ ಪ್ರತ್ಯೇಕ ಹೇಳುತ್ತೇನೆಂದು ಗ್ರಂಥಕರ್ತನ ವಾಕ್ಯವು.

ಪಂಚಾಂಗ ಶುದ್ಧಿ ದೋಷ ಸ್ವರೂಪವು.

ಶ್ಲೋ॥ತಿಥಿರ್ವಾರಂಚನಕ್ಷತ್ರಂಯೋಗಂಚಕರಣಂತಥಾ। ಏತತ್ಪಂ

ಚಶುಭಂಚೈವಪಂಚಾಂಗಂಶುದ್ಧಮುದ್ಭವೇತ್ । ಯಸ್ಮಿನ್ಪಂಚಾಂ ಗಜೋದೋಷಸಲಗ್ನಂಪರಿವರ್ಜ್ಯತೇ ॥

ಟೀ। ತಿಥಿ, ವಾರ, ನಕ್ಷತ್ರ, ಯೋಗ, ಕರಣ ಇವುಗಳು ಶುಭವಾಗಿ ದ್ದರೆಪಂಚಾಂಗಶುದ್ಧಿ, ಯಾವಲಗ್ನಕ್ಕೆ ಅದು ನೆಟ್ಟಗಿಲ್ಲವೋ ಆ ಲಗ್ನ ವನ್ನು ಬಿಡತಕ್ಕದ್ದು.

ಶ್ಲೋ॥ ಅವಮಾತ್ರಿದ್ಯುಸ್ಪೃಕೆವೇಧಕ್ರಾಂತೀ ವೈಧೃಸ್ತಥೈವಚ ।
ಏತೇಪಂಚವಿಧಾದೋಷಾಃಪಂಚಾಂಗದಶದೋಷಜಾಃ ॥

ಟೀ॥ ಅವಮಾ, ತ್ರಿದ್ಯುಸ್ಪೃಕ್ ವೇಧೆಗಳು, ಕ್ರಾಂತಗಳು, ಹಾಗೆ ವೈಧೃ ಈ ದೋಷಗಳು ಐದು, ಪೂರ್ವಶ್ಲೋಕದಲ್ಲಿ ಹೇಳಲ್ಪಟ್ಟ ತಿಥಿ ವಾರಾದಿ ದೋಷಗಳು ೫, ಇವು ಸೇರಿ ಈ ೧೦ ದೋಷಗಳು ಪಂಚಾಂಗ ದೋಷಗಳೆನ್ನಿಸಿಕೊಳ್ಳುತ್ತವೆ.

ಸೂರ್ಯನ ಸಂಕ್ರಾಂತಿ ದೋಷವು.

ಶ್ಲೋ॥ ತ್ಯಾಜ್ಯಾಸೂರ್ಯಸ್ಯಸಂಕ್ರಾಂತೇಃಪೂರ್ವತಃಪರತಸ್ಸದಾ।
ವಿವಾಹಾದಿಷುಕಾರ್ಯೇಷುಯೋತೇಷುನಾಡ್ಯಷೋಡಶ ॥

ಟೀ॥ ವಿವಾಹಾದಿ ಶುಭಕಾರ್ಯಗಳಲ್ಲಿ ಸೂರ್ಯನಸಂಕ್ರಾಂತಿಗೆ ಮುಂ ದು ೧೬ ಘಳಿಗೆಗಳೂ ಹಿಂದೆ ೧೬ ಘಳಿಗೆಗಳೂ ಬಿಡತಕ್ಕವು.

ಕರ್ತರೀ ದೋಷಃ.

ಶ್ಲೋ॥ಲಗ್ನಾಂತಮುಖಯೋಃಪಾಪವಕ್ರಯೋಶ್ಶುಭಯೋನಯೋಃ।
ಸಾಕರ್ತರೀತಿವಿಜ್ಞೇಯಾದಂಪತ್ಯೋರ್ಗಳಕರ್ತರೀ॥

ಟೀ॥ ವಿವಾಹಲಗ್ನಕ್ಕೆ ೨=೧೨ ಈ ಸ್ಥಾನಗಳಲ್ಲಿ ವಕ್ರಗಳಾದ ಪಾಪ ಗ್ರಹಗಳಿದ್ದರೆ ಅವರನ್ನು ಶುಭ ಗ್ರಹಗಳು ನೋಡಿದರೂ ಪ್ರಯೋಜ ನವಿಲ್ಲ. ಅಂಥಾ ದೋಷವು ವಧೂವರರಿಗೆ ಹಾನಿಕರವು, ಗಂಡ ಕತ್ತರಿ ಯಾಗುತ್ತದೆ.

ಶ್ಲೋ॥ ಕರ್ತರೀದೋಷದುಷ್ಟಂಯಲ್ಲಗ್ನಂತತ್ಪರಿವರ್ಜಯೇತ್ ।
ಯದಿಸೌಮ್ಯಗ್ರಹೈರ್ಯುಕ್ತಂಗುಣೈಸ್ಸರ್ವೈಸ್ಸಮನ್ವಿತಂ ॥

ಟೀ। ವಿವಾಹಾದಿ ಲಗ್ನಗಳಲ್ಲಿ ಶುಭಗ್ರಹಗಳಿದ್ದರೂ ಇತರ ಸುಗುಣ ಗಳಿದ್ದರೂ ಅದು ಕರ್ತರೀದೋಷ ದುಷ್ಟವಾದರೆ ಅದನ್ನು ಸರ್ವಥಾ ಬಿಡತಕ್ಕದ್ದು.

ಷಷ್ಠಾಷ್ಟರಿಪ್ಪಗತಚಂದ್ರದೋಷಃ.

ಶ್ಲೋ॥ ಷಡಷ್ಟರಿಪ್ಪಗೇಚಂದ್ರೇಲಗ್ನೇದೋಷಸ್ಸ್ಯಾತ್ಸಂಜ್ಞಿತಃ । ತ್ಯಜ

ಸ್ಥಾಂಪರ್ಜಯೆದ್ಧ್ಯತ್ನಾ ಜೀವಶುಕ್ರಸಮನ್ವಿತಂ ॥

ಟೀ॥ ಯಾವಲಗ್ನಕ್ಕೆ ಚಂದ್ರನು ೬-೮-೧೨ ಈ ಸ್ಥಾನಗಳಲ್ಲಿರು ತ್ತಾನೋ ಅದು ಲಗ್ನದೋಷವನ್ನಿಸಿಕೊಳ್ಳುತ್ತದೆ. ಅಂಥಾ ದೋಷ ವುಳ್ಳ ಲಗ್ನವು ಗುರು ಶುಕ್ರ ಯುಕ್ತವಾಗಿ ಇದ್ದರೂ ಅದನ್ನು ಅವಶ್ಯ ಬಿಡತಕ್ಕದ್ದು.

ಸಗ್ರಹಚಂದ್ರದೋಷವು.

ಶ್ಲೋ॥ ಶಶಾಂಕೇಗ್ರಹಸಂಯುಕ್ತೇದೋಷಸ್ಸಗ್ರಹಸಂಜ್ಞಿತಃ । ತ ಸ್ಮಿಂತ್ಸಗ್ರಹದೋಷೇತುವಿವಾಹಂನೈವಕಾರಯೇತ್ ॥

ಟೀ॥ ಚಂದ್ರನು ಶುಭಗ್ರಹಗಳಾಗಲಿ ಪಾಪಗ್ರಹಗಳಾಗಲಿ ಯಾವ ಗ್ರಹದೊಂದಿಗಾದರೂ ಕೂಡಿಯಿದ್ದರೆ ಅದು ಸಗ್ರಹಚಂದ್ರದೋಷವೆಂ ಬುವದು, ಆದೋಷದಲ್ಲಿ ವಿವಾಹವನ್ನು ಮಾಡಕೂಡದು.

ಉದಯಾಸ್ತಶುದ್ಧಿಃ.

ಶ್ಲೋ॥ ಲಗ್ನಲಗ್ನಾಂಶಕೌಸ್ವಸ್ವಪತಿನಾವೀಕ್ಷಿತೌಯುತೌ। ನಚೇ ದನ್ಯೋನ್ಯಪತಿನಾಶುಭಮಿತ್ರೈಃವಾತಥಾ ॥ ಮೃತ್ಯುಯುಕ್ತೌತಥಾ ಮೃತ್ಯುಸ್ತಾಭ್ಯಾಂಸಪ್ತೋದಯಾಂಶಕಾ। ಏವಂಯುತೌಮೃತ್ಯು ಕರೌಕ್ರೂರಗ್ರಹಯುತೌಯಥ ॥

ಟೀ॥ ಲಗ್ನವು ಲಗ್ನಾಧಿಪತಿಯಿಂದಲೂ, ಅದರ ನವಾಂಶವು ಅದರ ಅಧಿಪತಿಯಿಂದಲೂ ಸೇರಲ್ಪಟ್ಟದ್ದಾದರೂ ನೋಡಲ್ಪಟ್ಟಾದರೂ ಇರಬೇ ಕು. ಅಥವಾ ನವಾಂಶಾಧಿಪತಿಯಿಂದ ಲಗ್ನವು, ಲಗ್ನಾಧಿಪತಿಯಿಂದ ನವಾಂಶವೂ ಹಾಗೆ ಇರಬೇಕು. ಅಥವಾ ಅವುಗಳು ಮಿತ್ರಗ್ರಹಗ ಳಿಂದಲಾಗಲಿ ಶುಭಗ್ರಹಗಳಿಂದಲಾಗಲಿ ನೋಡಲ್ಪಟ್ಟಿರಬೇಕು. ಹಾ ಗಿಲ್ಲದಿದ್ದರೆ ಮೃತ್ಯುಕರವು, ಹೀಗೆ ಲಗ್ನಕ್ಕೆ ಸಪ್ತಮರಾಶಿ ಅದರನವಾಂ ಶವು ಸಹ ಕೆಳಗೆ ಹೇಳಿದಂತೆ ಶುಭಮಿತ್ರ ಗ್ರಹ ಯುಕ್ತಗಳಾಗಿದ್ದರೆ ಕ್ರೂರಗ್ರಹ ಯುಕ್ತಗಳಂತೆ ಮೃತ್ಯುಕರಗಳಾಗುತ್ತವೆ, ಅಂದರೆ ವಿ ವಾಹ ಲಗ್ನಾಧಿಪತಿ ಬಲವಂತನಾಗಿ ಲಗ್ನದಲ್ಲಿ ಇರಬೇಕು, ಹಾಗಿಲ್ಲದಿದ್ದ ರು ಲಗ್ನವನ್ನು ಶುಭಗ್ರಹವಾಗಲಿ ಮಿತ್ರಗ್ರಹವಾಗಲಿ ನೋಡಿಯಾದ ರೂ ಕೂಡಿಯಾದರೂ ಇರಬೇಕು, ಹಾಗೆಯೆ ಸಪ್ತಮಾಧಿಪತಿಯು ಬ ಲವಾದ ಸ್ಥಾನದಲ್ಲಾದರೂ ಉಚ್ಚಮಿತ್ರ ಸ್ವಕ್ಷೇತ್ರಗಳಲ್ಲಾದರೂ ಇರಬೇಕೆಂದು ಭಾವವು.

ದುರ್ಮುಹೂರ್ತವಿಷಯಃ–ದಿವಾಮುಹೂರ್ತಃ.

ಶ್ಲೋ॥ ರುದ್ರಾಹಿಮಿತ್ರಪಿತರೋವಸುವಾರವಿಶ್ವೇ ವೈದೇಹವಿಧಿಶ್ಶತಮು
ಖಃಪುರುಹೂತವಹ್ನೀ। ನಕ್ತಂಚರಾಖ್ಯವರುಣಾರ್ಯಮಯೋನಯ
ಶ್ಚಪ್ರೋಕ್ತಂದಿನಸ್ಯದಶಪಂಚದಿವಾಮುಹೂರ್ತಂ ॥

ಟೀ॥ ರುದ್ರ, ಅಹಿ, ಮಿತ್ರ, ಪಿತೃ, ವಸು, ವಾರ, ವಿಶ್ವೇದೇವ, ವೇದ, ವಿಧಿ, ಶತಮುಖ, ಪುರುಹೂತ, ವಹ್ನಿಃ, ನಕ್ತಂಚರ, ವರುಣ, ಆರ್ಯಮ ಈ ೧೫ ದಿನದ ಹಗಲಿನಲ್ಲಿ ಮುಹೂರ್ತಗಳು.

ರಾತ್ರಿಮುಹೂರ್ತಗಳು.

ಶ್ಲೋ॥ ನಿಶಾಮುಹೂರ್ತಾಗಿರಿಶಾಜಪಾದಾಹಿರ್ಬುಧ್ನ್ಯಪೂಷಾಶ್ವಿ
ಯಮಾಗ್ನಯಶ್ಚ। ವಿಧಾತೃಚಂದ್ರಾದಿತಿಜೀವವಿಷ್ಣುತಿಗ್ಮದ್ಯು
ತಿತ್ವಷ್ಟೃಸಮೀರಣಾಶ್ಚ ॥

ಟೀ॥ ಗಿರಿಶ, ಅಜಪಾದ, ಅಹಿರ್ಬುಧ್ನ್ಯ, ಪೂಷಾ, ಅಶ್ವಿ, ಯಮ, ಅಗ್ನಿ, ವಿಧಾತೃ, ಚಂದ್ರ, ಅದಿತಿ, ಜೀವವಿಷ್ಣು, ತಿಗ್ಮ, ದ್ಯುತಿ, ತ್ವಷ್ಟೃ, ಸಮೀರಣ, ಈ ೧೫ ರಾತ್ರಿ ಮುಹೂರ್ತಗಳು. ಅಂದರೆ, ೨ ಘಳಿಗೆಗೆ ಒಂದು ಮುಹೂರ್ತದಂತೆ ಲೆಖ್ಖಮಾಡಿ ಹಗಲಲ್ಲಿ ೩೦ ಘಳಿಗೆಗೆ ೧೫ ಮುಹೂರ್ತಗಳು ರಾತ್ರಿಯಲ್ಲಿಯೂ ಹಾಗೆ ಎಣಿಸಿ ಹಗಲಿನ ೧೫ ಮುಹೂರ್ತಗಳಲ್ಲಿ ಭಗ, ಐಂದ್ರ, ಅಗ್ನಿ, ಅಹಿ, ನೈರೃತ್ಯ, ರೌದ್ರಪಿತ ಈ ಮುಹೂರ್ತಗಳು ಅಶುಭಗಳು. ಮಿಕ್ಕವು ಶುಭಗಳು, ರಾತ್ರಿ ಮುಹೂರ್ತಗಳು ೧೫ರಲ್ಲಿ ರೌದ್ರ, ಅಜಾಂಘ್ರಿ ಯಮ, ಅಗ್ನಿ, ಈ ೪ ಮುಹೂರ್ತಗಳು, ಮಿಕ್ಕ ೧೧ ಶುಭಕರಗಳು.

ವಾರಜನಿತ ದುರ್ಮುಹೂರ್ತಾಃ.

ಶ್ಲೋ॥ ಅರ್ಯಮ್ಣೋರ್ಕೇತುಹಿನಕಿರಣೇರಾಕ್ಷಸಬ್ರಹ್ಮಸಂಜ್ಞೌಪಿತ್ರಾ
ಗ್ನೇಯಾಕ್ಷಿತಿಸುತದಿನೇಚಂದ್ರಪುತ್ರೇಭಿಜಿಚ್ಚ। ಪೈತ್ರಬ್ರಾಹ್ಮೌಭೃ
ಗುಸುತದಿನೇರಾಕ್ಷಸಾಪ್ಯಾಚಜೀವೇ। ಭೌಜಂಗೇಶೌಸವಿತೃಜದಿನೇವ
ರ್ಜ್ಯಃಯಾಮುಹೂರ್ತಾಃ ॥

ಟೀ॥ ಭಾನುವಾರದಲ್ಲಿ ಅರ್ಯಮಯೆಂಬ ಮುಹೂರ್ತವನ್ನು ಸೋಮವಾರದಲ್ಲಿ ರಾಕ್ಷಸ, ಬ್ರಹ್ಮ ಇವುಗಳನ್ನು ಕುಜವಾರದಲ್ಲಿ ಪಿತೃ, ಅಗ್ನಿ, ಇವುಗಳನ್ನು ಬುಧವಾರದಲ್ಲಿ ಅಭಿಜನ್ಮುಹೂರ್ತವನ್ನು ಗುರುವಾರದಲ್ಲಿ ರಾಕ್ಷಸಜಲ ಮುಹೂರ್ತಗಳನ್ನು, ಶುಕ್ರವಾರದಲ್ಲಿ ಪಿತೃ, ಬ್ರಹ್ಮ ಮುಹೂರ್ತಗಳನ್ನು ಶನಿವಾರದಲ್ಲಿ ಸರ್ಪ, ಈಶಾನ ಮುಹೂರ್ತ

ಗಳು ಇಂತಾ ದುರ್ಮುಹೂರ್ತಗಳನ್ನು ಬಿಟ್ಟು ವಿವಾಹಾದಿ ಶುಭಕಾರ್ಯ ಗಳನ್ನು ಮಾಡತಕ್ಕದ್ದು.

ಶ್ಲೋ॥ ಅಹಸ್ಕರಾದಿವಾರೇಷುಯೇಮುಹೂರ್ತಾಸ್ತುನಿಂದಿತಾಃ। ವಿವಾಹಾದಿಷುತೇವರ್ಜ್ಯಾಅಪಿಲಕ್ಷಗುಣೈರ್ಯುತಾಃ ॥

ಟೀ॥ ಸೂರ್ಯಾದಿ ವಾರಗಳಲ್ಲಿ ಯಾವ ದುರ್ಮುಹೂರ್ತಗಳು ಹೇಳಲ್ಪಟ್ಟವೆಯೋ ಅವುಗಳನ್ನು ವಿವಾಹಾದಿ ಶುಭಗಳಲ್ಲಿ ಅವಶ್ಯ ಬಿಡತಕ್ಕದ್ದು. ಅವುಗಳಿಗೆ ಬೇರೆ ಅನೇಕ ಗುಣಗಳಿದ್ದರೂ ಅವುಗಳು ತ್ಯಾಜ್ಯಗಳೆಂದು ಭಾವವು.

ಗಂಡಾಂತದೋಷಗಳು—ತಿಥಿಗಂಡವು.

ಶ್ಲೋ॥ ಪೂರ್ಣಾನಂದಾಖ್ಯಯೋಸ್ತಿಥ್ಯೋಸ್ಸಂಧೌನಾಡೀಚತುಷ್ಟಯಂ । ಗಂಡಾಂತಂಮೃತ್ಯುದಂಜನ್ಮಯಾತ್ರೋದ್ವಾಹವ್ರತಾದಿಷು ॥

ಟೀ॥ ನಂದಾತಿಥಿ ಪೂರ್ಣಾತಿಥಿ, ಅವುಗಳ ಸಂಧಿಯಲ್ಲಿ ೪ ಘಳಿಗೆಗಳು ಗಂಡಾಂತಗಳು, ಇವುಗಳಲ್ಲಿ ಯಾತ್ರೆ ಮದುವೆ ಮುಂತಾದ ಶುಭಕಾರ್ಯಗಳನ್ನು ಮಾಡಕೂಡದು, ಅಂದರೆ ಪಂಚಮಿಯು ಅಂತ್ಯದಲ್ಲಿ ೨ ಘಳಿಗೆ ಷಷ್ಠಿಯು ಆದಿಯಲ್ಲಿ ೨ ಘಳಿಗೆಗಳು ಅಂತು ೪ ಘಳಿಗೆ ಬಿಡತಕ್ಕದ್ದು. ಹೀಗೆಯೇ ದಶಮೀ ಏಕಾದಶಿಗೂ ನೋಡತಕ್ಕದ್ದು.

ಲಗ್ನಗಂಡವು.

ಶ್ಲೋ॥ ಕುಳೀರಸಿಂಹಯೋಃ ಕೀಟಚಾಪಯೋರ್ಮೀನಮೇಷಯೋಃ।ಗಂಡಾಂತಮಂತರಾಳಂಸ್ಯಾದ್ಘಟಿಕಾರ್ಧಂಮೃತಿಪ್ರದಂ ॥

ಟೀ॥ ಕಟಕ, ಸಿಂಹ, ವೃಶ್ಚಿಕ, ಧನಸ್ಸು, ಮೀನ, ಮೇಷ ಈ ಎರಡೆರಡು ರಾಶಿಗಳ ಅಂತರಾಳದಲ್ಲಿ ಅರ್ಧಘಳಿಗೆ ಗಂಡಾಂತವು. ಅಂದರೆ ಕಟಕರಾಶಿಯಲ್ಲಿ ಕಾಲುಗಳಿಗೆಯೂ, ಸಿಂಹದ ಆದಿಯಲ್ಲಿ ಕಾಲುಗಳಿಗೆ, ಅಂತು ಅರ್ಧಗಳಿಗೆ ಗಂಡಾಂತವಾದದರಿಂದ ವಿವಾಹಾದಿ ಶುಭಕಾರ್ಯಗಳಲ್ಲಿ ಅವಶ್ಯ ಬಿಡತಕ್ಕದ್ದು, ಹೀಗೆಯೇ ವೃಶ್ಚಿಕ ಧನುಸ್ಸುಗಳಿಗೂ ಮೀನಮೇಷಗಳಿಗೂ ಗಂಡಾಂತವನ್ನು ತಿಳಿಯತಕ್ಕದ್ದು.

ನಕ್ಷತ್ರಗಂಡಗಳು.

ಶ್ಲೋ॥ ಸಾರ್ಪೇಂದ್ರಪೌಷ್ಣಭಸ್ಯಾಂತ್ಯಷೋಡಶಾಂಶಾಭಸಂಧಯಃ। ತದಗ್ರಭೇಷ್ವಾದ್ಯಪಾದೇಪಾದಗಂಡಾಂತಸಂಜ್ಞಿಕಾಃ ॥

ಟೀ॥ ಆಶ್ಲೇಷಾ ನಕ್ಷತ್ರದ ೪ನೇ ಪಾದದಲ್ಲಿ ೪ ಘಳಿಗೆ. ಮಖಾ ನಕ್ಷ

ಗಳು ಇಂತಾ ದುರ್ಮುಹೂರ್ತಗಳನ್ನು ಬಿಟ್ಟು ವಿವಾಹಾದಿ ಶುಭಕಾರ್ಯ
ಗಳನ್ನು ಮಾಡತಕ್ಕದ್ದು.

ಶ್ಲೋ॥ ಅಹಸ್ಕರಾದಿವಾರೇಷುಯೇಮುಹೂರ್ತಾಸ್ತುನಿಂದಿತಾಃ। ವಿ
ವಾಹಾದಿಷುತೇವರ್ಜ್ಯಾಅಪಿಲಕ್ಷಗುಣೈರ್ಯುತಾಃ ॥

ಟೀ॥ ಸೂರ್ಯಾದಿ ವಾರಗಳಲ್ಲಿ ಯಾವ ದುರ್ಮುಹೂರ್ತಗಳು ಹೇಳಲ್ಪ
ಟ್ಟವೆಯೋ ಅವುಗಳನ್ನು ವಿವಾಹಾದಿ ಶುಭಗಳಲ್ಲಿ ಅವಶ್ಯ ಬಿಡತಕ್ಕ
ದ್ದು. ಅವುಗಳಿಗೆ ಬೇರೆ ಅನೇಕ ಗುಣಗಳಿದ್ದರೂ ಅವುಗಳು ತ್ಯಾಜ್ಯ
ಗಳೆಂದು ಭಾವವು.

ಗಂಡಾಂತದೋಷಗಳು—ತಿಥಿಗಂಡವು.

ಶ್ಲೋ॥ ಪೂರ್ಣಾನಂದಾಖ್ಯಯೋಸ್ತಿಥ್ಯೋಸ್ಸಂಧೌನಾಡೀಚತು
ಷ್ಟಯಂ । ಗಂಡಾಂತಂಮೃತ್ಯುದಂಜನ್ಮಯಾತ್ರೋದ್ವಾಹವ್ರ
ತಾದಿಷು ॥

ಟೀ॥ ನಂದಾತಿಥಿ ಪೂರ್ಣಾತಿಥಿ, ಇವುಗಳ ಸಂಧಿಯಲ್ಲಿ ೪ ಘಳಿಗೆಗ
ಳು ಗಂಡಾಂತಗಳು, ಇವುಗಳಲ್ಲಿ ಯಾತ್ರೆ ಮದುವೆ ಮುಂತಾದ ಶು
ಭಕಾರ್ಯಗಳನ್ನು ಮಾಡಕೂಡದು, ಅಂದರೆ ಪಂಚಮಿಯಅಂತದಲ್ಲಿ ೨
ಘಳಿಗೆ, ಷಷ್ಠಿಯ ಆದಿಯಲ್ಲಿ ೨ ಘಳಿಗೆಗಳು ಅಂತು ೪ ಘಳಿಗೆ ಬಿಡತಕ್ಕ
ದ್ದು. ಹೀಗೆಯೇ ದಶಮೀ ಏಕಾದಶಿಗೂ ನೋಡತಕ್ಕದ್ದು.

ಲಗ್ನಗಂಡವು.

ಶ್ಲೋ॥ ಕುಳೀರಸಿಂಹಯೋಃಕೀಟಚಾಪಯೋರ್ಮೀನಮೇಷಯೋಃ।ಗಂ
ಡಾಂತಮಂತರಾಳಂಸ್ಯಾದ್ಘಟಿಕಾರ್ಧಂಮೃತಿಪ್ರದಂ ॥

ಟೀ॥ ಕಟಕ, ಸಿಹ್ಮ, ವೃಶ್ಚಿಕ, ಧನಸ್ಸು, ಮೀನ, ಮೇಷ ಈ ಎರ
ಡೆರಡು ರಾಶಿಗಳ ಅಂತರಾಳದಲ್ಲಿ ಅರ್ಧಗಳಿಗೆ ಗಂಡಾಂತವು. ಅಂದರೆ
ಕಟಕರಾಶಿಯಲ್ಲಿ ಕಾಲುಗಳಿಗೆಯೂ, ಸಿಹ್ಮದ ಆದಿಯಲ್ಲಿ ಕಾಲುಗಳಿಗೆ,
ಅಂತು ಅರ್ಧಗಳಿಗೆ ಗಂಡಾಂತವಾದ್ದರಿಂದ ವಿವಾಹಾದಿ ಶುಭಕಾರ್ಯಗ
ಳಲ್ಲಿ ಅವಶ್ಯ ಬಿಡತಕ್ಕದ್ದು, ಹೀಗೆಯೇ ವೃಶ್ಚಿಕ ಧನುಸ್ಸುಗಳಿಗೂಮೀ
ನಮೇಷಗಳಿಗೂ ಗಂಡಾಂತವನ್ನು ತಿಳಿಯತಕ್ಕದ್ದು.

ನಕ್ಷತ್ರಗಂಡಗಳು.

ಶ್ಲೋ॥ ಸಾರ್ಪೇಂದ್ರಪೌಷ್ಣಭಸ್ಯಾಂತ್ಯೇಷೋಡಶಾಂಶಾಭಸಂಧಯಃ।
ತದಗ್ರಭೇಷ್ವಾದ್ಯಪಾದೇಪಾದಗಂಡಾಂತಸಂಜ್ಞಕಾಃ ॥

ಟೀ॥ ಆಶ್ಲೇಷಾ ನಕ್ಷತ್ರದ ೪ನೇ ಪಾದದಲ್ಲಿ ೪ ಘಳಿಗೆ. ಮಖಾ ನಕ್ಷ

ತ್ರದ ಮೊದಲು ಪಾದದಲ್ಲಿ ನಾಲ್ಕು ಘಳಿಗೆಗಳು, ಹೀಗೆ ಜ್ಯೇಷ್ಠಾ ನಕ್ಷತ್ರ ಮೂಲ ನಕ್ಷತ್ರ ಇವುಗಳ ಅಂತ್ಯ ಆದಿಗಳಲ್ಲಿ ನಾಲ್ಕು ನಾಲ್ಕು ಘಳಿಗೆಗಳೂ. ಹಾಗೆ ರೇವತೀ ಅಶ್ವಿನೀ ನಕ್ಷತ್ರಗಳ ಅಂತ್ಯ ಆದಿಗಳಲ್ಲಿಯೂ ಗಂಡಾಂತದೋಷಗಳನ್ನು ತಿಳಿಯತಕ್ಕದ್ದು.

ಭೃಗುಷಟ್ಕವು.

ಶ್ಲೋ॥ ಷಟ್ಕಂವಿಹಾಯದೋಷಂಚಲಗ್ನಾತ್ಷಷ್ಠೇಗತೇಸಿತೇ । ಉಚ್ಚೇ
ಗೇಶುಭಸಂಯುಕ್ತೇಂತಲ್ಲಗ್ನಂಸರ್ವದಾತ್ಯಜೇತ್ ॥

ಟೀ॥ ಶುಕ್ರನು ವಿವಾಹದ ಲಗ್ನಕ್ಕೆ ೬ನೇ ರಾಶಿಯಲ್ಲಿದ್ದರೆ ಭೃಗುಷಟ್ಕವೆಂಬ ದೋಷ ಉಂಟಾಗುತ್ತದೆ, ಇದು ಪ್ರಬಲ ದೋಷವು. ಇದನ್ನು ಅವಶ್ಯ ಬಿಡತಕ್ಕದ್ದು. ಒಂದು ವೇಳೆ ಅಂತಾ ರಾಶಿಯು ಶುಕ್ರನಿಗೆ ಉಚ್ಚಸ್ಥಾನವಾಗಿದ್ದರೂ ಅವನು ಶುಭಗ್ರಹಗಳೊಂದಿಗೆ ಕೂಡಿ ಇದ್ದರೂ ಪ್ರಯೋಜನವಿಲ್ಲ, ಆ ದೋಷವು ಯಾವಾಗ್ಯೂ ಬಿಡತಕ್ಕದ್ದು.

ಕುಜಾಷ್ಟಮವು.

ಶ್ಲೋ॥ ಕುಜಾಷ್ಟಮೋಮಹಾದೋಷೋಲಗ್ನಾದಷ್ಟಮಗೇಕುಜೇ ।
ಶುಭತ್ರಯಯುತಂಲಗ್ನಂತ್ಯಜೇತ್ತುಂಗಗೇಯದ ॥

ಟೀ॥ ಕುಜನು ವಿವಾಹಲಗ್ನಕ್ಕೆ ೮ನೇ ಸ್ಥಾನದಲ್ಲಿದ್ದರೆ ಕುಜಾಷ್ಟಮವೆಂಬುವ ಮಹಾ ದೋಷ ವುಂಟಾಗುತ್ತದೆಯಾಗಿ ಇದರಲ್ಲಿ ವಿವಾಹವನ್ನು ಮಾಡಬಾರದು. ಒಂದು ವೇಳೆ ಆ ಲಗ್ನಕ್ಕೆ ಬಲವಿದ್ದರೂ ಕುಜನು ಉಚ್ಚನಾಗಿದ್ದರೂ ಪ್ರಯೋಜನವಿಲ್ಲ.

ಶ್ಲೋ॥ ಕುಜೇಷ್ಟಮೇಷಷ್ಠಗತೇಭೃಗೌವಾಷಷ್ಠಾಷ್ಟಮದ್ವಾದಶಗೇಚ
ಚಂದ್ರೇ। ತದ್ದೋಷದಾಶಿಂರವಿಆಯಸಂಸ್ಥೋಲಗ್ನೇಯದಾಕೇಂದ್ರ
ಗತೇಸುರೇಜ್ಯೇ ॥

ಟೀ॥ ವಿವಾಹ ಲಗ್ನಕ್ಕೆ ಭೃಗುಷಟ್ಕ ಕುಜಾಷ್ಟಮ ದ್ವಾದಶಚಂದ್ರ ಎಂಬ ಮೂರು ಪ್ರಬಲ ದೋಷಗಳನ್ನು ಲಗ್ನಕ್ಕೆ ೧೧ನೇ ಸ್ಥಾನದಲ್ಲಿರುವ ಸೂರ್ಯನೂ ಲಗ್ನ ಚತುರ್ಥ ಸಪ್ತಮ ದಶಮಗಳಲ್ಲಿರುವ ಬೃಹಸ್ಪತಿಯೂ ಸಹ ನಾಶಮಾಡುತ್ತಾರೆ.

ಅಷ್ಟಮ ಲಗ್ನ ದೋಷವು.

ಶ್ಲೋ॥ ಉಭಯೋರಷ್ಟಮಂಲಗ್ನಂವಿವಾಹೇಶುಭಕರ್ಮಣಿ। ಯದಿ
ಲಗ್ನಗತಸ್ಸೋಪಿದಂಪತ್ಯೋರ್ಮರಣಂಧ್ರುವಂ ॥

ಟೀ॥ ವಿವಾಹ ವಿಷಯದಲ್ಲಿ ದಂಪತಿಗಳ ಜನ್ಮಲಗ್ನಗಳಿಗೆ ಅಷ್ಟಮ

ಲಗ್ನಗಳು ವಿವಾಹ ಲಗ್ನವಾಗಿರಕೂಡದು. ಅಂತಾ ಅಷ್ಟಮಲಗ್ನಾಧಿಪತಿ ಅದರಲ್ಲೇ ಇದ್ದ ಪಕ್ಷದಲ್ಲಿ ದಂಪತಿಗಳಿಗೆ ಮರಣವುಂಟಾಗುತ್ತದೆ.

ವಿಷನಾಡೀ ದೋಷವು.

ಶ್ಲೋ॥ ಆದ್ಯಂತಯೋಸ್ಸ್ಯುರ್ಘಟಿಕಾಶ್ಚತಸ್ರೋವಿಷನಾಡಿಕಾಃ। ವಿಷನಾಡೀಸಮಾಯುಕ್ತಂತಲ್ಲಗ್ನಂಸರ್ವದಾತ್ಯಜೇತ್ ॥

ಟೀ॥ ವಿಷನಾಡೀಯುಕ್ತವಾದ ಲಗ್ನಕ್ಕೆ ಆದ್ಯಂತಗಳಲ್ಲಿ ನಾಲ್ಕು ವಿಷಗಳಿಗೆಗಳು ಬಿಡತಕ್ಕವು. ಯಾವ ಲಗ್ನವು ವಿಷನಾಡೀ ಸಹಿತವಾಗಿರುತ್ತದೋ ಅದನ್ನು ತ್ಯಜಿಸಬೇಕು.

ವಿಶೇಷವು.

ಶ್ಲೋ॥ ಲಗ್ನಾಸ್ಯಾದೌವಿಷಂತ್ಯಕ್ತ್ವಾಪಶ್ಚಾತ್ಕರ್ಮಾಣಿಕಾರಯೇತ್ । ಲಗ್ನಾಂತ್ಯೇವಿಷಸಂಯುಕ್ತಂತಲ್ಲಗ್ನಂಪರಿವರ್ಜಯೇತ್ ॥

ಟೀ॥ ಲಗ್ನಕ್ಕೆ ಮೊದಲು ವಿಷನಾಡಿಗಳನ್ನು ಬಿಟ್ಟು ತರುವಾಯ ಶುಭಕಾರ್ಯಗಳನ್ನು ಮಾಡತಕ್ಕದ್ದು ಲಗ್ನವೆಲ್ಲಾ ವಿಷನಾಡೀ ಸಹಿತವಾದರೆ ಅದನ್ನೇ ಬಿಡತಕ್ಕದ್ದು.

ಖರ್ಜೂರ ಸಮಾಂಘ್ರಿ ದೋಷಃ.

ಶ್ಲೋ॥ ರೇಖಾಮೂರ್ಧ್ವಗತಾಂತ್ರಯೋದಶತಥಾತಿರ್ಯಗ್ಗತಾಸ್ಸ್ಥಾಪಯೇದ್ರೇಖಾಚಕ್ರಮಿದಂಬುಧೈರಭಿಹಿತಂಖರ್ಜೂರಿಕಂತತ್ರತು । ವ್ಯಾಘಾತಾದಿಷು ಮೂರ್ಧ್ನಿಭಂತುಕಥಿತಂ ತತ್ರೈಕರೇಖಾಸ್ಥಯೋ । ಸೂರ್ಯಾಚಂದ್ರಮಸೋರ್ಮಿಥೋನಿಗದಿತೋದೃಕ್ಪಾತಯುಕ್ತಾರ್ಗಳಃ ॥ ವ್ಯಾಘಾತಶೂಲಪರಿಘಾವ್ಯತಿಪಾತಪೂರ್ವಗಂಡಾತಿಗಂಡಕುಲಿಶೇಷು ಸವೈಧೃತೇಷು॥ಆದಿತ್ಯಚಂದ್ರಪಿತೃಸಾರ್ಪಭದಸ್ರಮೂಲಮೈತ್ರಾಖ್ಯತಿಷ್ಯಸುರವರ್ಧಕಿಭಾನಿಮೂರ್ಧ್ನಿ॥ ಚತುರ್ಥಕಸ್ಯಾದ್ಯಪಾದಮಾದ್ಯಗಸ್ಯಚತುರ್ಥಕಂ । ದ್ವಿತೀಯಗಸ್ಯತೃತೀಯಂಚತೃತೀಯಸ್ಯದ್ವಿತೀಯಕಂ । ಸಮಾಂಘ್ರಿವೇಧಸ್ಸರ್ವತ್ರವಿಜ್ಞೇಯೋಧಿಷ್ಣ್ಯಮಂಡಲೇ ॥

ಟೀ॥ ಊರ್ಧ್ವವಾಗಿ ಒಂದು ರೇಖೆಯನ್ನು ಬರದು ಅದರಲ್ಲಿ ಅಡ್ಡಗಳಾದ ೧೩ ರೇಖೆಗಳನ್ನು ಬರದರೆ ಅದು ಖರ್ಜೂರ ಚಕ್ರವನ್ನಿಸಿಕೊಳ್ಳುತ್ತದೆ. ಇದರಲ್ಲಿ ವ್ಯಾಘಾತ ಮೊದಲಾದ ೯ ಯೋಗಗಳಲ್ಲಿ ಹೇಳಲ್ಪಟ್ಟ ಆಯಾ ನಕ್ಷತ್ರವನ್ನು ಚಕ್ರದ ಶಿರಸ್ಸಿನಲ್ಲಿ ಬರಿಯಬೇಕು, ಆಚಕ್ರದಲ್ಲಿ ಸೂರ್ಯಚಂದ್ರರು ಒಂದು ರೇಖೆಯ ನಕ್ಷತ್ರಗಳಲ್ಲಿದ್ದರೆ ಆ ನ

ಕ್ಷತ್ರಗಳಿಗೆ ಅನ್ಯೋನ್ಯ ದೃಷ್ಟಿಯುಂಟಾಗುತ್ತದೆ ಇದೆ ಯೇಕಾರ್ಗಳವು. ಮತ್ತು ವೈಧೃತಿಯೊಂದಿಗೆ ಸೇರಿದ ವ್ಯಾಘಾತ, ಶೂಲ, ಪರಿಘ, ವ್ಯತೀಪಾತ, ವಿಷ್ಕಂಭ, ಗಂಡಾತಿಗಂಡ ವಜ್ರನಾಮ ಯೋಗಗಳಲ್ಲಿ ಪುನರ್ವಸು, ಮೃಗಶೀರ್ಷ, ಮಖ, ಆಶ್ಲೇಷಾ, ಅಶ್ವಿನೀ, ಮೂಲಾ, ಅನೂರಾಧಾ, ಪುಷ್ಯ, ಚಿತ್ರಾ ನಕ್ಷತ್ರಗಳು ಚಕ್ರದ ಶಿರಸ್ಸಿನಲ್ಲಿ ಕ್ರಮವಾಗಿ ಆಯಾ ಯೋಗಗಳ ನಕ್ಷತ್ರಗಳನ್ನು ಬರಿಯಬೇಕು, ಹೀಗೆ ಬರಿಯಲ್ಪಟ್ಟ ಚಕ್ರದಲ್ಲಿ ಬರಿಯಲ್ಪಟ್ಟ ನಕ್ಷತ್ರ ಮಂಡಲದಲ್ಲಿ ಸೂರ್ಯನು ನಾಲ್ಕನೇ ಪಾದದಲ್ಲಿದ್ದರೆ ಚಂದ್ರನಿರುವ ನಕ್ಷತ್ರದಮೊದಲನೇ ಪಾದವನ್ನು ಕುರಿತು, ಮೊದಲನೇ ಪಾದದಲ್ಲಿದ್ದರೆ ನಾಲ್ಕನೇ ಪಾದವನ್ನು ಕುರಿತು, ೨ನೇ ಪಾದದಲ್ಲಿದ್ದರೆ ೩ನೇ ಪಾದವನ್ನು ಕುರಿತು, ೩ನೇ ಪಾದದಲ್ಲಿದ್ದರೆ ೨ ನೇಪಾದವನ್ನು ಕುರಿತು ಸಮಪಾದ ವೇಧೆಯೆಂದು ತಿಳಿಯಬೇಕು. ಅಂದರೆ ಈ ಖರ್ಜೂರ ಚಕ್ರದಲ್ಲಿ ವ್ಯಾಘಾತಕ್ಕೆ ಪುನರ್ವಸು, ವಿಷ್ಕಂಭಕ್ಕಶ್ವಿನೀ, ಗಂಡಕ್ಕೆ ಮೂಲ, ಅತಿಗಂಡಕ್ಕನೂರಾಧಾ, ವಜ್ರಕ್ಕೆ ಪುಷ್ಯ, ವ್ಯತೀಪಾತಕ್ಕಾಶ್ಲೇಷಾ, ಶೂಲಕ್ಕೆ ಮೃಗಶಿರ, ಪರಿಘಕ್ಕೆ ಮಖಾ ವೈಧೃತಿಗೆ ಚಿತ್ರಾ, ಈ ಯೋಗಗಳೊಳು ಯಾವ ಯೋಗದಲ್ಲಿ ಮುಹೂರ್ತವಿಡಬೇಕಾದರೂ ಅದಕ್ಕೆ ಹೇಳಲ್ಪಟ್ಟ ನಕ್ಷತ್ರನಂನು ತಲೆಯಲ್ಲಿ ಬರದು ಪ್ರದಕ್ಷಿಣ ಕ್ರಮವಾಗಿ ೨೮ ನಕ್ಷತ್ರಗಳನ್ನು ಬರದು ನೋಡುವಲ್ಲಿ ಮುಹೂರ್ತದ ನಕ್ಷತ್ರವಿದ್ದ ರೇಖೆಯು ಯೆದುರು ರೇಖೆಯಲ್ಲಿ ಸೂರ್ಯನಿರುವ ನಕ್ಷತ್ರವಿದ್ದರೆ ಖರ್ಜೂರಿಕ ದೋಷವುಂಟಾಗುತ್ತದೆ. ಬೇರೆ ರೇಖೆಯಲ್ಲಿದ್ದರೆ ದೋಷವಿಲ್ಲ. ಮತ್ತು ಸೂರ್ಯನು ಪ್ರಥಮಪಾದದಲ್ಲಿದ್ದು ಚಂದ್ರನು ೪ನೇ ಪಾದದಲ್ಲಿದ್ದರೆ ಏಕಾರ್ಗಳ ದೋಷ ವುಂಟಾಗುತ್ತದೆ. ಈ ಮೇರೆ ನಾಲ್ಕನೇ ಪಾದಕ್ಕೂ ೧ನೇ ಪಾದಕ್ಕೂ, ೩ನೇ ಪಾದಕ್ಕೂ, ೨ನೇ ಪಾದಕ್ಕೂ ೩ನೇ ಪಾದಕ್ಕೂ ಯೇಕಾರ್ಗಳ ದೋಷವೆಂಬದಾಗಿಯೂ ಹೀಗಿಲ್ಲದೆ ಪಾದ ಭೇದವಿದ್ದರೆ ದೋಷವಿಲ್ಲವೆಂಬದಾಗಿಯೂ ತಿಳಿಯತಕ್ಕದ್ದು.

ಗ್ರಹಣೋತ್ಪಾತ ನಕ್ಷತ್ರ ದೋಷಃ.

ಶ್ಲೋ॥ ಗ್ರಹಣೋತ್ಪಾತಭಂತ್ಯಾಜ್ಯಂಮಂಗಳೇತುಋತುತ್ರಯಂ।
ಯಾವಚ್ಚ ರವಿಣಾಭುಕ್ತಂಮುಕ್ತಂದಗ್ಧಮಿವೇಂಧನಂ ॥

ಟೀ॥ ಯಾವ ನಕ್ಷತ್ರದಲ್ಲಿ ಚಂದ್ರ ಸೂರ್ಯ ಗ್ರಹಣ ಹಿಡಿಯುತ್ತದೋ ಅಂತಾ ನಕ್ಷತ್ರವನ್ನು ಸರ್ವ ಶುಭಕಾರ್ಯಗಳಲ್ಲೂ ಬಿಡತಕ್ಕದ್ದು,

ವಾರಶೂಲೆಗಳು.

ಶ್ಲೋ॥ ನಪೂರ್ವೇಶನಿಸೋಮೌಚನಗುರುರ್ದಕ್ಷಿಣೇತಥಾ। ನಪಶ್ಚಿಮೇದ್ಭಾನುಶುಕ್ರೌಚನೋತ್ತರೇಬುಧಮಂಗಳೌ ॥

ಟೀ॥ ಶನಿಸೋಮವಾರಗಳಲ್ಲಿ ಮೂಡಲದಿಕ್ಕಿಗೂ, ಗುರುವಾರದಲ್ಲಿ ದಕ್ಷಿಣ ದಿಕ್ಕಿಗೂ, ರವಿ ಶುಕ್ರವಾರಗಳಲ್ಲಿ ಪಡುವಲ ದಿಕ್ಕಿಗೂ, ಬುಧ ಮಂಗಳವಾರಗಳಲ್ಲಿ ಉತ್ತರ ದಿಕ್ಕಿಗೂ ಪ್ರಯಾಣ ಹೊರಡಕೂಡದು.

ಶ್ಲೋ॥ ಶನಿರ್ಗುರುಶ್ಚಾಪ್ಯಾಗ್ನೇಯೆಸೋಮಶುಕ್ರೌಚನೈಋತೆ । ಕುಜಾದಿತ್ಯೌಚವಾಯುವ್ಯೇ ಬುಧಈಶಾನ್ಯಯೆವಚ ॥

ಟೀ॥ ಶನಿಗುರುವಾರಗಳಲ್ಲಿ ಆಗ್ನೇಯ ದಿಕ್ಕಿಗೂ, ಸೋಮ ಶುಕ್ರವಾರಗಳಲ್ಲಿ ನಿಋುತಿದಿಕ್ಕಿಗೂ, ಕುಜ ರವಿವಾರಗಳಲ್ಲಿ ವಾಯುವ್ಯಕ್ಕೂ ಬುಧವಾರದಲ್ಲಿ ಈಶಾನ್ಯದಿಕ್ಕಿಗೂ ಪ್ರಯಾಣ ಮಾಡಕೂಡದು.

ವಾರಶೂಲ ಭಂಗಃ.

ಶ್ಲೋ॥ ದ್ವಾವಿಂಶತಿರ್ಗುರೌಚೈವದ್ವಾದಶೇಂದುಜಭೌಮಯೋಃ । ಪಂಚಾದಶಭೃಗೌಭಾನೌಮಂದೇಷ್ಟೌಶ್ಚಾಷ್ಟನಾಡಿಕಾಃ । ವಾರಶೂಲಯಿಮಾಸ್ತ್ಯಜ್ಯಾಶ್ಚೇಷಂಗಮನಶೋಭನಂ ॥

ಟೀ॥ ಗುರುವಾರದಲ್ಲಿ ೨೨ ಘಳಿಗೆಗಳು, ಅಂಗಾರಕ ಬುಧವಾರಗಳಲ್ಲಿ ೧೨ ಘಳಿಗೆಗಳು, ಶುಕ್ರ ರವಿ ವಾರಗಳಲ್ಲಿ ೧೫ ಘಳಿಗೆಗಳು, ಸೋಮ ಶನಿವಾರಗಳಲ್ಲಿ ೮ ಘಳಿಗೆಗಳು, ತ್ಯಾಜ್ಯಗಳು ಮಿಕ್ಕ ಘಳಿಗೆಗಳೆಲ್ಲಾ ಪ್ರಯಾಣದಲ್ಲಿ ಶುಭಕರಗಳು.

ದಿಗ್ವಾರ ಫಲವು.

ಶ್ಲೋ॥ ಅಂಗಾರಕೇಪ್ರಾಗ್ಗಮನಂಚಲಾಭಸ್ಸ್ವಾಮ್ಯೇಶನೌದಕ್ಷಿಣಮರ್ಥಲಾಭಃ । ಗುರೌಬುಧೇವಾಗ್ದಿಶಿಕಾರ್ಯಸಿದ್ಧಿರವೌಭೃಗೌಚೋತ್ತರಧಾನ್ಯಲಾಭಃ ॥

ಟೀ॥ ಮಂಗಳವಾರದಲ್ಲಿ ಮೂಡಲಕಡೆ ಪ್ರಯಾಣ ಲಾಭಕರವು. ಸೋಮ ಶನಿವಾರಗಳಲ್ಲಿ ದಕ್ಷಿಣದಿಕ್ಕಿಗೆ ಪ್ರಯಾಣ ಅರ್ಥಲಾಭವು, ಬುಧಗುರುವಾರಗಳಲ್ಲಿ ಪಶ್ಚಿಮದಲ್ಲಿ ಪ್ರಯಾಣದಿಂದ ಕಾರ್ಯಸಿದ್ಧಿಯು, ರವಿ ಶುಕ್ರವಾರಗಳಲ್ಲಿ ಉತ್ತರ ಪ್ರಯಾಣದಿಂದ ಲಾಭವಹುದು.

ಪ್ರತ್ಯೇಕ ವಾರಫಲವು.

ಶ್ಲೋ॥ ಅರ್ಕಕ್ಲೇಶಮನರ್ಥನಾಶಂಚಗಮನಸ್ಸೋಮೇಚಬಂಧುಪ್ರಿಯಂ । ಭೌಜಾತೇನಲತಸ್ಕರೇಜ್ವರಭಯಂಪ್ರಾಪ್ತಂತ್ವರ್ಥಂಬು

ಧ । ಕ್ಷೇಮಾರೋಗ್ಯಮಿದಂಕರೋತಿಧಿಷಣಶ್ಶುಕ್ರಶ್ಚಲಾಭಂಸ್ಥಿರಂ।
ವ್ಯಾಧಿಂಭಂಗಮಿದಂಕರೋತಿಸತತಂಮಂದೇದಿನೇಗಚ್ಛತಾಂ ॥

ಟೀ॥ ಭಾನುವಾರದಲ್ಲಿ ಪ್ರಯಾಣದಿಂದ ಕ್ಲೇಶವು ಮತ್ತು ಅನರ್ಥ ಕವು, ಸೋಮವಾರದಲ್ಲಿ ಬಂಧುಜನ ಸಂತೋಷ, ಕುಜವಾರದಲ್ಲಿ, ಅಗ್ನಿ, ಚೋರಜ್ವರಭಯವು, ಬುಧವಾರದಲ್ಲಿ ಧನಲಾಭವು, ಗುರುವಾರದಲ್ಲಿ ಕ್ಷೇಮಾರೋಗ್ಯಗಳುಂಟಾಗುತ್ತವೆ, ಶುಕ್ರವಾರದಲ್ಲಿ ಸ್ಥಿರಲಾಭ ಉಂಟಾಗುತ್ತದೆ, ಶನಿವಾರದಲ್ಲಿ ಪ್ರಯಾಣದಿಂದವ್ಯಾಧಿ ಭಂಗಗಳುಂಟಾಗುತ್ತವೆ.

ವಾರದೋಷಭಂಗವು.

ಶ್ಲೋ॥ ಕ್ಷೀರಂಚಭಾನೌದಧಿಶೀತರಶ್ಮೌಕುಜೇಚಮಾಷಾಶ್ಚ ಬುಧೇಚಲಾಜಾಃ। ಜೀವೇಪಿಚಾಜ್ಯಂಭೃಗುಪಾಯಸಂಚಮಂದೇಚವಾ ರೇತಿಲಪಿಷ್ಟಮಾಹುಃ ॥

ಟೀ॥ ಭಾನುವಾರದಲ್ಲಿ ಹಾಲನ್ನೂ, ಸೋಮವಾರದಲ್ಲಿ ಮೊಸರನ್ನೂ, ಕುಜವಾರದಲ್ಲಿ ಉದ್ದನ್ನೂ, ಬುಧವಾರದಲ್ಲಿ ಭತ್ತದ ಹರಳನ್ನೂ, ಗುರುವಾರದಲ್ಲಿ ತುಪ್ಪವನ್ನೂ, ಶುಕ್ರವಾರದಲ್ಲಿ ಪಾಯಸವನ್ನೂ, ಶನಿವಾರದಲ್ಲಿ ಎಳ್ಳನ್ನು ದಾನ ಮಾಡಿ ಹೊರಡುವಂತಾವನಿಗೆ ವಾರದೋಷಗಳಿಲ್ಲವೆಂದು ಭಾವವು.

ತಿಥಿವಿಷಯದಲ್ಲಿ ವಿಶೇಷವು.

ಶ್ಲೋ॥ ದ್ವಿತೀಯಾಚತೃತೀಯಾಚಪಂಚಮೀಸಪ್ತಮೀತಥಾ। ದಶಮ್ಯೇಕಾದಶೀಚೈವಯಾತ್ರಾಸಿದ್ಧಿಂತ್ರಯೋದಶೀ। ಕೃಷ್ಣಾವಾಯದಿ ವಾಶುಕ್ಲೇವರ್ಜನೀಯಾಚತುರ್ದಶೀ। ಪೌರ್ಣಮಾಸ್ಯಾಮಮಾವಾ ಸ್ಯಾಂಚನಗಂತವ್ಯಂಕದಾಚನ ॥

ಟೀ॥ ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ, ಏಕಾದಶೀ, ತ್ರಯೋದಶೀ ಈ ೭ ತಿಥಿಗಳು ಯಾತ್ರಾಸಿದ್ಧಿಯನ್ನು ಕೊಡುತ್ತವೆ, ಕೃಷ್ಣಪಕ್ಷದಲ್ಲಾದರೂ ಶುಕ್ಲ ಪಕ್ಷದಲ್ಲಾದರೂ, ಚತುರ್ದಶಿಯು ತ್ಯಾಜ್ಯವು, ಮತ್ತು ಪೂರ್ಣಿಮಾ ಅಮಾವಾಸ್ಯಾ ಈ ತಿಥಿಗಳಲ್ಲಿ ಯಾವಾಗ್ಯೂ ಪ್ರಯಾಣ ಮಾಡಕೂಡದು.

ಶ್ಲೋ॥ ಇಂದ್ರೇದಧಿಯಮೇತೈಲಂವಾರುಣೇಗುಡಮೇವಚ । ಉತ್ತರೇ ಕ್ಷೀರಮಾಜ್ಯಂಚವಾರದೋಷೋನವಿದ್ಯತೇ ॥

ಟೀ॥ ಪೂರ್ವದಿಕ್ಕಿಗೆ ಪ್ರಯಾಣ ಹೊರಡುವಾಗ ಮೊಸರನ್ನೂ, ದ

ಕ್ಷೇಮತಾರೆಗೆ ಬೃಹಸ್ಪತಿಯಧಿಪನು, ಅವನು ಧೈರ್ಯವನ್ನು ಮಾಡಿಸುತ್ತಾನೆ. ಪ್ರತ್ಯಕ್ತಾರೆಗೆ ಕೇತುವಧಿಪನು, ಅವನು ಮರಣವನ್ನು ಕೊಡುತ್ತಾನೆ, ಸಾಧನತಾರೆಗೆ ಚಂದ್ರನಧಿಪನು, ಅವನು ಕೀರ್ತಿಯನ್ನು ಕೊಡುತ್ತಾನೆ. ನೈಧನತಾರೆಗೆ ಶನಿಯಧಿಪನು, ಅವನು ಪ್ರಾಣಹಾನಿಯನ್ನು ಕೊಡುತ್ತಾನೆ, ಮೈತ್ರತಾರೆಗೆ ಶುಕ್ರನಧಿಪತಿಯು, ಅವನು ಸಂತೋಷವನ್ನು ಕೊಡುತ್ತಾನೆ. ಪರಮಮೈತ್ರತಾರೆಗೆ ಕುಜನಧಿಪನು, ಅವನು ಮರಣವನ್ನು ಕೊಡುತ್ತಾನೆ ಈ ಮೇರೆ ತಾರಾಧಿಪತಿಗಳಿಂದ ಫಲವನ್ನು ತಿಳಿಯತಕ್ಕದ್ದು. ಈ ಶ್ಲೋಕದಿಂದ ೯ನೇ ತಾರೆಯು ಪರಮಮೈತ್ರವಾದ್ದರಿಂದ ಅದು ಅತ್ಯಂತ ಮೈತ್ರವಾದದ್ದು. ವಿಶೇಷ ಶುಭಪ್ರದವೆಂದು ಕೆಲವರು ನುಡಿಯುತ್ತಾರೆ, ಅದಕ್ಕಧಿಪತಿಯಾದ ಅಂಗಾರಕನು ಮಾರಣಫಲಪ್ರದನೆಂದು ತಿಳಿಯಬರುವದರಿಂದ ಅದು ಮೈತ್ರತಾರೆಗೆ ವಿರೋಧವಾಗಿ ಪರಮ ಅಮೈತ್ರವಾಗಿ ನಾಶಕರವಾದುದೆಂದು ತಿಳಿಯಬೇಕು.

ತಾರಾವಾಹನಗಳು.

ಶ್ಲೋ॥ ಮಯೂರಹಯಮೇಷಾಶ್ಚ ಗಜವಾಯಸಜಂಬುಕಾಃ ।
ಮೃಗೇಂದ್ರವೈನತೇಯಶ್ಚ ಹಂಸಸ್ಸ್ಯಾಜ್ಜನ್ಮಭಾದಿಷು ॥

ಟೀ॥ ನವಿಲು, ಕುದುರೆ, ಕುರಿ, ಆನೆ, ಕಾಗಿ, ನರಿ, ಸಿಂಹ, ಗರುಡ, ಹಂಸ. ಇವುಗಳು ಜನ್ಮಾದಿ ೯ ತಾರೆಗಳಿಗೆ ವಾಹನಗಳೆಂದರಿವುದು.

ವಾಹನ ಫಲಗಳು.

ಶ್ಲೋ॥ ಮಯೂರಶ್ಚ ಮನಸ್ತಾಪಂ ಹಯೋ ಲಾಭಾರ್ಥಸಂಪದಃ ।
ಮೇಷಸ್ತು ಕಲಹಂ ಚೈವ ರಾಜ್ಯಪ್ರಾಪ್ತಿಂ ಗಜಸ್ತಥಾ । ವಾಯಸಃ
ಕಾರ್ಯನಾಶಂ ಚ ಜಂಬುಕಸ್ಸುಖಮೇವ ಚ । ಸಿಂಹೋ ರಣಭಯಂ ಚೈ
ವ ವೈನತೇಯಸ್ಸುಖಂ ಬಹು । ಹಂಸಶ್ಚ ಕಾರ್ಯವಿಭ್ರಂಶಂ ವಾಹನಾ
ದಿಫಲಂ ಲಭೇತ್ ॥

ಟೀ॥ ನವಿಲು ಮನಸ್ತಾಪವನ್ನು, ಕುದುರೆ ಲಾಭಾರ್ಥ ಸಂಪತ್ತುಗಳನ್ನು, ಕುರಿಯು ಕಲಹವನ್ನು, ಗಜವು ರಾಜ್ಯಪ್ರಾಪ್ತಿಯನ್ನು, ಕಾಗಿಯು ಕಾರ್ಯನಾಶವನ್ನು, ನರಿಯು ಸುಖವನ್ನು, ಸಿಂಹವು ಯುದ್ಧಭಯವನ್ನು, ಗರುತ್ಮಂತ ಬಹು ಸುಖವನ್ನು, ಹಂಸವು ಕಾರ್ಯಹಾನಿಯನ್ನು, ಈ ಮೇರೆ ಫಲಗಳನ್ನು ಕೊಡುತ್ತವೆ, ಇವು ವಾಹನ ಫಲಗಳೆಂದು ತಿಳಿಯುವದು.

ಗ್ರಂಥಾಂತರೆ.

ಶ್ಲೋ॥ ಜನ್ಮತ್ರಿಕೇ ತ್ವಾದ್ಯಭಾಗಸ್ತು ತೃತೀಯಸ್ತು ವಿಪತ್ತ್ರಿಕೇ ।
ಪ್ರತ್ಯಗ್ನಿಧನಯೋಸ್ತುರ್ಯಸ್ತ್ವಂಶ್ಯಾಶ್ಚಾನ್ಯೇ ಶುಭಾವಹಾಃ॥

ಟೀ॥ ಜನ್ಮತಾರೆಗಳಲ್ಲಿ ೭ ಘಳಿಗೆಗಳು ತ್ಯಾಜ್ಯಗಳು, ವಿಪತ್ತಾರೆಯಲ್ಲಿ ೩ ಘಳಿಗೆಗಳು ತ್ಯಾಜ್ಯಗಳು, ಪ್ರತ್ಯಕ್ತಾರೆಯಲ್ಲಿಯೂ, ನೈಧನತಾರೆಯಲ್ಲಿಯೂ ೮ ಘಳಿಗೆಗಳುಬಿಡತಕ್ಕವು, ಮಿಕ್ಕಘಳಿಗೆಗಳು ಶುಭಗಳೆಂದು ತಿಳಿಯತಕ್ಕದು.

ಶ್ಲೋ॥ ಜನ್ಮತ್ರಿಪಂಚಸಪ್ತಾಖ್ಯಾಸ್ತಾರಾ ಇಷ್ಟಫಲಪ್ರದಾಃ। ತದ್ದೋಷಪರಿಹಾರಾಯದದ್ಯಾದ್ವೇತದ್ವಿಜಾತಯೇ। ಶಾಕಂಗುಡಂಚಲವಣಂ ಸತಿಲಂಕಾಂಚನಂಕ್ರಮಾತ್॥ ವಿಪದಿಪ್ರತ್ಯಗೇಚೈವಚರಮಂಚಾಧ್ಯಕಂವಿನಾ । ಸ್ವೋಚ್ಚಸ್ವಕ್ಷರ್ಗತಶ್ಚಂದ್ರಃಶುಭದಸ್ಸರ್ವಕರ್ಮಸು ॥

ಟೀ॥ ಜನ್ಮ, ವಿಪತ್, ಪ್ರತ್ಯಕ್, ನೈಧನತಾರೆಗಳು ಅನಿಷ್ಟಫಲಗಳಾಗಿವೆ ಆದದರಿಂದ ತದ್ದೋಷಪರಿಹಾರಕ್ಕಾಗಿ ಶಾಕ, ಬೆಲ್ಲ, ಉಪ್ಪು, ಬಂಗಾರುಸಹಿತ ಎಳ್ಳು ಇವುಗಳನ್ನು ಬ್ರಾಹ್ಮಣನಿಗೆ ದಾನಮಾಡಬೇಕು, ಮತ್ತು ಜನ್ಮತಾರೆಯನ್ನು ಹಾಗು ನೈಧನತಾರೆಯನ್ನು ಬಿಟ್ಟು ಕಡೆಯವಿಪತ್ತಾರೆಯಲ್ಲಿಯೂ ಪ್ರತ್ಯಕ್ತಾರೆಯಲ್ಲಿಯೂ ಚಂದ್ರನು ಸ್ವೋಚ್ಚಸ್ವಕ್ಷೇತ್ರಗತನಾಗಿ ಇದ್ದರೆ ಸರ್ವ ಕರ್ಮಗಳಲ್ಲಿಯೂ ಶುಭಕರನು.

ಚಂದ್ರಬಲವು.

ಶ್ಲೋ॥ ಜನ್ಮಾನಲಯುಗ್ತರ್ತುಸಪ್ತದಶಮೈಕಾದಶೇಶುಭಃ। ಚತುರಷ್ಟದ್ವಾದಶೇಕೃಷ್ಣೇಶುಕ್ಲೇದ್ವಿನವಪಂಚಮೇ। ಯಥಾಮಾತಾಸುತಾನ್ರಕ್ಷೇತ್ತಥಾರಕ್ಷತಿಚಂದ್ರಮಾಃ ॥

ಟೀ॥ ಚಂದ್ರನು ಜನ್ಮ ೩-೬-೭-೧೧ ಈ ಸ್ಥಾನಗಳಲ್ಲಿದ್ದರೆ ಶುಭಪ್ರದನು, ಅವನು ಕೃಷ್ಣಪಕ್ಷದಲ್ಲಿ ೪-೮-೧೨ ಸ್ಥಾನಗಳಲ್ಲಿ ಇದ್ದರೂ ಶುಕ್ಲಪಕ್ಷದಲ್ಲಿ ೨-೯-೫ ಸ್ಥಾನಗಳಲ್ಲಿ ಇದ್ದರೂ ತಾಯಿ ಮಕ್ಕಳನ್ನು ರಕ್ಷಿಸುವಂತೆ ರಕ್ಷಿಸುವನು.

ಶ್ಲೋ॥ ಯಾತ್ರಾವಿವಾಹಸೀಮಂತಮೌಂಜೀಬಂಧನಭುಕ್ತಿಷು ।
ವಿದ್ಯಾರಂಭೇಚತಾರಾಯಾಃಪ್ರಾಧಾನ್ಯಂಬಲಮಿಂದುವತ್ ॥

ಟೀ॥ ಯಾತ್ರಾ, ವಿವಾಹ, ಸೀಮಂತ, ಉಪನಯನ, ಅನ್ನಪ್ರಾ

ನ, ವಿದ್ಯಾರಂಭ, ಇವುಗಳಲ್ಲಿ ಚಂದ್ರಬಲವಂತೆ ತಾರಾಬಲವು ಪ್ರಧಾನವಾಗಿರುವದು.

ವಾಸ್ತುಪ್ರಕರಣವು.

ಶ್ಲೋ॥ ವಕ್ಷ್ಯೇತದನುವಾಸ್ತುಲಕ್ಷಣಂಪೂರ್ವಶಾಸ್ತ್ರಮನುಸ್ಮೃತ್ಯಯತ್ನತಃ। ಮೂಢದೋಷರಹಿತೇಥಮಾಸತತ್ಪ್ರಾರಭೇತಸುದಿನೇ ಶುಭೇಽದಯೇ ॥

ಟೀ। ಪೂರ್ವಶಾಸ್ತ್ರಗಳನ್ನು ಅನುಸರಿಸಿ ವಾಸ್ತುಲಕ್ಷಣವು ಹೇಳಲ್ಪಡುತ್ತದೆ, ಗುರು ಶುಕ್ರರ ಮೂಢದೋಷವಿಲ್ಲದ ತಿಂಗಳಲ್ಲಿ ಶುಭದಿನದಲ್ಲಿ ಶುಭಲಗ್ನದಲ್ಲಿಯೂ ಅದು ಆರಂಭಿಸತಕ್ಕದ್ದು.

ಶ್ಲೋ॥ ಗೃಹಸಂಸ್ಥಾಪನಂಚೈತ್ರೇಧನಲಾಭಶುಭಪ್ರದಂ । ವೈಶಾಖೇತುಶುಭಂವಿಂದ್ಯಾಜ್ಜ್ಯೇಷ್ಠೇತುಮರಣಂಧ್ರುವಂ।ಆಷಾಢೇಗೋಕುಲಂಹಂತಿಶ್ರಾವಣೇಭೃತ್ಯವರ್ಧನಂ । ಭಾದ್ರಪದೇರೋಗಪೀಡಾಪೀಚಾಶ್ವಿಜೇಕಲಹಂತಥಾ । ಕಾರ್ತಿಕ್ಯಾಂಧನಲಾಭಸ್ಸ್ಯಾನ್ಮಾರ್ಗಶೀರ್ಷೇಧನಕ್ಷಯಃ । ಪುಷ್ಯೇಚಾಗ್ನಿಭಯಂನಿತ್ಯಂಮಾಘೇತುಬಹುಪುತ್ರದಂ। ಫಾಲ್ಗುನೇತನುನಾಶಸ್ಸ್ಯಾನ್ಮಾಸಾನಾಂಚಫಲಾಫಲಂ ॥

ಟೀ॥ ಚೈತ್ರಮಾಸದಲ್ಲಿ ಗೃಹಾರಂಭವು ಧನಲಾಭಕರವು, ವೈಶಾಖದಲ್ಲಿ ಶುಭಕರವು, ಜ್ಯೇಷ್ಠದಲ್ಲಿ ಮರಣಪ್ರದವು, ಆಷಾಢದಲ್ಲಿ ಪಶುನಾಶ, ಶ್ರಾವಣದಲ್ಲಿ ಭೃತ್ಯವೃದ್ಧಿ, ಭಾದ್ರಪದದಲ್ಲಿ ರೋಗಪೀಡಾ, ಅಶ್ವೀಯುಜದಲ್ಲಿ ಕಲಹ, ಕಾರ್ತೀಕದಲ್ಲಿ ಧನಲಾಭ, ಮಾರ್ಗಶಿರದಲ್ಲಿ ಧನಕ್ಷಯು, ಪುಷ್ಯದಲ್ಲಿ ಅಗ್ನಿಭಯು, ಮಾಘದಲ್ಲಿ ಬಹುಪುತ್ರಪ್ರದ, ಫಾಲ್ಗುನದಲ್ಲಿ ಶರೀರನಾಶವು, ಈ ಮೇರೆ ಮಾಸಗಳ ಫಲಾಫಲಗಳನ್ನು ತಿಳಿಯತಕ್ಕದ್ದು.

ಶ್ಲೋ॥ ಗೋಕರ್ಕಿಹರಿಕುಂಭಾಜತೌಳಿಕೀಟಮೃಗಸ್ಥಿತೇ। ದಿವಾಕರೇ ಗೃಹಾರಂಭಃಪುತ್ರಪೌತ್ರಾಭಿವೃದ್ಧಿದಃ ॥

ಟೀ॥ ಸೂರ್ಯನು ವೃಷಭ, ಕಟಕ, ಸಿಂಹ, ಕುಂಭ, ಮೇಷ, ತುಲಾ, ವೃಶ್ಚಿಕ, ಮಕರ ರಾಶಿಗಳಲ್ಲಿ ಇರುವಾಗ ಹೊಸದಾಗಿ ಗೃಹಾರಂಭ ಮಾಡಿದರೆ ಪುತ್ರಪೌತ್ರಾಭಿವೃದ್ಧಿಯನ್ನುಂಟುಮಾಡುತ್ತದೆ.

ಶ್ಲೋ॥ ಸ್ಥಿರರಾಶಿಗತೇಸೂರ್ಯೇಗೃಹಕರ್ಮಸುಶೋಭನಂ। ಚರೇತುಮಧ್ಯಮಂಪ್ರೋಕ್ತಂದ್ವಿಸ್ವಭಾವೇತುನಿಂದಿತಂ ॥

ಟೀ॥ ಸೂರ್ಯನು ಸ್ಥಿರರಾಶಿಯಲ್ಲಿರುವಾಗ ನೂತನ ಗೃಹಾರಂಭವು

ಮಂಗಳಕರವು, ಚರ ರಾಶಿಯಲ್ಲಿರುವಾಗ ಮಧ್ಯಮ ದ್ವಿಸ್ವಭಾವ ರಾಶಿಗಳಲ್ಲಿರುವಾಗ ಅಧಮವು.

ಶ್ಲೋ॥ ಗುರುಭಾರ್ಗವಯೋರ್ಮೌಢ್ಯೇಬಾಲ್ಯವಾರ್ಧಿಕಯೋರಪಿ। ಚಾತುರ್ಮಾಸ್ಯಾಂಶೂನ್ಯಮಾಸೇಗೃಹಕರ್ಮನಕಾರಯೇತ್ ॥

ಟೀ॥ ಗುರು ಶುಕ್ರರ ಮೌಢ್ಯದಲ್ಲಿಯೂ, ಬಾಲ್ಯ ವಾರ್ಧಿಕಾವಸ್ಥೆಗಳಲ್ಲಿಯೂ, ಚಾತುರ್ಮಾಸ್ಯದಲ್ಲಿಯೂ, ಶೂನ್ಯಮಾಸದಲ್ಲಿಯೂ, ಗೃಹ ನಿರ್ಮಾಣ ಕಾರ್ಯವನ್ನು ಮಾಡಕೂಡದು.

ಗೃಹದ್ವಾರ ನಿರ್ಣಯವು॥

ಶ್ಲೋ॥ ಸಿಂಹೇರ್ಕೇಪಶ್ಚಿಮದ್ವಾರಂವೃಷಭೇಚೋತ್ತರೇತಥಾ। ಕುಂಭೇಪೂರ್ವದಿಶಿದ್ವಾರಂವೃಶ್ಚಿಕೇಚೈವದಕ್ಷಿಣೇ। ಏವಂಕೃತಂಚೇತ್ತದ್ವೇಶ್ಮಶೋಭನಂಸೌಖ್ಯವರ್ಧನಂ ॥

ಟೀ॥ ಸೂರ್ಯನು ಸಿಂಹದಲ್ಲಿರುವಾಗ ಮನೆಗೆ ಪಶ್ಚಿಮಕಡೇ ಬಾಗಲನ್ನು, ವೃಷಭ ರಾಶಿಯಲ್ಲಿರುವಾಗ ಉತ್ತರಭಾಗದಲ್ಲಿಯೂ, ಕುಂಭರಾಶಿಗತನಾಗಿ ಇರುವಾಗ ಪೂರ್ವಭಾಗದಲ್ಲೂ, ವೃಶ್ಚಿಕದಲ್ಲಿರುವಾಗ ದಕ್ಷಿಣ ಭಾಗದಲ್ಲಿಯೂ ಮನೆಯ ಬಾಗಲನ್ನು ಇರಿಸತಕ್ಕದ್ದು. ಈ ಮೇರೆ ಬಾಗಲು ಇರಿಸಲ್ಪಟ್ಟರೆ ಆ ಮನೆಯು ಶುಭಸೌಖ್ಯ ವೃದ್ಧಿಕರವಾಗುವದು.

ಶ್ಲೋ॥ ಮೃಗರ್ಕೇಪಶ್ಚಿಮದ್ವಾರಂತುಲಾಯಾಂಚೋತ್ತರಂಕೃತಂ। ಕರ್ಕಟಸ್ಥೇಪುರೋದ್ವಾರಂಮೇಷಸ್ಥೆದಕ್ಷಿಣಂಸ್ಮೃತಂ। ಏವಂಕೃತೇತುತದ್ವೇಶ್ಮಮಧ್ಯಮಂಪರಿಕೀರ್ತಿತಂ ॥

ಟೀ॥ ಸೂರ್ಯನು ಮಕರದಲ್ಲಿರುವಾಗ ಪಶ್ಚಿಮದ್ವಾರವನ್ನು, ತುಲೆಯಲ್ಲಿರುವಾಗ ಉತ್ತರಬಾಗಿಲನ್ನು, ಕಟಕದಲ್ಲಿರುವಾಗ ಪೂರ್ವದ್ವಾರವನ್ನೂ, ಮೇಷದಲ್ಲಿರುವಾಗ ದಕ್ಷಿಣದ ಬಾಗಲನ್ನು ಮಾಡಿದರೆ ಆ ಮನೆಯು ಮಧ್ಯಮಫಲಪ್ರದವಾಗಿ ಇರುವದು.

ನಕ್ಷತ್ರಗಳು.

ಶ್ಲೋ ॥ ಉತ್ತರಾತ್ರಿತಯಂಚಿತ್ರಾರೋಹಿಣೀಸ್ವಾತಿರೇವತೀ। ಜ್ಯೇಷ್ಠಾಮೃಗಶಿರೋಮೂಲಾಚಾಶ್ವಿನೀಹಸ್ತಪುಷ್ಯಕಾಃ ॥ ಮೈತ್ರಂಚೈತೇಪ್ರಶಸ್ತಾಹಿಸರ್ವದಾವಾಸ್ತುಕರ್ಮಣಿ ॥

ಟೀ॥ ಉತ್ತರ ಫಲ್ಗುನೀ, ಉಷಾ, ಉಭಾ, ಚಿತ್ರಾ, ರೋಹಿಣಿ, ಸ್ವಾತಿ, ಜ್ಯೇಷ್ಠಾ, ಮೃಗಶಿರ, ಮೂಲ, ಅಶ್ವಿನೀ, ಹಸ್ತ, ಪುಷ್ಯ, ಅ

ನೂರಾಧಾ, ಈ ನಕ್ಷತ್ರಗಳು ವಾಸ್ತುಕರ್ಮದಲ್ಲಿ ಯಾವಾಗ್ಯೂ ಯೋಗ್ಯಗಳಾಗಿರುತ್ತವೆ.

ವಾಸಿಷ್ಠೇ-ವಸಿಷ್ಠಮತದಲ್ಲಿ.

ಶ್ಲೋ॥ ರೋಹಿಣೀಮೃಗಚಿತ್ರಾರ್ಕವಾಸವ್ರೋತ್ತರತ್ರಯಂ ಭಂ। ಶ್ರವಣಂಚೈವ ಧಾನ್ಯಷ್ಟಕಸ್ಯಾಸಿಗೃಹಕರ್ಮಣೀ ॥

ಟೀ॥ ರೋಹಿಣೀ, ಮೃಗಶಿರ, ಚಿತ್ರಾ, ಹಸ್ತಾ, ಜ್ಯೇಷ್ಠಾ, ಉತ್ತರಾ, ಉತ್ತರಾಷಾಢ, ಶ್ರವಣ, ಈ ೭ ನಕ್ಷತ್ರಗಳು ಗೃಹಕರ್ಮದಲ್ಲಿ ಪ್ರಶಸ್ತಗಳು.

ಶ್ಲೋ॥ ಸ್ವಾತೀಪುಷ್ಯಾನುರಾಧಾಶ್ವಿಶತತಾಹಿರ್ಬುಧ್ನ್ಯಪೌಷ್ಣಭಂ। ಸಪ್ತಮಧ್ಯಫಲಾನ್ಯತ್ರ ಶೇಷಾಣಿಪರಿವರ್ಜಯೇತ್ ॥

ಟೀ॥ ಸ್ವಾತಿ, ಪುಷ್ಯ, ಅನೂರಾಧಾ, ಅಶ್ವಿನೀ, ಶತಭಿಷಕ್, ಉ.ಭಾ, ರೇವತೀ, ಈ ೭ ನಕ್ಷತ್ರಗಳು ಮಧ್ಯಮ ಫಲಪ್ರದಗಳು, ಮಿಕ್ಕವನ್ನು ಬಿಡತಕ್ಕದ್ದು.

ಯೋಗಗಳು.

ಶ್ಲೋ॥ ಪರಿಘಸ್ಯಚಪೂರ್ವಾರ್ಧಂ ಕೃತ್ಸ್ನಂವೈಧೃತಿಪಾತಯೋಃ। ಗಂಡಾತಿಗಂಡಯೋಷ್ಷಟ್ಕ ನಾಡಿಕಾಃ ಪಂಚಶೂಲಕೇ ॥

ಟೀ॥ ಪರಿಘಯೋಗಕ್ಕೆ ಪೂರ್ವಾರ್ಧವನ್ನು, ವೈಧೃತಿ ವ್ಯತೀಪಾತಗಳ ೬೦ ಗಳಿಗೆಗಳನ್ನು ಗಂಡದಲ್ಲೂ ಅತಿಗಂಡದಲ್ಲೂ ೬ ಗಳಿಗೆಗಳನ್ನು ಶೂಲದಲ್ಲಿ ೫ ಗಳಿಗೆಗಳನ್ನೂ ಸಹ ಬಿಡತಕ್ಕದ್ದು.

ಶ್ಲೋ॥ ವ್ಯಾಘಾತೇನವನಾಡಿಶ್ಚ ವಾಸ್ತುಕರ್ಮಣಿವರ್ಜಯೇತ್। ನಿಂದ್ಯಯೋಗೇಷುಸರ್ವೇಷುವಿಷ್ಟ್ಯಾಂಸರ್ವವಿವರ್ಜಯೇತ್ ॥

ಟೀ॥ ವ್ಯಾಘಾತದಲ್ಲಿ ೯ ಗಳಿಗೆಗಳನ್ನು ಬಿಡತಕ್ಕದ್ದು, ಯೆಲ್ಲಾದುಷ್ಟಯೋಗಗಳಲ್ಲಿಯೂ ಭದ್ರಾಕರಣದಲ್ಲೂ ಎಲ್ಲಾ ಗಳಿಗೆಗಳನ್ನೂ ಬಿಡತಕ್ಕದ್ದು.

ಲಗ್ನಗಳು.

ಶ್ಲೋ॥ ದ್ವ್ಯಂಗೇಸ್ಥಿರೇವಾಭವನೇವಿಲಗ್ನೇಸೌಮ್ಯಗ್ರಹೈರ್ಯುಕ್ತ ಸಿರೀಕ್ಷಿತೇವ। ಕರ್ಮಸ್ಥಿತೈರ್ವೀರ್ಯಯುತೈಶ್ಚ ಸೌಮ್ಯೈಃ ಕರ್ತಾಂಶವಾಹುರ್ಭವನಸ್ಯಸಂಪದಃ ॥

ಟೀ॥ ಶುಭಗ್ರಹಗಳಿಂದ ಕೂಡಲ್ಪಟ್ಟೂ ನೋಡಲ್ಪಟ್ಟೂ ಇರುವಲ್ಲಿ ಲಗ್ನದಲ್ಲಿಯೂ, ಅಥವಾ ಷಡ್ಬಲಯುಕ್ತವಾದ ಶುಭಗ್ರಹಗಳು ಕ

ರ್ಮಸ್ಥಾನ ಅಂದರೆ ೧೦ ನೇ ರಾಶಿಗಳಲ್ಲಿರುವಾಗಲೂ ಇಂತಾ ಲಗ್ನದಲ್ಲಿ ಗೃಹನಿರ್ಮಾಣ ಶುಭಕರವೆಂಬದಾಗಿ ಸತ್ಪುರುಷರು ಹೇಳುತ್ತಾರೆ.

ಶ್ಲೋ॥ ಪಾಪೈಸ್ತ್ರಿಷಷ್ಠಾಯಗತೈಸ್ತ್ರಿಕೋಣಗೈಃ ಕೇಂದ್ರಾಶ್ರಿತೈ
ಸ್ಸಾಧುಭಿರಾಲಯಸ್ಯ। ವದಂತಿನಿರ್ಮಾಣಮಿಹಾಷ್ಟಮಸ್ಥಃಕ್ರೂರ
ಸ್ತುಕರ್ತುರ್ಮರಣಂಕರೋತಿ ॥

ಟೀ॥ ಗೃಹನಿರ್ಮಾಣದಲಗ್ನಕ್ಕೆ ೩_೬_೧೧ ಸ್ಥಾನಗಳಲ್ಲಿ ಪಾಪ ಗ್ರಹಗಳಿರುವಾಗಲೂ, ೧-೪-೫-೭_೯-೧೦ ಈ ಸ್ಥಾನಗಳಲ್ಲಿ ಶುಭ ಗ್ರಹಗಳಿರುವಾಗಲೂ ಗೃಹನಿರ್ಮಾಣವು ಶುಭಕರವು, ಲಗ್ನಕ್ಕೆ V ನೇಸ್ಥಾನದಲ್ಲಿ ಪಾಪಗ್ರಹವಿದ್ದರೆ ಗೃಹಕರ್ತನಿಗೆ ಮರಣವುಂಟಾಗುತ್ತದೆ.

ಶ್ಲೋ ॥ ಋಕ್ಷಂಪ್ರಜಾಪತೇಶ್ಛಾದ್ಯಂತಲ್ಲಗ್ನೇವೇಶ್ಮಕಂಶುಭಂ। ತ
ನ್ನಕ್ಷತ್ರೇವಿಶೇದ್ಗೇಹಂಶುಭಂಶಂಸಂತಿಸೂರಯಃ ॥

ಟೀ॥ ಬ್ರಹ್ಮನಕ್ಷತ್ರವಾದ ರೋಹಿಣಿಯಲ್ಲಿ ಮನೆಯಮೇಲೆ ಮುಚ್ಚತಕ್ಕದ್ದು, ಅದರ ಲಗ್ನ ಅಂದರೆ ವೃಷಭ ಲಗ್ನದಲ್ಲೂ ಮುಚ್ಚುವದು ಶುಭಕರವು, ಅಂತಾ ರೋಹಿಣೀ ನಕ್ಷತ್ರದಲ್ಲಿ ಗೃಹ ಪ್ರವೇಶವು ಶುಭಕರವೆಂದು ಹಿರಿಯರು ನುಡಿಯುತ್ತಾರೆ.

ಶ್ಲೋ॥ ಸ್ತಂಭಂಚಂದ್ರೋದಯೇಸ್ಥಾಪ್ಯಂವೇಶ್ಮಾರೋಹಂಬುಧೋದ
ಯೇ। ಶುಕ್ರೋದಯೇತುಸಂಛಾದ್ಯಂನಚಾಗ್ನಿಭಯಮಾಪ್ನುಯಾತ್ ॥

ಟೀ॥ ಚಂದ್ರನಲಗ್ನದಲ್ಲಿ ಶಂಕುಸ್ಥಾಪನ ಮಾಡತಕ್ಕದ್ದು, ಬುಧನ ಲಗ್ನದಲ್ಲಿ ಮನೇಮೇಲೆ ಹತ್ತಿ ಕಟ್ಟತಕ್ಕದ್ದು, ಶುಕ್ರನ ಲಗ್ನದಲ್ಲಿ ಮನೆಯನ್ನು ಮುಚ್ಚತಕ್ಕದ್ದು, ಹೀಗೆ ಮಾಡಿದರೆ ಯಾವಾಗ್ಯೂ ಅಗ್ನಿಭಯ ವುಂಟಾಗುವದಿಲ್ಲ.

ಶ್ಲೋ ॥ ತ್ರಿಕೋಣಕೇಂದ್ರಗಾಸ್ಸೌಮ್ಯಾಃಪಾಪಾಸ್ತ್ರ್ಯಾಯಷಡ್ಡಿ
ಗಾಸ್ತಥಾ। ಗೃಹಪ್ರಾರಂಭಲಗ್ನೋತ್ಥದೋಷಾನ್ಘ್ನಂತಿನಸಂಶಯಃ ॥

ಟೀ॥ ಗೃಹಪ್ರಾರಂಭಲಗ್ನಕ್ಕೆ ೧-೪-೫-೭-೯_೧೦ ಈ ಸ್ಥಾನಗಳಲ್ಲಿ ಶುಭಗ್ರಹಗಳೂ, ೩-೬-೧೧ ಈಸ್ಥಾನಗಳಲ್ಲಿ ಪಾಪಗ್ರಹಗಳೂ ಇದ್ದರೆ ಲಗ್ನಗತಗಳಾದಸರ್ವದೋಷಗಳನ್ನೂ ನಿಸ್ಸಂದೇಹವಾಗಿ ಹರಿಸುತ್ತವೆ.

ಶ್ಲೋ॥ ಗುರೌವಾಭಾರ್ಗವೇವಾಪಿ ಚನ್ದ್ರೇಣಸಹಲಗ್ನಗೇ । ತತ್ರಸಂ
ಸ್ಥಾಪಿತಂವೇಶ್ಮವಹ್ನಿನಾಚನಬಾಧ್ಯತೇ ॥

ಟೀ॥ ಗುರುವಾದರೂ ಶುಕ್ರನಾದರೂ ಚಂದ್ರನೊಂದಿಗೆ ಕೂಡಿ ಲಗ್ನ

ದಲ್ಲಿದ್ದರೆ ಆ ಮನೆಯೂ ಯಾವಾಗ್ಯೂ ಅಗ್ನಿಯಿಂದ, ಬಾಧಿಲ್ಪಡುವ ದಿಲ್ಲ.

ಶ್ಲೋ॥ ಭೃಗೌಲಗ್ನಗತೇಜೀವೇಮಧ್ಯಾಹ್ನಾಸ್ಥಮಯೇಸತಿ। ಗೃಹ ಸಂಸ್ಥಾಪನಂಯೋಗ್ಯ ಮಾಯುಷ್ಯಂಚಶತಾಬ್ದಕಂ ॥

ಟೀ॥ ಶುಕ್ರನಾದರೂ, ಗುರುವಾದರೂ, ಲಗ್ನಗತನಾಗಿ ಮಧ್ಯಾಹ್ನದಲ್ಲಿ ಅಭಿಜಿನ್ನಕ್ಷತ್ರದಲ್ಲಾದರೂ ಗೋಧೂಳಿಲಗ್ನದಲ್ಲಾದರೂ ಗೃಹಾರಂಭವು ಯೋಗ್ಯವಾದದ್ದು, ಮತ್ತು ಹಾಗೆ ಕಟ್ಟಲ್ಪಟ್ಟ ಮನೆಗೆ ನೂರು ಸಂವತ್ಸರ ದೀರ್ಘಾಯುವೆಂದು ಹೇಳಬೇಕಾಗಿರುತ್ತದೆ.

ಗೃಹಪ್ರವೇಶವಿಷಯವು.

ಶ್ಲೋ॥ ಅಥಪ್ರವೇಶೋನವಮಂದಿರಸ್ಯ ಸೌಮ್ಯಾಯನೇಜೀವಸಿತೌ ಬಲಾಢ್ಯೌ। ಸಿತೇಚಪಕ್ಷೇಶುಭವಾಸರೇಚವಾಸ್ತ್ವರ್ಚನಂಭೂತಬಲಿಂಚಕುರ್ಯಾತ್ ॥

ಟೀ॥ ಉತ್ತರಾಯಣದಲ್ಲಿ ಗುರು ಶುಕ್ರರು ಬಲಿಷ್ಠರಾಗಿ ಇರುವಾಗಲೂ ಶುಕ್ಲಪಕ್ಷದಲ್ಲೂ ಶುಭವಾರದಲ್ಲೂ ವಾಸ್ತುಪೂಜಾ ಭೂತಬಲಿ ಮುಂತಾದ ಶಾಂತಿಗಳನ್ನು ಮಾಡಿ ನೂತನ ಗೃಹಪ್ರವೇಶವನ್ನು ಮಾಡತಕ್ಕದ್ದು.

ಶ್ಲೋ॥ ಮಾಘಫಾಲ್ಗುನವೈಶಾಖಜ್ಯೇಷ್ಠಮಾಸಾಶ್ಶುಭಪ್ರದಾಃ। ಸಹಪೂರ್ಗ್ಗೌಜಚವಿಜ್ಞೇಯೌಮಧ್ಯಮೌತುಪ್ರವೇಶನೇ ॥

ಟೀ॥ ಮಾಘ ಫಾಲ್ಗುನ ವೈಶಾಖ ಜ್ಯೇಷ್ಠ ಮಾಸಗಳು ನೂತನ ಗೃಹಪ್ರವೇಶದಲ್ಲಿ ಶುಭಪ್ರದಗಳು, ಕಾರ್ತೀಕ ಮಾರ್ಗಶಿರ ಮಾಸಗಳು ಮಧ್ಯಮಗಳು:

ಶ್ಲೋ ॥ ವ್ಯರ್ಕವಾರೇತಿಥಿಷುರಿಕ್ತಾಮಾವರ್ಜಿತಾಸುಚ। ದಿವಾವಾಯಥವಾರಾತ್ರಾಪ್ರವೇಶೋಮಂಗಳಪ್ರದಃ ॥

ಟೀ॥ ಭಾನು ಮಂಗಳವಾರಗಳನ್ನು, ಬಿಟ್ಟು, ಕಡಮೆ ವಾರಗಳಲ್ಲಿಯೂ ರಿಕ್ತತಿಥಿಗಳು, ಅಮಾವಾಸ್ಯೆ ಇವುಗಳನ್ನು ಬಿಟ್ಟು ಕಡಮೆ ತಿಥಿಗಳಲ್ಲಿಯೂ, ಹಗಲಲ್ಲಾದರೂ ರಾತ್ರಿಯಲ್ಲಾದರೂ ನೂತನ ಗೃಹಪ್ರವೇಶವು ಮಂಗಳಪ್ರದವು.

ಶ್ಲೋ ॥ ಚಂದ್ರಜೀವಬುಧಶುಕ್ರವಾಸರೇಶ್ರೀಕರಸ್ಸುತಮುಹಾರ್ತ್ಥಲಾಭದಃ। ಸೂರ್ಯಸೂನುದಿನಸಸ್ಥಿರಪ್ರದಃಕಿಂತುಚೋರ ಭಯ ಮತ್ರವಿದ್ಯತೇ ।

ಟೀ॥ ಚಂದ್ರ ಗುರು ಬುಧ ಶುಕ್ರವಾರಗಳಲ್ಲಿ ನೂತನ ಗೃಹಪ್ರವೇಶವು ಸಂಪತ್ಕರವು, ಮತ್ತು ಪುತ್ರ ಧನಲಾಭಕರವು, ಶನಿವಾರದಲ್ಲಿ ಸ್ಥಿರತ್ವವನ್ನುಂಟುಮಾಡುತ್ತದೆ. ಆದರೆ ಶನಿವಾರದಲ್ಲಿ ಗೃಹಪ್ರವೇಶವು ಚೋರಭಯವನ್ನುಂಟುಮಾಡುತ್ತದೆ.

ಶ್ಲೋ॥ ರಿಕ್ತಾಮಾವಮದಗ್ಧತಿಥಿರ್ದಿನಶಭೂಸೂನುಷಡ್ವರ್ಗವಿನೇಂದುದೃಷ್ಟಿಂ । ಕ್ರೂರಗ್ರಹಾಧಿಷ್ಠಿತವಿದ್ಧಭಂಚಭಂವರ್ಜನೀಯಂತ್ರಿವಿಧಂಪ್ರವೇಶೆ ॥

ಟೀ॥ ನೂತನ ಗೃಹಪ್ರವೇಶದಲ್ಲಿ ರಿಕ್ತಾ, ಅವಮಂದಗ್ಧತಿಥಿ, ಚತುರ್ಥೀ, ನವಮೀ, ಚತುರ್ದಶೀ, ದಗ್ಧತಿಥಿಗಳನ್ನು, ಸೂರ್ಯ ಕುಜವಡ್ವರ್ಗಗಳನ್ನೂ, ಸೂರ್ಯ ಚಂದ್ರರ ದೃಷ್ಟಿಯುಳ್ಳದ್ದಾಗಿಯೂ ಕ್ರೂರಗ್ರಹಗಳಿಂದ ಯುಕ್ತವಾದ್ದಾಗಿಯೂ ಅಂಶದೃಷ್ಟಿ ಬಿದ್ದಂತಾದ್ದಾಗಿಯೂ ಇರುವ ನಕ್ಷತ್ರವನ್ನು ಹೀಗೆ ತಿಥಿಷಡ್ವರ್ಗ ನಕ್ಷತ್ರಗಳನ್ನು ನೂತನ ಗೃಹಪ್ರವೇಶದಲ್ಲಿ ಬಿಡತಕ್ಕದ್ದು.

ಶ್ಲೋ ॥ ರೋಹಿಣ್ಯಾಂತ್ರಿಷುಚೋತ್ತರಾಸುಶುಭದೋಗೇಹಪ್ರವೇಶೋನವಃ। ಪೌಷ್ಣೇವಾಸವಮಿತ್ರಯೋಶ್ಚವಿಹಿತಸ್ಸ್ವಸ್ಯೈನ್ಯಪುರಾಣೇಗೃಹೇ। ಆರ್ಯೇಹಸ್ತಹರೀಜ್ಯಭೇನವಗೃಹೇಶಸ್ತಃಪುರಾಣೇತಥಾ । ಕುಂಭೇಕರ್ಕಿಣಿಭಾಸ್ಕರೇಚಯುವತೌನಿಂದ್ಯಃಪ್ರವೇಶೋಗೃಹೇ ॥

ಟೀ॥ ರೋಹಿಣಿಯಲ್ಲೂ, ಉತ್ತರಾ, ಉತ್ತರಾಷಾಢಾ, ಉತ್ತರಾಭಾದ್ರೆಗಳಲ್ಲೂ, ನೂತನಗೃಹಪ್ರವೇಶವು, ಶುಭಪ್ರದವು. ರೇವತಿ, ಜ್ಯೇಷ್ಠ ಅನೂರಾಧೆ, ಈ ನಕ್ಷತ್ರಗಳಲ್ಲಿ ತನ್ನ ಹಳೆ ಮನೆಯಲ್ಲಿ ಪ್ರವೇಶವು ಶುಭಕರವು. ಅಶ್ವಿನೀ, ಹಸ್ತ, ಶ್ರವಣ, ಪುಷ್ಯ ಇವುಗಳಲ್ಲಿ ನೂತನ ಗೃಹಪ್ರವೇಶವು, ಒಳ್ಳೇದಲ್ಲ. ಹಾಗೆಯೇ ಹಳೇಮನೆಯಲ್ಲಿಯೂ ಪ್ರವೇಶವು ಶುಭಕರವಲ್ಲ. ಮತ್ತು ಸೂರ್ಯನು, ಕುಂಭ, ಕಟಕ, ಕನ್ಯಾ ರಾಶಿಗಳಲ್ಲಿ ಇರುವಾಗ ಗೃಹಪ್ರವೇಶ ಕಾರ್ಯವನ್ನು ಮಾಡಲೇಕೂಡದು.

ಶ್ಲೋ॥ ಅರ್ಕಾನಿಲಾರಾದಿತಿದಸ್ರವಿಷ್ಣುಕಾಷ್ಟೇಪ್ರವಿಷ್ಟಂಸದನಂಚಿರಂಯತ್ರ । ಅಬ್ದತ್ರಯಾತತ್ಪರಹಸ್ತಯಾತಂಶೇಷೇಷುಧಿಷ್ಣ್ಯೇಷುಚವೃತ್ತ್ಯದಂಸ್ಯಾತ್ ॥

ಟೀ॥ ಹಸ್ತ, ಸ್ವಾತೀ, ಪುಷ್ಯ, ಪುನರ್ವಸು, ಅಶ್ವಿನೀ, ಶ್ರವಣ, ಈ ೬ ನಕ್ಷತ್ರಗಳಲ್ಲಿ ಪ್ರವೇಶಿಸಲ್ಪಟ್ಟ ಮನೆಯು ಮೂರು ವರ್ಷಗಳೊಳಗಾಗಿ ಅನ್ಯಾಕ್ರಾಂತವಾಗುತ್ತದೆ.

ಶ್ಲೋ|| ಸ್ಥಿರವಾರುಣಮೈತ್ರೇಂದುತ್ವಾಷ್ಟ್ರಪೌಷ್ಣವಸೂಡುಷು |
ಪ್ರವೇಶಶ್ಶ್ರೀಕರೋಜ್ಯೇಷ್ಠಪುಷ್ಯರ್ಕ್ಷೇಮಧ್ಯಮಸ್ಸ್ಮೃತಃ ||

ಟೀ|| ರೋಹಿಣೀ, ಉತ್ತರಾ, ಉಷಾ, ಉಭಾ, ಶತಭಿಷಕ್, ಅನೂರಾಧಾ, ಮೃಗಶೀರ್ಷ, ಚಿತ್ರಾ, ರೇವತೀ, ಧನಿಷ್ಠಾ, ಈ ನಕ್ಷತ್ರಗಳಲ್ಲಿ ಗೃಹಪ್ರವೇಶವು, ಸಂಪತ್ಪ್ರದವಾಗುತ್ತದೆ. ಜ್ಯೇಷ್ಠಾ ಪುಷ್ಯನಕ್ಷತ್ರ ಗೃಹಪ್ರವೇಶ ಮಧ್ಯಮವು.

ಶ್ಲೋ|| ಕೇಂದ್ರೇಷು ಸೌಮ್ಯೈರ್ಗುರುಶುಕ್ರಲಗ್ನೇ ಪಾಪೈಷು ಕೇಂದ್ರಾಷ್ಟಮವರ್ಜಿತೇಷು | ಗ್ರಾಮೇ ಸ್ಥಿರೇ ವಾ ಧನಮೀನಲಗ್ನೇ ಗೃಹಂ ವಿಶೇತ್ಸ್ವೇತಕರೇನಾಕೂಲೇ ||

ಟೀ|| ಲಗ್ನ, ಚತುರ್ಥ, ಸಪ್ತಮ, ದಶಮಸ್ಥಾನಗಳಲ್ಲಿ ಶುಭಗ್ರಹವಿರುವಾಗಲೂ, ಪಾಪಗ್ರಹಗಳು ಕೇಂದ್ರಗಳಲ್ಲೂ ಅಷ್ಟಮದಲ್ಲೂ ಇಲ್ಲವೆ ಇರುವಾಗಲೂ ಲಗ್ನವು ಧನುಸ್ಸು, ಮೀನ, ವೃಷಭ, ತುಲಾ, ಈ ನಾಲ್ಕು ರಾಶಿಗಳಲ್ಲೊಂದಾಗಿರುವಾಗಲೂ, ಅಥವಾ ಸ್ಥಿರಲಗ್ನದಲ್ಲೂ ಗ್ರಾಮಪ್ರವೇಶವನ್ನಾದರೂ, ಮಾಡಿದರೆ ಶುಭಕರವಾಗುತ್ತದೆ ಅಂದರೆ ಇಂತಹ ಗ್ರಹಬಲದಲ್ಲಿ ಅರಣ್ಯವನ್ನು ಪ್ರವೇಶಿಸಿದರೂ ಸೌಖ್ಯವಹುದು.

ಶ್ಲೋ|| ಜನ್ಮರ್ಕ್ಷೇ ಜನ್ಮಲಗ್ನೇ ವಾ ತಾಭ್ಯಾಮುಪಚಯೇಪಿ ವಾ | ಪ್ರವೇಶಃ ಪುತ್ರಧನದಸ್ತ್ವನ್ಯಥಾ ಶೋಕಹಾನಿದಃ ||

ಟೀ| ಜನ್ಮನಕ್ಷತ್ರದಲ್ಲಾಗಲಿ ಜನ್ಮ ಲಗ್ನದಲ್ಲಾಗಲಿ ಅವುಗಳಿಗೆ ೩-೬-೧೦-೧೧ನೇ ಸ್ಥಾನಗಳಲ್ಲಾದರೂ ಗೃಹಪ್ರವೇಶವು ಸಂತಾನ ಧನಗಳನ್ನು ಕೊಡುತ್ತದೆ, ಹಾಗಿಲ್ಲದೆ ಬೇರೆ ನಕ್ಷತ್ರ ಲಗ್ನಗಳಲ್ಲಿ ಗೃಹ ಪ್ರವೇಶ ಮಾಡಿದರೆ ಶೋಕ ಹಾನಿಗಳನ್ನುಂಟುಮಾಡುತ್ತದೆ.

ಶ್ಲೋ|| ವ್ಯಾಧಿಸ್ಸಾಧನದಶ್ಚೈವ ವಿತ್ತದೋ ಬಂಧುನಾಶಕಃ | ಸುತಹಾ ಶತ್ರುಹಾ ಸ್ತ್ರೀಘ್ನಶ್ಚ ಪ್ರಾಣಹಾ ಪೀಡನಪ್ರದಃ ||

ಟೀ || ರೋಗವೃದ್ಧಿಕರವು, ದಾರಿದ್ರ್ಯಪ್ರದವು, ಬಂಧುನಾಶಕರವು, ಸಂತಾನಹಾನಿಪ್ರದವು, ಮಿತ್ರನಾಶಕರವು, ಸ್ತ್ರೀನಾಶಕರವು, ಪ್ರಾಣಹರವು, ಕೇಡುಮಾಡುವದೂ ಆಗುತ್ತದೆ.

ಶ್ಲೋ|| ಸಿದ್ಧಿಸ್ಸ್ಯಾದ್ಧನಸ್ಯಾಶ್ಚ ವಾಧಯುಕ್ತಾಜ್ಜನ್ಮರಾಶಿತಃ ||

ಟೀ| ಜನ್ಮರಾಶಿಯಲ್ಲಿ ಮೊದಲ್ಗೊಂಡು ಗೃಹಪ್ರವೇಶವು ಕಾರ್ಯಸಿದ್ಧಿಕರವು ಧನಪ್ರದವು ಅಪನಿಂದ್ಯಾಪಮಾನಕರವು.